Swabhimani Sahakari

Pages : 40 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 22
Issue - 02
February - 2025


ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ
ರಜತ ಮಹೋತ್ಸವ 2025

## ಸತತ 8ನೇ ಬಾರಿಗೆ ಆಯವ್ಯಯ ಮಂಡನೆ ಮಾಡುವ ಮೂಲಕ ನೂತನ ದಾಖಲೆ

### 2025ರ ಕೇಂದ್ರ ಬಜೆಟ್ 5 ಗುರಿಗಳು

1) ಬೆಳವಣಿಗೆಯನ್ನು ವೇಗಗೊಳಿಸುವುದು 2) ಸಮಗ್ರ ಅಭಿವೃದ್ಧಿ 3) ಖಾಸಗಿ ವಲಯದ ಹೂಡಿಕೆಗಳು 4) ಗೃಹದ ಖರ್ಚು ವೆಚ್ಚಗಳನ್ನು ನಿಭಾಯಿಸುವುದು
5) ಭಾರತದಲ್ಲಿ ಮಧ್ಯಮ ವರ್ಗದವರಲ್ಲಿ ಹೆಚ್ಚಾಗುತ್ತಿರುವ ಖರ್ಚು ವೆಚ್ಚಗಳನ್ನು ನಿಭಾಯಿಸುವ ಶಕ್ತಿಯನ್ನು ಹೆಚ್ಚಿಸುವುದು

ಪ್ರಧಾನ ಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯ ಮೂಲಕ ಕೃಷಿ ಜಿಲ್ಲೆಗಳನ್ನು ಅಭಿವೃದ್ಧಿಪಡಿಸುವುದರಿಂದ 1.7 ಕೋಟಿ ರೈತರಿಗೆ ಪ್ರಯೋಜನ ದೊರೆಯಲಿದೆ.
ರೈತರಿಗೆ ಮತ್ತಷ್ಟು ಸಾಲವನ್ನು ನೀಡುವ ದೃಷ್ಟಿಯಿಂದ ಕಿಸಾನ್ ಕ್ರೆಡಿಟ್ ಕಾರ್ಡ್ ಮಿತಿಯನ್ನು ರೂ. 3 ಲಕ್ಷದಿಂದ ರೂ. 5 ಲಕ್ಷಕ್ಕೆ ಹೆಚ್ಚಳ

ಮುಂದಿನ ಐದು ವರ್ಷದಲ್ಲಿ 'ಸಬ್ಕಾ ವಿಕಾಸ್' ಸಾಕಾರಗೊಳ್ಳಲಿದೆ. ದೇಶದ ಆರ್ಥಿಕತೆಯು ವಿಶ್ವದ ಆರ್ಥಿಕತೆಗಳಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿದೆ.

5 ಲಕ್ಷ ಮಹಿಳೆಯರು, ಎಸ್ಸಿ, ಎಸ್ಟಿ ಉದ್ಯಮಿಗಳಿಗೆ ರೂ. 2 ಕೋಟಿಗಳ ಅವಧಿ ಸಾಲ ನೀಡಲಾಗುವುದು.


ಸಣ್ಣ ಹಾಗೂ ಅತೀ ಸೂಕ್ಷ್ಮ ಉದ್ಯಮಗಳಿಗೆ ರೂ. 5 ಕೋಟಿಯಿಂದ ರೂ. 10 ಕೋಟಿವರೆಗೆ ಉದ್ಯಮ ಆರಂಭಿಸಲು ಸಾಲ ಹಾಗೂ ಬೀದಿಬದಿ ವ್ಯಾಪರಿಗಳಿಗೆ ಯುಪಿಐ ಲಿಂಕ್ ಆಗಿರುವ ಕ್ರೆಡಿಟ್ ಕಾರ್ಡ್ ನೀಡಲಾಗುವುದು.

ಮುಂದಿನ ವಾರ ಹೊಸ ಆದಾಯ ತೆರಿಗೆ ಮಸೂದೆ ಮಂಡನೆ: ವೈಯಕ್ತಿಕ ಆದಾಯ ತೆರಿಗೆ ಸುಧಾರಣೆಗಳು ಮಧ್ಯಮ ವರ್ಗದವರ ಹೊರೆಯನ್ನು ಕಡಿಮೆ ಮಾಡುವತ್ತ ವಿಶೇಷ ಗಮನ. ರೂ. 12 ಲಕ್ಷದವರೆಗಿನ ಆದಾಯಕ್ಕೆ ಯಾವುದೇ ಆದಾಯ ತೆರಿಗೆ ತೆರಿಗೆ ಇಲ್ಲ.

ಕ್ಯಾನ್ಸರ್, ಅಪರೂಪದ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ 36 ಔಷಧಿಗಳನ್ನು ಮೂಲ ಕಸ್ಟಮ್ಸ್ ಸುಂಕದಿಂದ ವಿನಾಯಿತಿ.

ಭಾರತ್‌ನೆಟ್ ಪ್ರಾಜೆಕ್ಟ್ ಅಡಿ ಸರ್ಕಾರಿ ಶಾಲೆಗಳಿಗೆ ವೇಗದ ಇಂಟರ್ನೆಟ್ ಸೌಲಭ್ಯ, 50,000 ಅಟಲ್ ಟಿಂಕೆರಿಂಗ್ ಲ್ಯಾಬ್, ದೇಶದ ವಿದ್ಯಾರ್ಥಿಗಳಿಗೆ ಎಐ ಕಲಿಕೆಗೆ ಪ್ರೋತ್ಸಾಹ, ಐಐಟಿ, ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಳ.





ಫೆಬ್ರವರಿ 26,
ಮಹಾಶಿವರಾತ್ರಿ

ಸೌಹಾರ್ದ ಸಹಕಾರಿಗಳ ಸಂಖ್ಯೆ: 6442

ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1506



**ಜಿ. ನಂಜನಗೌಡ**

"ಸಹಕಾರ ಸೇ ಸಮೃದ್ಧಿ" ಘೋಷ ವಾಕ್ಯದೊಂದಿಗೆ ಪ್ರಾರಂಭವಾಗಿರುವ ಸಹಕಾರ ಚಳುವಳಿ ಬೃಹದಾಕಾರವಾಗಿ ಬೆಳೆದಿದೆ. ಕೇಂದ್ರ ಸಹಕಾರ ಸಚಿವಾಲಯ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಸಹಕಾರ ಕ್ಷೇತ್ರದ ಪ್ರಗತಿಯ ಹೊಸ ಅಧ್ಯಾಯ ಪ್ರಾರಂಭವಾಗಿದೆ ಎಂದು ಹೇಳಬಹುದು. ಸಹಕಾರ ಇಲಾಖೆ ಹಾಗೂ ಸಹಕಾರ ಸಂಘ ಸಂಸ್ಥೆಗಳು ಬಹಳ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಿವೆ.

# ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಮಹತ್ವದು.

**ಆತ್ಮೀಯ ಸಹಕಾರಿ ಬಂಧುಗಳಿಗೆ ಮಹಾಶಿವರಾತ್ರಿಯ ಶುಭ ಹಾರೈಕೆಗಳು.**

"ಸಹಕಾರ ಸೇ ಸಮೃದ್ಧಿ" ಘೋಷ ವಾಕ್ಯದೊಂದಿಗೆ ಪ್ರಾರಂಭವಾಗಿರುವ ಸಹಕಾರ ಚಳುವಳಿ ಬೃಹದಾಕಾರವಾಗಿ ಬೆಳೆದಿದೆ. ಕೇಂದ್ರ ಸಹಕಾರ ಸಚಿವಾಲಯ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಸಹಕಾರ ಕ್ಷೇತ್ರದ ಪ್ರಗತಿಯ ಹೊಸ ಅಧ್ಯಾಯ ಪ್ರಾರಂಭವಾಗಿದೆ ಎಂದು ಹೇಳಬಹುದು. ಸಹಕಾರ ಇಲಾಖೆ ಹಾಗೂ ಸಹಕಾರ ಸಂಘ ಸಂಸ್ಥೆಗಳು ಬಹಳ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರ ಸಮಾಜದ ಅತ್ಯಂತ ಕಡೆಯ ವ್ಯಕ್ತಿಗೂ ಸೇವೆ ಸಲ್ಲಿಸುವಂತಹ ಕ್ಷೇತ್ರ. ನೂರು ವರ್ಷಗಳ ಸುದೀರ್ಘ ಪಯಣದ ನಂತರವೂ ಸಹಕಾರ ಕ್ಷೇತ್ರದಡಿಯಲ್ಲಿ ದೇಶದ ಜನಸಂಖ್ಯೆ 145 ಕೋಟಿಯಲ್ಲಿ 30 ಕೋಟಿ ಸದಸ್ಯತ್ವವನ್ನು ಹೊಂದಿದೆ. ದೇಶದಲ್ಲಿ 8.5ಲಕ್ಷ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು, ಈ ಕ್ಷೇತ್ರದ ಶಕ್ತಿ ಸಾಮರ್ಥ್ಯ, ಸಾಧನೆ, ಸವಾಲುಗಳ ಹಾಗೂ ಅವಕಾಶಗಳ ಅವಲೋಕನ ಹಾಗೂ ಸುಸ್ಥಿರ ಅಭಿವೃದ್ಧಿಯ ಬಗ್ಗೆ ಚಿಂತನೆ ಅಗತ್ಯ ಎನಿಸುತ್ತದೆ.

ಸಾಧನೆ ದೃಷ್ಟಿಯಿಂದ ನೋಡಿದಾಗ ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದಲ್ಲಿಯೇ ದೊಡ್ಡದು. ಸಾಧನೆಗಳ ಸರಮಾಲೆಯನ್ನು ಕಾಣಬಹುದು. ಇಫ್ಕೋ, ಕ್ರಿಭ್ಕೋ, ಅಮೂಲ್, ಕ್ಯಾಮ್ಕೋ, ಮಾರ್ಕ್ಫೆಡ್ ದಂತಹ ಬೃಹತ್ ಸಹಕಾರಿ ಸಂಸ್ಥೆಗಳು, ವಿದೇಶಿ ಬ್ಯಾಂಕುಗಳನ್ನು ಮೀರಿಸುವಂತಹ ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಶ್ರಮಿಸಿದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿ ರೈತರಿಗೆ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕರಿಸಿದ ಹೈನುಗಾರಿಕಾ ಸಹಕಾರ ಸಂಘಗಳು ಹಾಗೇಯೆ ಇತರೆ ಹಲವಾರು ವಿಧವಾದ ಸಹಕಾರ ಸಂಘಗಳ ಸಾಧನೆಗಳು ಶ್ಲಾಘನೀಯ. ಆರೋಗ್ಯ, ಶೈಕ್ಷಣಿಕ, ಗೃಹನಿರ್ಮಾಣ, ಗ್ರಾಹಕ, ಮಾರಾಟ, ಕೈಗಾರಿಕಾ ಹಾಗೂ ಗ್ರಾಹಕ ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರ ಉತ್ತಮ ಸಾಧನೆಯನ್ನು ಮಾಡಿದೆ. ದೇಶದ ನಿರುದ್ಯೋಗ ನಿವಾರಣೆಯಲ್ಲಿ ಲಕ್ಷಾಂತರ ಯುವಕರಿಗೆ ಉದ್ಯೋಗ ನೀಡಿವೆ. ಅತ್ಯಂತ ಕಷ್ಟ ಕಾಲದಲ್ಲೂ ಉತ್ತಮ ಸಾಧನೆಗಳನ್ನು ಮಾಡಿ ಮತ್ತು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುತ್ತವೆ ಎಂಬ ವಿಶ್ವ ಸಂಸ್ಥೆಯ ಹಾಗೂ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಹೇಳಿಕೆಗಳಿಗೆ ಪುಷ್ಟಿಕೊಡುವಂತೆ ಈ ಸಹಕಾರ ಕ್ಷೇತ್ರದ ಅನೇಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತ ಬಂದಿವೆ. ಇದನ್ನು ಗಮನಿಸಿಯೇ ಕೇಂದ್ರ ಸರಕಾರ ಈ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡುವ ಮೂಲಕ ಈ ಕ್ಷೇತ್ರವನ್ನು ಅರ್ಥ ವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ಬರುವಂತೆ ಪ್ರಯತ್ನಿಸುತ್ತಿದೆ. ಇದಕ್ಕೆ ಎಲ್ಲಾ ಸಹಕಾರಿಗಳು, ಸಹಕಾರಿ ಸಂಸ್ಥೆಗಳು ಕೈಗೂಡಿಸುವುದು ಅಗತ್ಯ.

ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳು ಸಮಾಜಮುಖಿಯಾಗಿ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಅತ್ಯಂತ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಸದಸ್ಯರ ಹಿತ ಕಾಪಾಡುವುದು ಮತ್ತು ಸದಸ್ಯರಿಗೆ ಬೇಕಾಗುವ ಕಾರ್ಯಕ್ರಮಗಳನ್ನೇ ಅನುಷ್ಠಾನಗೊಳಿಸುವುದು. ಸಹಕಾರಿಯು ತನ್ನ ವ್ಯಾಪ್ತಿಯ ಆರ್ಥಿಕ ಸಂಪನ್ಮೂಲಗಳನ್ನು, ಮಾನವ ಸಂಪನ್ಮೂಲಗಳನ್ನು ಹಾಗೂ ಸ್ವಾಭಾವಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳುವುದರ ಜೊತೆಗೆ ಆರ್ಥಿಕ ಶಿಸ್ತು ಅಳವಡಿಸಿಕೊಂಡು ಉತ್ತಮ ಆರ್ಥಿಕ ಸಂಘಟನೆಯಾಗಿ ಕಾರ್ಯನಿರ್ವಹಿಸುವಂತಾದರೆ ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳು ಮಹತ್ವದ ಪಾತ್ರವನ್ನು ನಿರ್ವಹಿಸಿದಂತಾಗುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–26
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 27–32
**ಲೇಖನಗಳು :**
ಸಹಕಾರ ಸಂಸ್ಥೆಗಳ ನಡುವಿನ ಸಹಕಾರವನ್ನು ಬಲಪಡಿಸುವುದು .......... 35–36
ನಮ್ಮ ಸಾಮರ್ಥ್ಯದ ಮೇಲೆಯೆ ನಮಗಿರುವ ಅನುಮಾನ .......... 37–38
ಭಜನೆ–ಕೀರ್ತನೆ–ಧ್ಯಾನ ಜಾಗರಣೆಗಳ ಶಿವರಾತ್ರಿ .......... 39–40

# ಸಂಪಾದಕೀಯ

## ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವ ಆಚರಣೆಗೆ ಸಿದ್ಧರಾಗಿ. ಸಹಕರಿಸಿ. ಸಂಭ್ರಮಿಸಿ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ 01.01.2001 ರಿಂದ ಜಾರಿಗೆ ಬಂದಿರುವುದು ತಮಗೆ ತಿಳಿದ ವಿಷಯ. ಈ ಕ್ಷೇತ್ರ ದಿನಾಂಕ 01.01.2025ಕ್ಕೆ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯಾದ್ಯಂತ ಎಲ್ಲ ಸೌಹಾರ್ದ ಸಹಕಾರಿಗಳು ಜನವರಿ 1 ರಂದು ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡಿ ಇಂಡಿಯಾ ಬುಕ್ ಆಫ್ ರಿಕಾರ್ಡನಲ್ಲಿ ದಾಖಲೆಯಾಗಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಹೆಗ್ಗಳಿಕೆ. ಅನೇಕ ಸಹಕಾರಿ ಮುಖಂಡರುಗಳು, ಸಂಯುಕ್ತ ಸಹಕಾರಿಯ ಎಲ್ಲಾ ನಿರ್ದೇಶಕರು, ಅನೇಕ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಪದಾಧಿಕಾರಿಗಳು ಈ ಕಾರ್ಯಕ್ರಮವನ್ನು ಬಹಳ ಸಂತೋಷದಿಂದ ಸ್ವಾಗತಿಸಿದ್ದಾರೆ, ಶ್ಲಾಘಿಸಿದ್ದಾರೆ. ಇದೊಂದು ಅತ್ಯಂತ ಸಂತೋಷದ ಹಾಗೂ ಹೆಮ್ಮೆಯ ವಿಷಯ.

ಸೌಹಾರ್ದ ಸಹಕಾರಿಗಳು ಈ ರಜತ ಮಹೋತ್ಸವದ ಆಚರಣೆಯ ಸಂಭ್ರಮ, ಸಡಗರಗಳಿಗಾಗಿ ಸಿದ್ಧರಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಸ್ಥಿರಪಡಿಸಬೇಕು ಹಾಗೂ ಸುಸ್ಥಿರ ಗೊಳಿಸಬೇಕು. ಈ ಕ್ಷೇತ್ರದ ನಕಾರಾತ್ಮಕ ಭಾವನೆಗಳನ್ನು ಸಕಾರಾತ್ಮಕ ಭಾವನೆಗಳನ್ನಾಗಿ ಪರಿವರ್ತಿಸಿ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತ ಮುನ್ನಡೆಯುವ ಮಹೋತ್ಸವದ ವರ್ಷ ಇದಾಗಿದೆ.

ಈ ಅವಧಿಯಲ್ಲಿ ಸಂಯುಕ್ತ ಸಹಕಾರಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಜೊತೆಗೆ ಪ್ರತಿಯೊಂದು ಸಹಕಾರಿಯೂ ಸಹ ತನ್ನದೇ ಆದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು, ವೈಶಿಷ್ಟತೆಗಳನ್ನು ಹಲವು ವಿಧವಾದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ನಮ್ಮ ಈ ಕ್ಷೇತ್ರದ ಹೆಗ್ಗಳಿಕೆಯನ್ನು ಪ್ರಚಾರ ಮಾಡುವ ಈ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚುವ ಹಾಗೂ ಕಾರ್ಯಕ್ರಮಗಳಾಗಬೇಕು. ಅದಕ್ಕಾಗಿ ಎಲ್ಲಾ ಸೌಹಾರ್ದ ಸಹಕಾರಿಗಳು ಸಿದ್ಧರಾಗಿ, ಸಹಕರಿಸಿ ಹಾಗೂ ಸಂಭ್ರಮಿಸಿ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ ಈಗ 25 ವರ್ಷಗಳು. ಅನೇಕ ಮೈಲುಗಲ್ಲುಗಳನ್ನು ಸ್ಥಾಪಿಸುತ್ತ ದಾಪುಗಾಲು ಹಾಕುತ್ತ ಮುಂದೆ ಸಾಗಿದೆ. 1959ರ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಘಗಳು ಒಂದು ಶತಮಾನದಲ್ಲಿ ಸಾಧಿಸಿದನ್ನು ಸೌಹಾರ್ದ ಸಹಕಾರಿಗಳು ಅತೀ ಕಡಿಮೆ ಅವಧಿಯಲ್ಲಿ ಸಾಧಿಸಿ ಸಹಕಾರಿಗಳ ಮೆಚ್ಚಗೆಗೆ ಪಾತ್ರವಾಗಿವೆ. ನವಯುಗದ ಯುವ ಸಹಕಾರಿಗಳೆಂದೇ ಕರೆಯಲಾಗುತ್ತಿರುವ ಈ ಕ್ಷೇತ್ರದಲ್ಲಿ ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನೂ ಅನೇಕರು ಬರಬೇಕಿದೆ. ಅದಕ್ಕಾಗಿ ಸಹಕಾರ ತತ್ವಗಳು ಆಡಳಿತ ಪದ್ಧತಿ ಸಹಕಾರ ಕ್ಷೇತ್ರದ ಪ್ರಯೋಜನಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚು ಮಾಹಿತಿ ಕೊಡುವಂತೆ ಈ ರಜತ ಮಹೋತ್ಸವದ ಕಾರ್ಯಕ್ರಮಗಳು ನಡೆಯಬೇಕು. ಸಹಕಾರ ಕ್ಷೇತ್ರದ ಶಕ್ತಿಯನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಬೇಕು. ಸಾರ್ವಜನಿಕರು ಹೆಚ್ಚಾಗಿ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನವನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಈ ರಜತ ಮಹೋತ್ಸವ ಅದಕ್ಕಾಗಿ ಸಿದ್ಧರಾಗಿ, ಸಹಕರಿಸಿ, ಸಂಭ್ರಮಿಸಿ.

ಈ ಎಲ್ಲ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಯುಕ್ತ ಸಹಕಾರಿ ನೇತೃತ್ವವನ್ನು ವಹಿಸಲಿದೆ. ತಾವುಗಳು ಈ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೈಜೋಡಿಸಿ ಸಹಕರಿಸಲು ವಿನಂತಿಸಿದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಕರ್ಮಲೋಕ"

ಈ ಜಗತ್ತಿಗೆ 'ಕರ್ಮಲೋಕ' ಎಂದು ಕರೆಯುತ್ತಾರೆ. ಇಲ್ಲಿ ಕಾರ್ಯಗಳು ಸದಾ ನಡೆಯುತ್ತಿರುತ್ತವೆ. ವಸ್ತುವಿನ ಇರುವಿಕೆ, ಜೀವಿಗಳ ಇರುವಿಕೆ ಕಾರ್ಯದ ಒಂದು ಪ್ರವಾಹ, ಕಾರ್ಯವಿರದೇ ವಸ್ತುವಿಲ್ಲ. ಪ್ರತಿಕ್ಷಣದಲ್ಲೂ ಪ್ರತಿಯೊಂದು ವಸ್ತುವು ಕಾರ್ಯದಲ್ಲಿ ನಿರತವಾಗಿದೆ. ಸೂರ್ಯ, ಚಂದ್ರ, ಭೂಮಂಡಲ, ಅಣುಗಳು ಸದಾ ಕಾರ್ಯನಿರತವಾಗಿರುತ್ತದೆ. ಒಂದೊಂದು ಅಣುವಿನ ಕಣವೂ ಪ್ರಚಂಡ ವೇಗದಲ್ಲಿ ಚಲಿಸುತ್ತವೆ. ಮನುಷ್ಯನ ವೇಗ ತಾಸಿಗೆ ಹೆಚ್ಚೆಂದರೆ ಇಪ್ಪತ್ತು ಕಿಲೋ ಮೀಟರ್ ಇರಬಹುದು. ಆದರೆ ಸೂರ್ಯನ ಕಿರಣಗಳು ಒಂದು ಸೆಕೆಂಡಿಗೆ ಮೂರು ಲಕ್ಷ ಕಿಲೊಮೀಟರ್ ಓಡುತ್ತವೆ. ನಾವು ಒಂದಿಷ್ಟು ಕೆಲಸ ಮಾಡಿದರೆ ದಣಿಯುತ್ತೇವೆ. ಶಕ್ತಿಯ ಕೊರತೆ ಉಂಟಾಗುತ್ತದೆ. ಆದರೆ ಅಣುಗಳ ನಿರಂತರ ಕಾರ್ಯಕ್ಕೆ ಶಕ್ತಿ ಕೊಡುವವರಾರು? ಜಗತ್ತಿನ ಈ ಅದ್ಭುತ ಕಾರ್ಯದ ಮುಂದರೆ ಮಾನವನ ಕಾರ್ಯ ಏನೂ ಅಲ್ಲ. ಆ ಶಕ್ತಿಗೆ ಕ್ರಿಯಾಶಕ್ತಿ ಅಥವಾ ಸೃಜನಶಕ್ತಿ (Creative Force) ಎನ್ನುವರು.

ಶಕ್ತಿಗಳಲ್ಲಿ ಮೂರು ಪ್ರಕಾರಗಳು – ಬುದ್ಧ ಶಕ್ತಿ, ಭಾವಶಕ್ತಿ ಹಾಗೂ ಕ್ರಿಯಾಶಕ್ತಿ, ಈ ಮೂರು ಶಕ್ತಿಗಳಿಂದ ಜೀವನ ತುಂಬಿಹೋಗಿದೆ. ಎಲೆಯ ಮೇಲಿರುವ ಒಂದು ನೀರಿನ ಹನಿಗೆ ಮೇಲೇರುವ ಇಚ್ಛೆ. ಅದು ಸೂರ್ಯನ ಶಾಖದಿಂದ ಮೇಲೇರುತ್ತದೆ. ನಂತರ ಎಲ್ಲೋ ಹಿಮಗಳ ಬೆಟ್ಟದಲ್ಲಿ ಇಳಿದು ನದಿ ಮೂಲಕ ಸಮುದ್ರಕ್ಕೆ ಸೇರುತ್ತದೆ. ಈ ಕೆಲಸದ ಹಿಂದಿರುವುದು 'ದೇವಾತ್ಮ ಶಕ್ತಿ' (Devine Force). ಈ ಶಕ್ತಿ ಎಲ್ಲಿದೆ ಯಾರಿಗೂ ಗೊತ್ತಿಲ್ಲ, ಆದರೆ ಅದಿಲ್ಲದಿದ್ದರೆ ಏನೂ ನಡೆಯುವುದಿಲ್ಲ.

ಮೊಗ್ಗು ಅರಳಿ ಹೂವಾಗಲು ಇರುವ ಪ್ರೇರಕ ಶಕ್ತಿ ಯಾವುದು ಎಂಬುದು ಯಾರಿಗೂ ಗೊತ್ತಿಲ್ಲ. ಆ ಶಕ್ತಿಗೆ ವಿಶ್ವಶಕ್ತಿ ಎನ್ನುವರು. ಒಂದು ದೀಪ ಉರಿಯಬೇಕಾದರೆ ಎಣ್ಣೆ ಕಣಕಣವಾಗಿ ಬತ್ತಿಗುಂಟ ಮೇಲೇರಬೇಕು. ಒಂದಿಷ್ಟು ರಾಸಾಯನಿಕ ಕ್ರಿಯೆ ನಡೆದು ಅಣುಗಳು ಕಾಯಬೇಕು. ನಂತರ ಬೆಳಕು ಎಲ್ಲೆಡೆ ಚೆಲ್ಲುತ್ತದೆ. ಈ ಭೂಮಂಡಲವನ್ನು ಒಂದು ವಾಹನಕ್ಕೆ ಹೋಲಿಸಿದರೆ ಅದು ಸಾಗರ, ಬೆಟ್ಟಗಳನ್ನು ಹೊತ್ತು ಶರವೇಗದಲ್ಲಿ ಸೂರ್ಯನ ಸುತ್ತ ಸಾಗುತ್ತದೆ. ಅದರ ಹಿಂದಿರುವ ಶಕ್ತಿ ಯಾವುದು? ಆ ಶಕ್ತಿಯನ್ನು ಒಂದು ಕ್ಷಣ ಭಾವಿಸು. ನೀನು ಮಾಡಿದ/ಮಾಡುವ ಕಾರ್ಯಗಳ ಬಗ್ಗೆ ಯೋಚಿಸು. ಆ ಅದ್ಭುತ ಶಕ್ತಿಯೇ 'ಸಾಕಾರ ದೇವರು/ ಕ್ರಿಯಾಶೀಲ ದೇವರು. ಆ ಕ್ರಿಯೆಯಲ್ಲಿ ಸಂತಸವಿರುತ್ತದೆ. ಜೀವನದಲ್ಲಿ ನೆಮ್ಮದಿಯಿಂದಿರಬೇಕಾದರೆ ಮನುಷ್ಯ ಕೆಲಸ ಮಾಡಬೇಕು. ಮನುಷ್ಯ ಜಗತ್ತಿನಲ್ಲಿ ಒಂದು ದೀಪ. ಆ ದೀಪ ಉರಿದು ಎಲ್ಲೆಡೆ ಬೆಳಕು ಚೆಲ್ಲಬೇಕು.

ದೇವರು ಮಾನವನಿಗೆ ಅನೇಕ ಸಾಮರ್ಥ್ಯಗಳನ್ನು ನೀಡಿ ಈ ಭೂಮಿಗೆ ಕಳುಹಿಸಿದ. ಆ ಸಾಮರ್ಥ್ಯಗಳನ್ನು ಸದುಪಯೋಗಪಡಿಸಿಕೊಂಡು ನಮ್ಮನ್ನು ನಾವು ರೂಪಿಸಿಕೊಳ್ಳುವ ಸ್ವಾತಂತ್ರ್ಯ ನಮಗೆ ಕೊಟ್ಟ. ಆ ಸಾಮರ್ಥ್ಯಗಳು ಒಂದೇ ಆದರೂ ಒಬ್ಬ ಗಾಂಧಿ ಆದರೆ ಒಬ್ಬ ಹಿಟ್ಲರ್ ಆದ. ದೀಪದ ಕೆಲಸ ಬೆಳಕು ಚೆಲ್ಲಿ ದಾರಿ ತೋರಿಸುವುದೆಷ್ಟೇ!. ಆ ಬೆಳಕಿನಲ್ಲಿ ಎಲ್ಲಿ ಹೋಗಬೇಕೆಂಬುದನ್ನು ನಿರ್ಧರಿಸುವುದು ಮನುಷ್ಯನಿಗೆ ಬಿಟ್ಟಿದ್ದು. ದೇವರು ನೀಡಿರುವ ಸಾಮರ್ಥ್ಯಗಳನ್ನು ಚೆನ್ನಾಗಿ ಬಳಸಿಕೊಳ್ಳಬೇಕು.

ಮನುಷ್ಯ ದೇಹ, ಬುದ್ಧಿ, ಮಾತುಗಳನ್ನು ಸೃಜನಾತ್ಮಕ ಶಕ್ತಿಯನ್ನು ಬಳಸಿ ಸುಂದರವಾಗಿ ಬಾಳಬೇಕು. ಏನು ಇದೆಯೋ ಅದನ್ನು ಚೆನ್ನಾಗಿ ಬಳಸಬೇಕೆ ಹೊರತು ನಾಶ ಮಾಡಬಾರದು. ನಮ್ಮ ಪ್ರತಿಯೊಂದು ಕರ್ಮದ ಹಿಂದೆ ದೇವತಾ ಶಕ್ತಿ ಇದೆ. ಆದ್ದರಿಂದ ಆ ಕರ್ಮಗಳನ್ನು ಚೆನ್ನಾಗಿ ಮನಸಾ ಮಾಡಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 9113 | 1074 | 1596 | 837 | 12620 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 6508 | 810 | 1037 | 494 | 8849 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2605 | 264 | 559 | 343 | 3771 |
| ಜನವರಿ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 366 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 573 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6754 | 1148 | 2059 | 723 | 10684 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 974 | 210 | 477 | 149 | 1810 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5780 | 938 | 1582 | 574 | 8874 |
| ಜನವರಿ ತಿಂಗಳಿನಲ್ಲಿ ಒಟ್ಟು 117 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# Budget 2025 Highlights

## Budget 2025: No income-tax on income up to Rs. 12 lakh

The Finance Minister, Smt. Nirmala Sitharaman, has presented the Union Budget 2025 in the Parliament. This marks the first full budget of the Modi Government in its third term, following the Lok Sabha elections in 2024. The budget comes at a critical juncture, as the economy faces challenges such as slowing growth, a depreciating rupee, rising inflation, and significant corrections in the stock market. Against this backdrop, there were widespread expectations that the Government would introduce tax cuts to boost liquidity, stimulate consumption, and strengthen economic activity. With the Union Budget 2025 now unveiled, here are the key proposals and measures introduced by the Government to address these pressing issues and chart a path toward sustainable growth.

- No income tax on income up to Rs. 12 lakh
- No TCS on transactions related to the sale o goods to reduce compliance difficulties
- The threshold to collect TCS on remittances under LRS increased from Rs 7 lakhs to Rs 10 lakhs
- FM proposes to reduce compliance burden for small charitable trusts by increasing registration period form 5 yrs to 10 yrs
- Presumptive taxation scheme proposed for Non-residents providing services to residents
- The new income tax bill will carry forward the spirit of Nyaya in drafting, says FM
- Jan Vishwas Bill 2.0 will be introduced to decriminalise over 100 offences
- TDS limit under Section 194-I on rent increased from 2.4 lakhs to Rs. 6 lakhs
- Deduction limit for senior citizens on interest income has been doubled from Rs. 50,000 to Rs. 1,00,000
- Time limit to file updated return increased to 4 years
- Import of 35 additional capital goods for EV battery manufacturing would be exempt.
- Cobalt powder, scrap of lithium-ion battery, lead and zinc would be fully exempt.
- 9 more items added to duty-free inputs; no BCD on wet blue leather.
- New Income-tax Bill will be introduced next week.
- Custom tariff structure will be rationalised to promote exports and facilitate trade.
- Revamped Central KYC registry will be rolled out in 2025.
- 6 life-saving drugs brought under concessional 5% import duty
- FDI increased from 75% to 100% for Insurance Sector.
- Revised estimate of fiscal deficit is 4.8% of GDP
- A nuclear energy mission for R&D on small modular reactors will be set up with an outlay of Rs. 20,000 crore.
- The government will establish a Rs. 1 lakh crore Urban Challenge Fund to develop cities as growth hubs and enhance water and sanitation infrastructure.
- 75,000 seats to be created in the next 5 years in Medical Colleges.
- FM proposes to develop 50 tourist destination sites in the country in partnership with states.
- Developing at least 100 GW nuclear capacity

by 2047 is essential.

- FM allocates Rs. 60,000 crores for the Marine Sector with a special focus on Andaman and Lakshadweep.
- Investment and Turnover limits for all MSMEs will be enhanced 2.5 and 2 times, respectively.
- A new Fund of Funds with a corpus of Rs. 10,000 crore will be established to invest in start-ups.
- To boost credit to Micro industries, the government will provide customised credit cards with a limit of Rs 5 lakh. In the first year, 10 lakh such cards will be issued.
- The loan limit under the Kisan Credit Card (KCC) scheme will be increased from Rs. 3 lakh to Rs. 5 lakh.
- Credit guarantee cover to be enhanced for start-ups from Rs. 10 crore to Rs. 20 crore.
- 50,000 Atal Tinkering Labs to be set up in Govt schools in 5 years.
- A new scheme will be launched for 5 lakh women, SC, and ST first-time entrepreneurs to provide term loans of up to Rs. 2 crore over the next five years.
- The Clean-Tech Mission will be launched to boost clean-tech manufacturing, focusing on solar PV, EVs, and batteries.
- FM announces Social Security Scheme for Online Platform & Gig Workers.

## ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರಿಗೆ ಸಹಕಾರ ಸಚಿವ ಶ್ರೀ ಕೆ.ಎನ್ ರಾಜಣ್ಣ ಎಚ್ಚರಿಕೆ



**ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ-2004ಗೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ. ಈಗ ಗರಿಷ್ಠ 3 ವರ್ಷ ಶಿಕ್ಷೆ ವಿಧಿಸಬಹುದು. ಅದನ್ನು ಗರಿಷ್ಠ 10 ವರ್ಷಕ್ಕೆ ವಿಸ್ತರಿಸಲು ತಿದ್ದುಪಡಿ ತರಲು ಈಗಾಗಲೇ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದೇನೆ. ಅಧಿಕಾರಿಗಳು ತಿದ್ದುಪಡಿ ಸಂಬಂಧ ಸಿದ್ಧತೆ ನಡೆಸುತ್ತಿದ್ದಾರೆ. ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲು ಯೋಚಿಸಿದ್ದೇವೆ - ಸಹಕಾರ ಸಚಿವ ಕೆ.ಎನ್.ರಾಜಣ್ಣ**

**ಬೆಂಗಳೂರು :** ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹಾವಳಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಜಾರಿ ಮಾಡುವ ಕಸರತ್ತು ನಡೆಸುವ ಮಧ್ಯೆಯೇ ಇತ್ತ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರ ಮೇಲೆ 10 ವರ್ಷ ಶಿಕ್ಷೆ ವಿಧಿಸುವ ಕಠಿಣ ಕಾನೂನಿನ ತಿದ್ದುಪಡಿಗೆ ಸಹಕಾರ ಇಲಾಖೆಯೂ ಸಿದ್ಧತೆ ನಡೆಸಿದೆ.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಕಿರುಕುಳ ನೀಡುತ್ತಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಲೇವಾದೇವಿಗಾರರ ವಿರುದ್ಧ ನಿಯಂತ್ರಣ ಹೇರಲು ಇರುವ ಕಾನೂನನ್ನೇ ಪ್ರಯೋಗ ಮಾಡುವ ಇಂಕಿತ ವ್ಯಕ್ತಪಡಿಸಿದ್ದಾರೆ. ಸುಗ್ರೀವಾಜ್ಞೆ ತರುವ ಅಗತ್ಯತೆಯನ್ನು ಅವರು ಪ್ರಶ್ನಿಸಿದ್ದಾರೆ. ಇರುವ ಕಾನೂನನ್ನೇ ಇನ್ನಷ್ಟು ಕಠಿಣಗೊಳಿಸಿದರೆ ಅನಧಿಕೃತ ಹಣಕಾಸು ಸಂಸ್ಥೆಗಳು, ಲೇವಾದೇವಿಗಾರರ ಕಿರುಕುಳಕ್ಕೆ ಅಂಕುಶ ಹಾಕಬಹುದಾಗಿದೆ ಎಂಬುದು ಅವರ ವಾದವಾಗಿದೆ. ಈ ನಿಟ್ಟಿನಲ್ಲಿ ಅವರು ತಮ್ಮ ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುವ ಕಾಯ್ದೆಯನ್ನೇ ಇನ್ನಷ್ಟು ಬಲಪಡಿಸಲು ತಯಾರಿ ನಡೆಸಿದ್ದಾರೆ. ಮಿತಿಮೀರಿ ಬಡ್ಡಿ ವಿಧಿಸಿದರೆ 10 ವರ್ಷ ಕಠಿಣ ಸಜೆ: ರಾಜ್ಯದಲ್ಲಿ ಇನ್ನು ಮುಂದೆ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರು, ಪಾನ್ ಬ್ರೋಕರ್ಸ್, ಯಾವುದೇ ವ್ಯಕ್ತಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ತಿದ್ದುಪಡಿ ತರಲು ಸಹಕಾರ ಇಲಾಖೆ ಮುಂದಾಗಿದೆ. ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರು, ಪಾನ್ ಬ್ರೋಕರ್ಸ್ ಸೇರಿ ಇತರ ಸಹಕಾರ ಸಂಘಗಳ ಮೇಲೆ ನಿಯಂತ್ರಣ ಹೇರಲು ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ–2004 ಕಾಯ್ದೆ ಜಾರಿಯಲ್ಲಿದೆ. ಇದರಡಿ ಮಿತಿಮೀರಿ ಬಡ್ಡಿ ವಿಧಿಸುವವರ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ.

ಈಗಿರುವ ಗರಿಷ್ಠ 3 ವರ್ಷ ಶಿಕ್ಷೆ ಪ್ರಮಾಣವನ್ನು ತಿದ್ದುಪಡಿ ತಂದು ಗರಿಷ್ಠ 10 ವರ್ಷಗಳವರೆಗೆ ಹೆಚ್ಚಿಸಲು ಸಿದ್ಧತೆ ನಡೆಸಲಾಗುತ್ತಿದೆ. ಜೊತೆಗೆ ಒಂದು ಲಕ್ಷಕ್ಕೂ ಅಧಿಕ ದಂಡ ವಿಧಿಸುವ ನಿಟ್ಟಿನಲ್ಲಿ ಚರ್ಚೆ ನಡೆಸುತ್ತಿದೆ. ಈ ಸಂಬಂಧ ಸಹಕಾರ ಸಚಿವ ಕೆ.ಎನ್.ರಾಜಣ್ಣ ಈಗಾಗಲೇ ಸಹಕಾರ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿ, ಪೂರಕ ತಿದ್ದುಪಡಿ ತರಲು ಸಮಾಲೋಚನೆ ನಡೆಸಿದ್ದಾರೆ.

ಮುಂಬರುವ ಅಧಿವೇಶನದಲ್ಲಿ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ ಮಂಡನೆ ಮಾಡಲು

ಮುಂದಾಗಿದೆ. ಆ ಮೂಲಕ ಅಧಿಕ ಬಡ್ಡಿ ವಿಧಿಸುವವರ ಮೇಲೆ ಕಠಿಣ ಕಾನೂನು ಜಾರಿ ಮಾಡಲು ಸಹಕಾರ ಇಲಾಖೆ ತೀರ್ಮಾನಿಸಿದೆ.

ಹಾಲಿ ಕಾಯ್ದೆಯಲ್ಲಿರುವ ಅಂಶಗಳೇನು?: ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯ್ದೆ– 2004 ಮೂಲಕ ಅತಿಹೆಚ್ಚು ಬಡ್ಡಿ ವಿಧಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಆದರೂ ನಿರೀಕ್ಷಿತ ಕಡಿವಾಣ ಬಿದ್ದಿಲ್ಲ. ಅದಕ್ಕಾಗಿ ಇರುವ ಕಾಯ್ದೆಯಲ್ಲಿನ ಕಾನೂನಿಗೆ ಇನ್ನಷ್ಟು ಶಕ್ತಿ ತುಂಬಲು ಸಹಕಾರ ಇಲಾಖೆ ಚಿಂತನೆ ನಡೆಸಿದೆ.

ಹಾಲಿ ಇರುವ ಕಾಯ್ದೆ ಪ್ರಕಾರ ಸಾಲದ ಮೇಲೆ ಮಿತಿಮೀರಿ ಬಡ್ಡಿ ವಿಧಿಸುವುದಕ್ಕೆ ಕಡಿವಾಣ ಮತ್ತು ಲೇವಾದೇವಿದಾರರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಅನುವು ಮಾಡುತ್ತದೆ. ಜೊತೆಗೆ ಸಾಲ ವಸೂಲಿಗೆ ಕಿರುಕುಳ ನೀಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಂಶಗಳನ್ನು ಹೊಂದಿದೆ. ಜೊತೆಗೆ ಸಾಲಗಾರ ಯಾವ ವ್ಯಕ್ತಿಯಿಂದ ತಾನು ಸ್ವೀಕರಿಸಿದ ಸಾಲದ ಸಂಬಂಧದಲ್ಲಿ ಬಾಕಿ ಇರುವ ಹಣವನ್ನು, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ಅಡಿಯಲ್ಲಿ ರಾಜ್ಯ ಸರ್ಕಾರ ನಿಗದಿ ಮಾಡಿದ ದರದಲ್ಲಿ ಬಡ್ಡಿಯೊಡನೆ ಅಧಿಕಾರ ವ್ಯಾಪ್ತಿಯನ್ನುಳ್ಳ ನ್ಯಾಯಾಲಯದಲ್ಲಿ ಹಣವನ್ನು, ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ಸಾಲದ ತೀರಿಕೆಗಾಗಿ, ಸಾಲ ಮತ್ತು ಬಡ್ಡಿ ಹಣವನ್ನು ಠೇವಣಿ ಇಡಲಾಗಿದೆ ಎಂಬುದನ್ನು ದಾಖಲಿಸುವ ಅರ್ಜಿ ಸಹಿತ, ಠೇವಣಿ ಇಡಬಹುದಾಗಿದೆ.

ಈ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರ್ಜಿಯಲ್ಲಿ ನಮೂದಿಸಿದ ವ್ಯಕ್ತಿಗೆ, ನ್ಯಾಯಾಲಯ ನೀಡಬಹುದಾದಂತೆ, 15 ದಿನಗಳ ಅವಧಿಯ ಒಳಗೆ ತನ್ನ ಉತ್ತರಗಳನ್ನು ನೀಡುವಂತೆ ನಿರ್ದೇಶಿಸುತ್ತದೆ. ನ್ಯಾಯಾಲಯ ವಿಚಾರಣೆಯ ತರುವಾಯ ಮತ್ತು ಉಭಯ ಪಕ್ಷಗಳ ಹೇಳಿಕೆಗಳನ್ನು ಪರಿಗಣಿಸಿದ ನಂತರ ಸಾಲ ಮತ್ತು ಅದರ ಬಡ್ಡಿಯು ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ತೀರಿಕೆಯಾಗಿದೆ ಎಂದು ದಾಖಲು ಮಾಡಿ ಆದೇಶ ಹೊರಡಿಸಬಹುದಾಗಿದೆ.

ಸಾಲ ಅಥವಾ ಅದರ ಬಡ್ಡಿಯ ಮರುಪಾವತಿಗಾಗಿ ಬಲವಂತವಾಗಿ ತೆಗೆದುಕೊಂಡ ಚರ ಅಥವಾ ಸ್ಥಿರ ಸ್ವತ್ತು ಯಾವುದಾದರೂ ಇದ್ದರೆ, ಅದರ ಸ್ವಾಧೀನತೆಯನ್ನು ಪುನಃ ಒಪ್ಪಿಸಲು ನ್ಯಾಯಾಲಯ ಆದೇಶ ಹೊರಡಿಸಬಹುದಾಗಿದೆ. ಇನ್ನು ರಾಜ್ಯ ಸರ್ಕಾರ ನಿಗದಿ ಮಾಡಿದ ದರದಲ್ಲಿ ಮಾತ್ರವೇ ಸಾಲದ ಮೇಲೆ ಬಡ್ಡಿ ವಿಧಿಸುವ ಬಗ್ಗೆ ನ್ಯಾಯಾಲಯದ ಮುಂದೆ ಪ್ರಕಟಿಸಬೇಕು.

ಬಡ್ಡಿಯೂ ಸೇರಿದಂತೆ ಸಾಲದ ಇತ್ಯರ್ಥಕ್ಕಾಗಿ ಸಾಲಗಾರನು ದಾಖಲು ಮಾಡಿದ ಅರ್ಜಿಗೆ ಸಂಬಂಧಿಸಿ ರಾಜ್ಯ ಸರ್ಕಾರ ನಿಗದಿಪಡಿಸಿದ ಬಡ್ಡಿಯ ದರಕ್ಕಿಂತ ಹೆಚ್ಚಿನ ದರವನ್ನು ಸಾಲಗಾರನು ಸಂದಾಯ ಮಾಡಿದ್ದಲ್ಲಿ ಆ ಬಡ್ಡಿಯನ್ನು ಹೊಂದಾಣಿಕೆ ಮಾಡುವಂತೆ ಆದೇಶ ಹೊರಡಿಸಬಹುದು. ಸಾಲಗಾರ ಆತ್ಮಹತ್ಯೆ ಮಾಡಿಕೊಂಡಲ್ಲಿ, ಅಂತಹ ಆತ್ಮಹತ್ಯೆಗೆ ನಿಕಟಪೂರ್ವದಲ್ಲಿ ಸಾಲಗಾರ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನನ್ನು ಸಾಲ ನೀಡಿದ ವ್ಯಕ್ತಿ ಪೀಡಿಸಿದ್ದನೆಂಬುದು ರುಜುವಾದರೆ, ಸಾಲ ನೀಡಿದ ವ್ಯಕ್ತಿಯೇ ಕಾರಣ ಎಂದು ಭಾವಿಸಲಾಗುತ್ತದೆ.

ಹಾಲಿ ಕಾಯ್ದೆಯಲ್ಲಿ ಕಾನೂನು ಉಲ್ಲಂಘಿಸುವ ಅಥವಾ ಯಾವುದೇ ಸಾಲದ ವಸೂಲಿಗಾಗಿ ಸಾಲಗಾರನನ್ನು ಪೀಡಿಸುವ ಅಥವಾ ಪೀಡಿಸುವುದಕ್ಕಾಗಿ ಪ್ರೇರೇಪಿಸಿದ ವ್ಯಕ್ತಿಗೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 30 ಸಾವಿರ ರೂ.ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲಾಗುತ್ತಿದೆ.

---

**ತುಮಕೂರು** : ದಿನಾಂಕ 01.01.2025 ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು ಹಾಗೂ ಗದಗಿನಲ್ಲಿ ನಡೆಯುತ್ತಿರುವ ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್(ISSC) ಪುಣೆ ಇವರ 39ನೇ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮಾವೇಶದ ಆಮಂತ್ರಣ ಪತ್ರವನ್ನು ನೀಡಿ ಕಾರ್ಯಕ್ರಮಕ್ಕೆ ಆಮಂತ್ರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.

---

## ಪ್ರವರ್ತಕರ ಸಭೆ

**ಚಿಕ್ಕಮಗಳೂರು :** ಉದ್ದೇಶಿತ ಚಿಕ್ಕಮಗಳೂರು ಜಿಲ್ಲಾ ಫರ್ಟಿಲೈಸರ್ ಸಲಕರಣೆಗಳ ಮಾರಾಟಗಾರರ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕಮಗಳೂರು ಇದರ ಪ್ರವರ್ತಕರ ಸಭೆಯು ದಿನಾಂಕ : 23.01.2025ರಂದು ಸಂಘದ ಆವರಣದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಹೊಸ ಸಹಕಾರಿ ನೋಂದಣಿಯ ಪ್ರಕ್ರಿಯೆಯ ಕುರಿತು ಹಾಗೂ ಸೌಹಾರ್ದ ಕಾಯ್ದೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಶ್ರೀ ಶಿವಕುಮಾರ ಎ ರವರು ಮಾಹಿತಿಯನ್ನು ನೀಡಿದರು.

**ಮೈಸೂರು** : ದಿನಾಂಕ 17.12.2024ರಂದು ನಂಜನಗೂಡು ತಾಲ್ಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಠಿಯಿಂದ ಉದ್ದೇಶಿತ ಮಹರ್ಷಿ ವಾಲ್ಮೀಕಿ ಉನ್ನತ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮತ್ತು ಸೌಹಾರ್ದ ಚಳುವಳಿಯ ಕುರಿತು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ 10 ಜನ ಪ್ರವರ್ತಕರು ಭಾಗವಹಿಸಿದ್ದರು.

# ಮೂರು ದಿನಗಳ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಾರ್ಯಾಗಾರ

## ಲೆಕ್ಕಪರಿಶೋಧಕರ ಜವಾಬ್ದಾರಿ ಮಹತ್ವದ್ದು : ಜಿ. ನಂಜನಗೌಡ ಸಿಎ



ಉದ್ಘಾಟನೆ



ಗಣ್ಯರೊಂದಿಗೆ ಭಾಗವಹಿಸಿದ ಲೆಕ್ಕಪರಿಶೋಧಕರು

**ಬೆಂಗಳೂರು :** ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರ ಸಂಘ ಬೆಂಗಳೂರು ಇವರು ಸನ್ನದು ಲೆಕ್ಕಪರಿಶೋಧಕರು ಹಾಗೂ ಅವರ ಸಹಾಯಕ ಸಿಬ್ಬಂದಿಯವರಿಗಾಗಿ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 3 ದಿನಗಳ ತರಬೇತಿ ರೆಸಿಡೆನ್ಸಿಯಲ್ ರಿಫ್ರೆಷರ್ಸ್ ಕೋರ್ಸ್ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಯುತರು ಸಹಕಾರ ಸಂಸ್ಥೆಗಳನ್ನು ಲೆಕ್ಕ ಪರಿಶೋಧನೆ ಮಾಡುವ ಸಂದರ್ಭದಲ್ಲಿ ಅನೇಕ ವಿಷಯಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ. ವಿಶೇಷವಾಗಿ ಸಂಸ್ಥೆಯ ಸದಸ್ಯರ ಹಿತರಕ್ಷಣೆಗೆ ಆದ್ಯತೆ ನೀಡುವುದು ಅಗತ್ಯ. ಠೇವಣಾತಿಗಳ ಹೂಡುವಿಕೆ, ಸಾಲ ನಿಡುವಿಕೆಗಳಲ್ಲಿ ಪಾರದರ್ಶಕತೆ ಬಂಗಾರದ ಸಾಲ ನೀಡಿರುವ ಬಗ್ಗೆ ಗಮನ ಹರಿಸುವುದು, ಕಾನೂನು ಸಲಹೆಗಳನ್ನು ಪಡೆದಿರುವುದು, ವ್ಯಾಲ್ಯುಯೇಶನ್ ರಿಪೋರ್ಟ್‌ಗಳನ್ನು, ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ. ನಡೆದಿರುವ ಎಲ್ಲ ವ್ಯವಹಾರಗಳ ನೈಜತೆಯನ್ನು ಪರಿಶೀಲಿಸಿ ವರದಿ ನೀಡುವುದು ಅವಶ್ಯಕ ಎಂದು ತಿಳಿಸಿ ಹಲವಾರು ಉದಾಹರಣೆಗಳನ್ನು ನೀಡಿದರು. ಸದಸ್ಯರಿಗೆ ಸಲ್ಲಿಸಬಹುದಾದ ಸೇವೆಗಳ ನಿರ್ವಹಣೆಯ ಬಗ್ಗೆ ಪರಿಶೀಲಿಸಬೇಕಾಗುತ್ತದೆ. ಸಹಕಾರ ಸಂಸ್ಥೆಗಳು ಏಕ ವ್ಯಕ್ತಿಯ ಹತೋಟಿಯಲ್ಲಿರದಂತೆ, ಸಲಹೆಗಳನ್ನು ನೀಡಬೇಕಾಗುತ್ತದೆ. ಹಣ ದುರುಪಯೋಗ ಹಣಕಾಸು ಶಿಸ್ತು ಪಾಲಿಸಿರುವ ಹಾಗೂ ಪಾಲಿಸದಿರುವ ಬಗ್ಗೆ ವಿವರಗಳು ಇರಬೇಕು. ಲೆಕ್ಕಪರಿಶೋಧಕರು ಸಹಕಾರ ಕಾಯ್ದೆಗಳ ಹಾಗೂ ಸಂಬಂಧಿಸಿದ ಇತರೆ ಕಾಯ್ದೆಗಳ ಬಗ್ಗೆ ಜ್ಞಾನಹೊಂದಿರುವುದು ಅವಶ್ಯಕ ಮತ್ತು ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಸರಿಯಾಗಿ ತಿಳಿದಿರಬೇಕು ಎಂದು ತಿಳಿಸುತ್ತ ಈ ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಚಳುವಳಿ ಇನ್ನೂ ಹೆಚ್ಚಿನ ಮಹತ್ವದ ಪಾತ್ರ ನಿರ್ವಹಿಸಬೇಕಿದೆ. ಅದಕ್ಕಾಗಿ ಸಹಕಾರಿ ಚಳುವಳಿ ಉಳಿಯಬೇಕು ಮತ್ತು ಬೆಳೆಯಬೇಕು ಅದನ್ನು ಭದ್ರಪಡಿಸಲು ಲೆಕ್ಕ ಪರಿಶೋಧಕರ ಜವಾಬ್ದಾರಿ ಹೆಚ್ಚಿನದು. ನಾವೆಲ್ಲರೂ ಸೇರಿ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸೋಣ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪ್ರವೀಣ ಶೆಟ್ಟಿ, ಮಾನ್ಯ ಗೌರವ ಕಾರ್ಯದರ್ಶಿ ಲೆಕ್ಕಪರಿಶೋಧಕರ ಸಂಘ, ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಲೆಕ್ಕ ಪರಿಶೋಧನಾ ಇಲಾಖೆ ಅಪರ ನಿರ್ದೇಶಕರಾದ ಶ್ರೀಮತಿ ಸಾಧನಾ ಗಾಂವಕರ, ಪ್ರಾಂತೀಯ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ಪಿ.ಆರ್. ಸುರೇಶ, ಕಾರ್ಯಕ್ರಮ ಸಂಚಾಲಕರಾದ ಶ್ರೀ ರವಿಚಂದ್ರನ್‌ರವರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಪ್ರಾರ್ಥನೆಯ ನಂತರ ಸನ್ನದು ಲೆಕ್ಕಪರಿಶೋಧಕ ಶ್ರೀ ಏರ್ರಿಸ್ವಾಮಿಯವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕಾರ್ಯಕ್ರಮದಲ್ಲಿ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ, ಸಹಕಾರ ಸಂಸ್ಥೆಗಳು ಹಾಗೂ ಸನ್ನದು ಲೆಕ್ಕಪರಿಶೊಧಕರು ಸೇರಿದಂತೆ 90 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 07.02.2025 ರಂದು ತುಮಕೂರು ವಿಶ್ವವಿದ್ಯಾಲಯದಲ್ಲಿ ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 14.02.2025 ರಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಲಬುರಗಿಯಲ್ಲಿ ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
3. ದಿನಾಂಕ 18.02.2025 ಮತ್ತು 19.02.2025 ರಂದು ಪಟ್ಟಣ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳಿಗೆ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಮತ್ತು ದಿನಾಂಕ 19.02.2025 ಮತ್ತು 20.02.2025 ರಂದು ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ / ಹಿರಿಯ ಅಧಿಕಾರಿಗಳಿಗಾಗಿ ಉನ್ನತ ಮಟ್ಟದ ಕಾರ್ಯಾಗಾರವನ್ನು Sterling Holidays Karwar, Toll Naka, 17, National Highway, Sadashivgad, Karwar, ಇಲ್ಲಿ ಹಮ್ಮಿಕೊಳ್ಳಲಾಗಿದೆ.

## ಸಂಯುಕ್ತ ಸಹಕಾರಿಯ ಸಂಪನ್ಮೂಲ ವ್ಯಕ್ತಿಗಳ ಸಭೆ

## ರಜತಮಹೋತ್ಸವ ಆಚರಣೆಯ ವರ್ಷದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಿಗೆ ಸಂಪೂರ್ಣ ಸಹಕಾರಕ್ಕೆ ಸಂಪನ್ಮೂಲ ವ್ಯಕ್ತಿಗಳ ನಿಲುವು.

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮದಲ್ಲಿ ಉಪನ್ಯಾಸಕಾರರಾಗಿ ಭಾಗವಹಿಸಿ ವಿವಿಧ ವಿಷಯಗಳ ಬಗ್ಗೆ ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯ ಸಂಗ್ರಹಣೆ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದಕ್ಕಾಗಿ ಮಾರ್ಗದರ್ಶನ ಪಡೆಯುವುದಕ್ಕಾಗಿ ಆನ್‌ಲೈನ್‌ನಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಪ್ರಭುದೇವರವರು, ಶ್ರೀಮತಿ ಶೈಲಜಾ ತಪಲಿಯವರು, ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಸ ಇಂಡಿಯವರು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೇರಿದಂತೆ 69 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ತಮ್ಮ ಪರಿಚಯ ಹಾಗೂ ತರಬೇತಿ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯ ಹಾಗೂ ಮಾರ್ಗದರ್ಶನಗಳನ್ನು ನೀಡಿದರು. ಮತ್ತು ಸಂಯುಕ್ತ ಸಹಕಾರಿಯ ರಜತಮಹೋತ್ಸವದ ಕಾರ್ಯಕ್ರಮಗಳ ಯಶಸ್ಸಿಗೆ ಸಂಪೂರ್ಣ ಸಹಕಾರ ವ್ಯಕ್ತಪಡಿಸಿದರು.

**ಸಂಪನ್ಮೂಲ ವ್ಯಕ್ತಿಗಳ ಕ್ರೋಢೀಕೃತ ಅಭಿಪ್ರಾಯಗಳು.**

1. ವಾರ್ಷಿಕ ತರಬೇತಿ ಕ್ಯಾಲೆಂಡರ್ ಪ್ರಕಟಿಸಬೇಕು.
2. ತರಬೇತಿ ಅಗತ್ಯತೆಯನ್ನು ಪಟ್ಟಿ ಮಾಡಬೇಕು.
3. ಮಾಸ್ಟರ್ ತರಬೇತಿದಾರರನ್ನು ಗುರುತಿಸಬೇಕು ಮತ್ತು ತರಬೇತಿ ನೀಡಬೇಕು.
4. ಪೂರ್ಣ ವರ್ಷ ನಡೆದ ತರಬೇತಿ ಕಾರ್ಯಕ್ರಮಗಳ ಪುಸ್ತಕ ಪ್ರಕಟಿಸಬೇಕು.
5. ತರಬೇತಿ ಸ್ಥಳ ಹಾಗೂ ಉತ್ತಮ ಪರಿಸರದ ಆಯ್ಕೆ ಮಾಡಬೇಕು.
6. ವಿಭಾಗವಾರು ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
7. ತರಬೇತಿ ಪಡೆಯುವವರು ವಿವಿಧ ವರ್ಗದವರನ್ನು ಒಟ್ಟಿಗೆ ಸೇರಿಸಬಾರದು. ಪ್ರತ್ಯೇಕ ತರಬೇತಿಗಳನ್ನು ಹಮ್ಮಿಕೊಳ್ಳುವುದು.
8. ಗ್ರಾಮ ಹಾಗೂ ನಗರ ಪ್ರದೇಶಗಳ ಜನರ ತಿಳುವಳಿಕೆ, ಬೇಕು ಬೇಡಗಳು ಹಾಗೂ ಜ್ಞಾನದ ಮಟ್ಟ ಬೇರೆ ಬೇರೆ ಯಾಗಿರುತ್ತದೆ. ಅದರಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
9. ಸದಸ್ಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
10. ಕೋ-ಆಪರೇಟಿವ್ ಗರ್ವನನ್ಸ್ ಬಗ್ಗೆ ತರಬೇತಿ ನೀಡುವುದು
11. ವಿಷಯ ತಜ್ಞರ ವಾಟ್ಸಾಪ ಗ್ರೂಪ ಮಾಡಬೇಕು,
12. ತರಬೇತಿ ಕಾರ್ಯಕ್ರಮಗಳಲ್ಲಿ ಆಧುನಿಕ ತಂತ್ರಜ್ಞಾನ, ಸೈಬರ ಸೆಕ್ಯುರಿಟಿ, ಕೌಶಲ್ಯ ಅಭಿವೃದ್ಧಿ, ಸಂಶೋಧನೆ, ಮೌಲ್ಯಮಾಪನ ಮತ್ತು ಸಾಫ್ಟವೇರ್, ತರಬೇತಿಗಳಿಗೆ ಆದ್ಯತೆ ನೀಡುವುದು.
13. ಗ್ರಾಹಕ ಸೇವೆಗಳು, ದಾಖಲಾತಿಗಳ ನಿರ್ವಹಣೆ, ಸಾಲ ನೀತಿ, ಪತ್ತು ನಿರ್ವಹಣೆ, ಕಾಸ್ಟ ಆಫ್ ಫಂಡ್ ಮ್ಯಾನೆಜಮೆಂಟ್, ಬ್ಯಾಲನ್ಸ ಶೀಟ್ ಅನಾಲಿಸಿಸ್, ರೇಶಿಯೋ ಅನಾಲಿಸಿಸ್, ಆಂತರಿಕ ನಿರ್ವಹಣೆ, ಆಂತರಿಕ ಸಂಬಂಧಗಳ ನಿರ್ವಹಣೆ, ಮಾನವೀಯ ಮೌಲ್ಯಗಳ ನಿರ್ವಹಣೆ, ಕಿರು ಹಣಕಾಸು ಯೋಜನೆಗಳು, ಸ್ವಸಹಾಯ ಗುಂಪುಗಳ ಕಾರ್ಯನಿರ್ವಹಣೆ ಇತ್ಯಾದಿ.
14. ಡಿ.ಸಿ.ಬಿ.ಎಮ್ ಕೋರ್ಸಿನ ಪಠ್ಯಕ್ರಮವನ್ನು ಪ್ರತಿವರ್ಷ ಪರಿಷ್ಕರಿಸಬೇಕು.
15. ಡಿ.ಸಿ.ಬಿ.ಎಮ್ ಅಥವಾ ಇನ್ನಾವುದೇ ತರಬೇತಿ ಕಾರ್ಯಕ್ರಮದ ಕೊನೆಯಲ್ಲಿ ಕ್ವಿಜ್ ವ್ಯವಸ್ಥೆಮಾಡಿದರೆ ಶಿಬಿರಾರ್ಥಿಗಳು ಹೆಚ್ಚು ಜಾಗರೂಕರಾಗಿ ಭಾಗವಹಿಸಲು ಅನುಕೂಲವಾಗುತ್ತದೆ.
16. ತರಬೇತಿ ಕಾರ್ಯಕ್ರಮಗಳ ನಂತರ ತರಬೇತಿ ಕಾರ್ಯಕ್ರಮದ ಪರಿಣಾಮ, ಪ್ರಭಾವ ಆಗಿರಬಹುದಾದ ಬದಲಾವಣೆಗಳ ಮೌಲ್ಯಮಾಪನ ಹಮ್ಮಿಕೊಳ್ಳಬೇಕು.
17. 10 ದಿನಗಳ ತರಬೇತಿ ಕಾರ್ಯಕ್ರಮಗಳನ್ನು ವರ್ಷಕ್ಕೆ 2 ಬಾರಿ 5 ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಪ್ರತಿ ವಿಭಾಗದಲ್ಲಿ ಒಂದೊಂದರಂತೆ ನಡೆಸಬೇಕು. .
18. ಅಧ್ಯಯನ ಸಾಹಿತ್ಯಗಳು ಸಂಯುಕ್ತ ಸಹಕಾರಿಯ ವೆಬ್ ಸೈಟ್ ನಲ್ಲಿ ಲಭ್ಯವಾಗಬೇಕು.
19. ವಿವಿಧ ವಿಷಯಗಳ ಬಗ್ಗೆ ಪ್ರಾಯೋಗಿಕ ವರ್ಕಶಾಪ್‌ಗಳು ಹೆಚ್ಚಬೇಕು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡುವ ಹಾಗೂ ಅಧ್ಯಯನ ಮಾಡುವ ತರಬೇತಿಗಳನ್ನು ಹಮ್ಮಿಕೊಳ್ಳಬೇಕು.
20. ಉತ್ತಮ ತರಬೇತಿ ವ್ಯವಸ್ಥೆಗಳನ್ನು ಹೊಂದುವುದು ಅಗತ್ಯ.
21. ನೂತನ ರಾಷ್ಟ್ರೀಯ ಸಹಕಾರ ನೀತಿಗೆ ಅನುಗುಣವಾಗಿ ತರಬೇತಿ

ಕಾರ್ಯಕ್ರಮಗಳನು ಹಮ್ಮಿಕೊಳ್ಳುವುದು.

22. ಧನಾತ್ಮಕ ವಿಷಯಗಳಿಗೆ ಆದ್ಯತೆ ನೀಡುವುದು ಮತ್ತು ನಕಾರಾತ್ಮಕ ವಿಷಯಗಳನ್ನು ಹೋಗಲಾಡಿಸುವ ವಿಷಯಗಳ ಬಗ್ಗೆ ತರಬೇತಿ ನೀಡುವುದು.

23. ರಿಸರ್ವ ಬ್ಯಾಂಕಿನ ಧ್ಯೇಯ ಧೋರಣೆಗಳು, ಬ್ಯಾಂಕಿಂಗ್ ಕ್ಷೇತ್ರದ ಮಹತ್ವದ ಬದಲಾವಣೆಗಳು ಮುಂತಾದ ವಿಷಯಗಳು ಇರಬೇಕು.

24. ಸಂಪನ್ಮೂಲ ವ್ಯಕ್ತಿಗಳ ಗೌರವ ಸಂಭಾವನೆಯನ್ನು ಪರಿಷ್ಕರಿಸಬೇಕು.

25. ತರಬೇತಿದಾರರ ತರಬೇತಿ ಕಾರ್ಯಕ್ರಮ ಏರ್ಪಡಿಸಬೇಕು

26 ಆಂತರಿಕ ತರಬೇತಿದಾರರಿಗೆ ಹೆಚ್ಚಿನ ತರಬೇತಿ ಹಾಗೂ ಅವಕಾಶ ನೀಡಬೇಕು.

27. ಉದ್ಯೋಗಾಭಿವೃದ್ಧಿ ತರಬೇತಿಗಳು ಪ್ರಾಯೋಗಿಕಗಳನ್ನು ಅಳವಡಿಸುವುದು ಅಗತ್ಯ.

28. ತರಬೇತಿ ಮ್ಯಾನ್ಯುಯಲ್ ಸಿದ್ಧಪಡಿಸುವುದು ಅಗತ್ಯ.

29. ಸಂಪನ್ಮೂಲ ವ್ಯಕ್ತಿಗಳ ಆನ್ ಲೈನ್ ಸಭೆಗಳನ್ನು ಆಗಾಗ ಏರ್ಪಡಿಸುತ್ತಿರಬೇಕು.

30. ಯುವಕರಿಗಾಗಿ ಹೆಚ್ಚಿನ ಸಹಕಾರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

31. ರಜತಮಹೋತ್ಸವದ ಅಂಗವಾಗಿ ಹಾಗೂ ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ಅಭಿವೃದ್ಧಿಗಾಗಿ ತರಬೇತಿ ವಿಷಯಗಳ ಆಯ್ಕೆ ಮಾಡಿ ಸಣ್ಣ ಕೈಪಿಡಿಗಳನ್ನು ಪ್ರಕಟಿಸುವುದು.

32. ವಿಭಾಗವಾರು ಸಂಪನ್ಮೂಲ ವ್ಯಕ್ತಿಗಳ ಪಟ್ಟಿ ಸಿದ್ಧಪಡಿಸಿ.

33. ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಹಾಗೂ ವಿಭಾಗೀಯ ಕಾರ್ಯಕ್ರಮಗಳ ವಿವರ ಸಂಪನ್ಮೂಲ ವ್ಯಕ್ತಿಗಳಿಗೆ ತಿಳಿಸಿ.

**ಪ್ರಾರಂಭದಲ್ಲಿ ಶ್ರೀ ಶಿವಕುಮಾರ ಬಿರಾದಾರರವರು ಸ್ವಾಗತ ಕೋರಿದರು.**

**ಪ್ರಾಸ್ತಾವಿಕ :** ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಯಶಸ್ವಿಗೆ ಉಪನ್ಯಾಸಗಳನ್ನು ನೀಡಿ ಸಹಕರಿಸುತ್ತಿರುವ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೆ ಸಂಯುಕ್ತ ಸಹಕಾರಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅವರೆಲ್ಲರನ್ನು ತಮ್ಮ ತಮ್ಮೊಳಗೆ ಪರಿಚಯಿಸುವ ಹಾಗೂ ವಿಚಾರ ವಿನಿಮಯ ಮಾಡುವ ಮತ್ತು ರಜತ ಮಹೋತ್ಸವ ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಪರಿಣಾಮಕಾ–ರಿಯಾಗಿ ಮಾಡುವಂತೆ ಸಲಹೆ ಹಾಗೂ ಮಾರ್ಗದರ್ಶನ ಪಡೆಯುವುದಕ್ಕಾಗಿ ಈ ಸಭೆಯನ್ನು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

**ಅಧ್ಯಕ್ಷರ ಭಾಷಣ :** ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಸಭೆಯಲ್ಲಿ ಭಾಗವಹಿಸಿ ತಮ್ಮ ಅಮೌಲ್ಯವಾದ ಸಮಯವನ್ನು ನಮಗೆ ನೀಡುವುದರ ಜೊತೆಗೆ ಉತ್ತಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿದ್ದೀರಿ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳನ್ನು ಇನ್ನೂ ಗುಣಾತ್ಮಕವಾಗಿ ನಡೆಸಿಕೊಂಡು ಹೋಗಲು ನಿಮ್ಮ ಸಲಹೆ ಮಹತ್ವದ್ದಾಗಿವೆ. ನಾವೆಲ್ಲರೂ ಸೇರಿ ಈ ಸಹಕಾರ ಚಳುವಳಿಯ ಅಭಿವೃದ್ಧಿಗೆ ಅಗತ್ಯವಾಗುವ ಕಾರ್ಯವನ್ನು ಮಾಡೋಣ ತಾವು ನೀಡಿದ ಸಲಹೆಗಳನ್ನು ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿ ಹಾಗೂ ಆಡಳಿತ ಮಂಡಳಿಯವರ ಗಮನಕ್ಕೆ ಈ ಎಲ್ಲ ವಿಷಯಗಳನ್ನು ಚರ್ಚಿಸಿ ಸೂಕ್ತ ನಿರ್ಧಾರ ಮಾಡಿ ಮುಂದಿನ ದಿನಗಳಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಕ್ರಮಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಗುಣಾತ್ಮಕವಾಗಿ ನಡೆಸಲು ತಾವು ಸಹಕರಿಸಬೇಕು ಎಂದು ಹೇಳಿದರು.

**ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯ :** ಕಾರ್ಯಕ್ರಮ ಸರಿಯಾದ ಸಮಯಕ್ಕೆ ಪ್ರಾರಂಭವಾಗಿ ಸರಿಯಾದ ಸಮಯಕ್ಕೆ ಮುಕ್ತಾಯವಾಗುವುದರ ಜೊತೆಗೆ ಅತ್ಯಂತ ಮಹತ್ವದ ಸಲಹೆಗಳು ಬೇರೆ ಬೇರೆ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳ ಪರಿಚಯಗಳಿಗೆ ಅವಕಾಶವಾಗಿದೆ. ಇದೊಂದು ಉತ್ತಮ ಸಭೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳಿಗೆ ಧನ್ಯವಾದಗಳನ್ನು ಸಂಪನ್ಮೂಲ ವ್ಯಕ್ತಿಗಳು ತಿಳಿಸಿದರು.

ಶ್ರೀಮತಿ ಸವಿತಾ ಎನ್. ಇ. ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಜನವರಿ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 06 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಜನವರಿ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

# "ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ



ಉದ್ಘಾಟನೆ



ಸಂವಾದ ಕಾರ್ಯಕ್ರಮ

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರ ಸಹಯೋಗದೊಂದಿಗೆ ದಿನಾಂಕ 09.01.2025ರಂದು "ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಏರ್ಪಡಿಸಲಾಗಿತ್ತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರ ಸಹಯೋಗದೊಂದಿಗೆ ದಿನಾಂಕ 09.01.2025 ರಂದು ಬೆಳಿಗ್ಗೆ 10.00 ಗಂಟೆಗೆ ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ ಬಂಗೇರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಎನ್.ಕೆ. ಲೋಕನಾಥ್, ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೆರವೇರಿಸಿದರು.

### ಉದ್ಘಾಟನಾ ಕಾರ್ಯಕ್ರಮ

**ಅಧ್ಯಕ್ಷತೆ :** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ, ಸಿ.ಎ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು.

**ಮುಖ್ಯ ಅತಿಥಿಗಳು :** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ, ಡಾ. ಹೆಚ್.ವಿ. ರಾಜೀವ್, ಮಾನ್ಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್, ಮೈಸೂರು. ಹಾಗೂ ಪ್ರೊ. ಸಿ. ಗುರುಸಿದ್ದಯ್ಯ ಮಾನ್ಯ ಇತಿಹಾಸ ಪ್ರಾಧ್ಯಾಪಕರು, ವಿದ್ಯಾರ್ಥಿ ಕ್ಷೇಮಾಪಾಲನಾಧಿಕಾರಿ, ವಿ.ವಿ.ಮೈಸೂರು ಡಾ. ಎ.ಆರ್. ಪ್ರಸನ್ನ ಕುಮಾರ್ ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಡಾ. ನವಿತ ತಿಮ್ಮಯ್ಯ ಮಾನ್ಯ ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು ಅರ್ಥಶಾಸ್ತ್ರ ಹಾಗೂ ಸಹಕಾರ ಅಧ್ಯಯನ ವಿಭಾಗ, ಐಕ್ಯೂಎಸಿ ಸಂಯೋಜಕರು, ಮೈಸೂರು ವಿ.ವಿ. ಮೈಸೂರು ಇವರುಗಳು ಉಪಸ್ಥಿತರಿದ್ದರು.

**ಸನ್ಮಾನ :** ಸಂಯುಕ್ತ ಸಹಕಾರಿಯ ವತಿಯಿಂದ ಮೈಸೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಗೆ ಸನ್ಮಾನಿಸಲಾತು.

**ಪ್ರಧಾನ ವಿಷಯ ಮಂಡನೆ:** ಡಾ. ಎ.ಆರ್. ಶ್ರೀನಾಥ್, ಮಾನ್ಯ ಸಂದರ್ಶಕ ಪ್ರಾಧ್ಯಾಪಕರು, ಎಸ್.ಬಿ.ಎಂ. ಪೀಠ, ಮೈಸೂರು ವಿಶ್ವವಿದ್ಯಾನಿಲಯ ಮಾನ್ಯ ನಿರ್ದೇಶಕರು (ನಿ) ಎನ್.ಸಿ.ಯು.ಐ. ನವದೆಹಲಿ ಇವರು ಯುವಕರು ಮತ್ತು ಸಹಕಾರ ವಿಷಯದ ಕುರಿತು ಉಪನ್ಯಾಸ ನೀಡಿದರು.

**ಸಂವಾದ ಕಾರ್ಯಕ್ರಮ :** ಸಂವಾದ ಕಾರ್ಯಕ್ರಮವು ಬೆಳಿಗ್ಗೆ 11.30 ರಿಂದ 1.30ರ ವರೆಗೆ ಜರುಗಿತು. ವಿಷಯ ನಿರ್ವಹಣೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನಿರ್ವಹಿಸಿದರು.

**ಅಧ್ಯಕ್ಷತೆ :** ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ನವಿತ ತಿಮ್ಮಯ್ಯ, ಮಾನ್ಯ ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು ಅರ್ಥಶಾಸ್ತ್ರ ಹಾಗೂ ಸಹಕಾರ ಅಧ್ಯಯನ ವಿಭಾಗ, ಐಕ್ಯೂಎಸಿ ಸಂಯೋಜಕರು, ಮೈಸೂರು ವಿ.ವಿ. ಮೈಸೂರು ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ

ಶ್ರೀ ಜಿ. ನಂಜನಗೌಡ, ಸಿ.ಎ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು.

**ಸಂಪನ್ಮೂಲ ವ್ಯಕ್ತಿಗಳು :** ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಂ. ರವಿ, ಮಾನ್ಯ ಸಹಕಾರ ಸಂಘಗಳ ಜಂಟಿ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮೈಸೂರು, ಪ್ರೊ. ಮಹೇಶ ಎಂ, ಮಾನ್ಯ ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮೈಸೂರು, ಪ್ರೊ. ದಿನೇಶ ಎಂ.ವಿ, ಮಾನ್ಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮೈಸೂರು, ಶ್ರೀ ಕೆ. ನರಸಿಂಹಮೂರ್ತಿ, ಮಾನ್ಯ ಬ್ಯೂರೋ ಮುಖ್ಯಸ್ಥರು, ಪ್ರಜಾವಾಣಿ ದಿನಪತ್ರಿಕೆ, ಮೈಸೂರು ಡಾ. ಎ.ಆರ್. ಶ್ರೀನಾಥ್, ಮಾನ್ಯ ಸಂದರ್ಶಕ ಪ್ರಾಧ್ಯಾಪಕರು, ಎಸ್.ಬಿ.ಎಂ. ಪೀಠ, ಮೈಸೂರು ವಿಶ್ವವಿದ್ಯಾನಿಲಯ. ಮಾನ್ಯ ನಿರ್ದೇಶಕರು (ನಿ) ಎನ್.ಸಿ.ಯು.ಐ. ನವದೆಹಲಿ ಇವರುಗಳು ಉಪಸ್ಥಿತರಿದ್ದರು.

### "ಕ್ಯಾಂಪಸ್–ಕೋ–ಆಪರೇಟಿವ್" ಪ್ರವರ್ತಕರ ಸಭೆ

ಮಧ್ಯಾಹ್ನ 2.00 ರಿಂದ 4.00ರ ವರೆಗೆ ಉದೇಶಿತ "ಕ್ಯಾಂಪಸ್–ಕೋ–ಆಪರೇಟಿವ್" ಪ್ರವರ್ತಕರ ಸಭೆ ಮತ್ತು ಸೌಹಾರ್ದ ಸಹಕಾರಿ ನೋಂದಣಿ ವಿಧಾನ ಕುರಿತು ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ., ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ ಬಂಗೇರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ ಮುಂತಾದವರು ಉಪಸ್ಥಿತರಿದ್ದರು.

### ಡಾ. ನವಿತ ತಿಮ್ಮಯ್ಯ, ಮುಖ್ಯ ಪ್ರವರ್ತಕರಾಗಿ ಆಯ್ಕೆ

ಡಾ. ನವಿತ ತಿಮ್ಮಯ್ಯ, ಮಾನ್ಯ ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು ಅರ್ಥಶಾಸ್ತ್ರ ಹಾಗೂ ಸಹಕಾರ ಅಧ್ಯಯನ ವಿಭಾಗ, ಐಕ್ಯೂಎಸಿ ಸಂಯೋಜಕರು, ಮೈಸೂರು ವಿ.ವಿ. ಮೈಸೂರು ಇವರನ್ನು ಮುಖ್ಯ ಪ್ರವರ್ತಕರಾಗಿ ಸರ್ವಾನುಮತದಿಂದ ಆಯ್ಕೆಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದ 269 ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಮೈಸೂರು ಜಿಲ್ಲಾ ಸಹಕಾರಿಗಳ ಒಕ್ಕೂಟದ ಪದಾಧಿಕಾರಿಗಳು, ಅಧಿಕಾರಿಗಳು ಸೇರಿದಂತೆ 300 ಜನರು ಭಾಗವಹಿಸಿದ್ದರು.

## ಉದ್ಘಾಟನೆ





**ಮಂಡ್ಯ :** ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಮಂಡ್ಯ ಇದರ ವತಿಯಿಂದ ದಿನಾಂಕ: 11.01.2025ರಂದು ರೈತ ಸಭಾಂಗಣ, ಮಂಡ್ಯ ಜಿಲ್ಲೆ ಇಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ 2025 ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಉದ್ಘಾಟನೆ ಹಾಗೂ ಜಿಲ್ಲಾ ಸೌಹಾರ್ದ ಸಹಕಾರಿ ಸಮ್ಮೇಳನ ಕಾರ್ಯಕ್ರಮವನ್ನು ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿದ್ದರು. ಶ್ರೀ ರವಿಕುಮಾರ್ ಗಾಣಿಗ, ಶಾಸಕರು, ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಗುರುರಾಜ್ ಬಿ ಟಿ, ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಶ್ರೀ ಸಿದ್ದಲಿಂಗಯ್ಯ ಎಸ್, ಉಪಾಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರುಗಳು ಹಾಗೂ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಉಪಸ್ಥಿತರಿದ್ದರು.

**ಬೆಳಗಾವಿ ದಾವಾ ಪಂಚಾಯ್ತಿ ನ್ಯಾಯಾಲಯ, ಬೆಳಗಾವಿ ಇದರ ನೂತನ ಇ–ಮೇಲ್ ಐಡಿ.**

bgm441court@souharda.coop

# ಸಂಭ್ರಮದ ಗಣರಾಜ್ಯೋತ್ಸವ ಆಚರಣೆ

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ



**ಬೆಂಗಳೂರು :** ದಿನಾಂಕ 26.01.2025 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಂಯಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೆಐಎಎಂ ಹರಿಹರ ಇದರ ಮಾನ್ಯ ನಿರ್ದೇಶಕರಾದ ಶ್ರೀ ನಂದೀಶ್ ಹಿರೇಮಠ್ ಹಾಗೂ ಪ್ರೊ. ರಾಜೇಂದ್ರ ತೊಡಲಬಾಗಿ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕೇಂದ್ರ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಭಾಗವಹಿಸಿದ್ದರು



**ಕಲಬುರಗಿ :** ದಿನಾಂಕ 26.01.2025 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಚೇರಿಯಲ್ಲಿ 76ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್. ಪಾಟೀಲ ರವರು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸ್ಥಳೀಯ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 26.01.2025 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ದಾವಾ ಪಂಚಾಯತ್ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀಮತಿ ರಂಜನ ಟಿ. ಪೋಳ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭಾ ಆರ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಹಿರಿಯ ಸಹಕಾರಿಗಳು, ರೂಡ್‌ಸೆಟ್ ಶಿಬಿರಾರ್ಥಿಗಳು ಹಾಗೂ ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 26.01.2025 ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇದರ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ್ ರಾವ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಪ್ರಾಂತದ ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೀದರ :** ದಿನಾಂಕ 26.01.2025 ರಂದು ಬೀದರ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಧ್ವಜಾರೋಹಣ ನೆರವೇರಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ನಿರ್ದೇಶಕರಾದ ಶ್ರೀ ಸಂಜಯ ಕ್ಯಾಸಾ. ಶಿವಬಸಪ್ಪಾ ಚನ್ನಮಲ್ಲೆ, ಶ್ರೀಕಾಂತ ಸ್ವಾಮಿ ಸೋಲಪೂರ, ಶ್ರೀ ನಾಗಶೇಟಿ ಪಾಟೀಲ್ ಸುಂಕನಾಳ, ಸಂಜೀವಕುಮಾರ ಸಜ್ಜನ್, ಅಣ್ಣಾರಾವ ನಾವದಗೇರೆ, ಅಂಜನಾ ಅಗ್ರವಾಲ್, ವಿಜಯಕುಮಾರ ಗಾಜರೆ, ಸಿಬ್ಬಂದಿಗಳಾದ ಶಿವರಾಜ ಹೂಗಾರ, ಅನೀಲ ಕೊಡಂಬಲ್, ಅಭಿವೃದ್ಧಿ ಅಧಿಕಾರಿ ವೀರಶಟ್ಟಿ, ಸಿಇಓ ಅಮೃತ ಹೊಸಮನಿ, ರಾಹುಲ್ ಉಪಸ್ಥಿತರಿದ್ದರು.

---

## 39ನೇ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮಾವೇಶ (ಐಎಸ್ಎಸ್ಸಿ) - ಸಮಾರೋಪ ಕಾರ್ಯಕ್ರಮ




**ಗದಗ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ ಗದಗ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇಂಡಿಯನ್ ಸೊಸಾಯಿಟಿ ಫಾರ್ ಸ್ಟಡೀಸ್ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ವೈಕುಂಠ ಮೆಹತಾ ಇನ್‌ಸ್ಟೋಟ್ಯೂಟ್ ಫಾರ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಪುಣೆ, ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 03 ಮತ್ತು 04 ಜನವರಿ 2025 ರಂದು 2 ದಿನಗಳ ಕಾರ್ಯಕ್ರಮವನ್ನು ಏರ್ಪಡಿಸಿಲಾಗಿತ್ತು.

### ಸಹಕಾರ ವ್ಯವಸ್ಥೆ ಜೀವನ ಶೈಲಿಯಾಗಿದೆ ಡಾ. ಅಶೋಕ ದಳವಾಯಿ

ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 04ನೇ ಜನವರಿ 2025ರಂದು ಆಯೋಜಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣಕಾರರಾಗಿ ಡಾ. ಅಶೋಕ ದಳವಾಯಿ, ಐಎಎಸ್ ಅಧಿಕಾರಿ (ನಿ) ಇವರು ಭಾಗವಹಿಸಿದ್ದರು.

ಡಾ. ಅಶೋಕ್ ದಳವಾಯಿ, ಐಎಎಸ್ (ನಿವೃತ್ತ) ಮತ್ತು ಕೃಷಿ ಇಲಾಖೆಯ ಪ್ರಮುಖ ಸಮಿತಿಯ ಸದಸ್ಯರು ಕಾರ್ಯಕ್ರಮದ ಸಮಾರೋಪ ಭಾಷಣವನ್ನು ನಡೆಸಿಕೊಟ್ಟರು. ಕರ್ನಾಟಕವು ಭಾರತದಲ್ಲಿ ಸಹಕಾರ ಬೆಳವಣಿಗೆಯಲ್ಲಿ ಬಹಳಷ್ಟು ಕೊಡುಗೆ ನೀಡಿದೆ. ಸಹಕಾರ ವ್ಯವಸ್ಥೆ ಜೀವನ ಶೈಲಿಯಾಗಿ ಪರಿಣಮಿಸಿದೆ. 1904 ರಲ್ಲಿ ಸಹಕಾರ ಸಂಸ್ಥೆಗಳು ಪ್ರಾರಂಭವಾದಾಗ 4000 ಸಹಕಾರ ಸಂಸ್ಥೆಗಳು ಮತ್ತು 36000 ಸದಸ್ಯರು ಮಾತ್ರ ಇದ್ದರು. ಈಗ 8.5 ಲಕ್ಷ ಸಹಕಾರ ಸಂಸ್ಥೆಗಳು ಮತ್ತು 30 ಕೋಟಿ ಸದಸ್ಯರು ಇದ್ದಾರೆ. ಸಹಕಾರವು ಎಲ್ಲರ ಒಗ್ಗಟ್ಟಿನ ಪ್ರಯತ್ನವಾಗಿದೆ. "ಎಲ್ಲರಿಗೂ ತಾನು, ತನಗಾಗಿ ಎಲ್ಲರೂ" ಎಂಬ ಸಹಕಾರ ತತ್ವವನ್ನು ಅನುಷ್ಠಾನಗೊಳಿಸಲು ಎಲ್ಲರೂ ಪ್ರಯತ್ನ ಪಡಬೇಕು ಎಂದು ತಿಳಿಸಿದರು.

ಭಾರತದಂತಹ ದೇಶದಲ್ಲಿ 142 ಕೋಟಿ ಜನಸಂಖ್ಯೆ ಮತ್ತು 392 ದಶಲಕ್ಷ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿರುವಾಗ, ಕೃಷಿ ವ್ಯಾಪಾರದ ತಾಂತ್ರಿಕತೆಯನ್ನು ಉಳಿಸಿಕೊಳ್ಳುವುದು ಅತ್ಯಾವಶ್ಯಕ. ಒಗ್ಗಟ್ಟಿನಲ್ಲಿ ಶಕ್ತಿ ಮತ್ತು ಅರ್ಥ ಇದೆ. ವೃತ್ತಿಪರ ನಿರ್ವಹಣೆ, ಸದಸ್ಯರ ಬದ್ಧತೆ, ಡಿಜಿಟಲ್ ತಂತ್ರಜ್ಞಾನವನ್ನು ಎಲ್ಲೆಡೆ ಪಾರದರ್ಶಕವಾಗಿ ಬಳಕೆ ಮಾಡಬೇಕು. ಭಾರತದಲ್ಲಿ ಸಹಕಾರ ಚಳುವಳಿ ಯಶಸ್ವಿಯಾಗಿದೆ. ಯುವಕರು ಮತ್ತು ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದೆ. ಭಾರತದಂತಹ ದೇಶಕ್ಕೆ ಸಹಕಾರ ಕ್ಷೇತ್ರದ ಅಗತ್ಯವಿದೆ. ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ. ಎ ಆರ್ ಪ್ರಸನ್ನಕುಮಾರ್ ರವರು ಅಧ್ಯಕ್ಷೀಯ ಭಾಷಣವನ್ನು ನಡೆಸಿಕೊಟ್ಟರು ಮತ್ತು ಎರಡು ದಿನಗಳ ಕಾರ್ಯಕ್ರಮ ಉತ್ತಮವಾಗಿ ನಡೆದಿದ್ದು, ಆಯೋಜಿತವಾಗಿ ಪಾಲ್ಗೊಳ್ಳಲು ಅನುಕೂಲವಾಯಿತು ಎಂದು ಹೇಳಿದರು.

ಪ್ರೊ. ಡಾ. ಸುರೇಶ ವಿ. ನಾಡಗೌಡರ, ಮಾನ್ಯ ಉಪಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ, ಗದಗ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶ್ರೀ ಅನಿಲ್ ಕಾರಂಜಿಕರ್, ಮಾನ್ಯ ಕಾರ್ಯದರ್ಶಿ, ಐಎಸ್ಎಸ್ಸಿ ರವರು ಎರಡು ದಿನಗಳ ಸಮಾವೇಶದ ಕುರಿತು ವಿವರವಾದ ವರದಿಯನ್ನು ನೀಡಿದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು, ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು.

## ಸೌಹಾರ್ದ ಸಹಕಾರಿಗಳ ಕ್ರೀಡಾಕೂಟಗಳು

## ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ನಡೆಸಿದ ಕ್ರೀಡಾಕೂಟಗಳ ವರದಿಗಳು



**ಕಲಬುರಗಿ :** ದಿನಾಂಕ 19.01.2025 ರಂದು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಎನ್.ವಿ ಮೈದಾನದಲ್ಲಿ ಕ್ರೀಡಾಕೂಟದ ಉದ್ಘಾಟನೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶಶೀಲ್ ಜಿ. ನಮೋಶಿ ಮಾನ್ಯ ವಿಧಾನ ಪರಿಷತ್ ಸದಸ್ಯರು ಧ್ವಜಾರೋಹಣವನ್ನು ನೆರವೆರಿಸಿ ಬಲೂನಗಳನ್ನು ಗಾಳಿಯಲ್ಲಿ ಬೀಡುವ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶೈಲಜಾ ತಪಲಿಯವರು ಮಾನ್ಯ ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರು, ಶ್ರೀ ವೈಜಿನಾಥ ತಡಕಲ್ ಮಾನ್ಯ ಅಧ್ಯಕ್ಷರು, ಮಹಾಗಾಂವ್ ಸೌಹಾರ್ದ ಪತ್ತಿನ ಸಹಕಾರಿ ನಿ., ಮಹಾಗಾಂವ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಹಾಗೂ ಒಕ್ಕೂಟ ನಿರ್ದೇಶಕರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್. ಪಾಟೀಲರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯ ಪೂರ್ವದಲ್ಲಿ ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಎನ್. ವಿ. ಮೈದಾನದ ವರೆಗೆ ಕ್ರೀಡಾಜ್ಯೋತಿ ನಡೆಸಲಾಯಿತು. ಕ್ರೀಡಾಕೂಟದಲ್ಲಿ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು, ಸಹಕಾರಿಗಳ ಸಿಬ್ಬಂದಿಗಳು ಹಾಗೂ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.



**ರಾಯಚೂರು :** ಸೌಹಾರ್ದ ಸಹಕಾರಿ ದಿನಾಚರಣೆಯ ರಜತ ಮಹೋತ್ಸವದ ಅಂಗವಾಗಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ರಾಯಚೂರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಜಂಟಿ ಸಹ ಭಾಗಿತ್ವದಲ್ಲಿ ಕ್ರೀಡಾ ಉತ್ಸವ ಹಾಗೂ ಸಹಕಾರ ಜಾಥಾ ಕಾರ್ಯಕ್ರಮವನ್ನು ದಿನಾಂಕ 09.01.2025 ರಿಂದ 12.01.2025ರವರೆಗೆ ಒಟ್ಟು 4 ದಿನಗಳ ಕಾಲ ನಿರಂತರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಭಾಗವಾಗಿ ಸಹಕಾರ ಜಾಥಾವು ಸಿಂಧನೂರು ನಗರ ಸಭೆ ಕಾರ್ಯಾಲಯದಿಂದ ಪ್ರಾರಂಭವಾಗಿ ಸತ್ಯ ಗಾರ್ಡನ್‌ವರೆಗೆ ನಡೆಯಿತು. ಈ ಸಹಕಾರ ಜಾಥಾ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಚಾಲನೆ ನೀಡಿದರು. ಜಾಥಾ ಸಂದರ್ಭದಲ್ಲಿ ಮಸ್ಕಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಸನಗೌಡ ತುರ್ವಿಹಾಳ, ಕೊಪ್ಪಳ ಲೋಕಸಭಾ ಕ್ಷೇತ್ರದ ಹಾಲಿ ಸಂಸದರಾದ ಶ್ರೀ ರಾಜಶೇಖರ ಹಿಟ್ನಾಳರವರು, ಮಾಜಿ ಸಂಸದರಾದ ಶ್ರೀ ಕೆ. ವಿರುಪಾಕ್ಷಪ್ಪನವರು, ರಾಯಚೂರು ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಂ. ದೊಡ್ಡ ಬಸವರಾಜರವರು, ಉಪಾಧ್ಯಕ್ಷರಾದ ಶ್ರೀ ಅಮರೇಗೌಡ ನಕ್ಕುಂದಿಯವರು, ಒಕ್ಕೂಟದ ನಿರ್ದೇಶಕರು, ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗದವರು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಕಲಾ ತಂಡಗಳು ಮತ್ತು ಇತರೇ ಸಹಕಾರಿ ಬಂಧುಗಳು ಭಾಗವಹಿಸಿದ್ದರು. ಸತ್ಯ ಗಾರ್ಡನ್‌ನಲ್ಲಿ ವೇದಿಕೆ ಕಾರ್ಯಕ್ರಮ ಜರುಗಿತ್ತು. ವೇದಿಕೆ ಕಾರ್ಯಕ್ರಮ ಪೂರ್ವದಲ್ಲಿ ಸಹಕಾರಿ ಧ್ವಜಾರೋಹಣವನ್ನು ಕೊಪ್ಪಳ ಲೋಕಸಭಾ ಕ್ಷೇತ್ರದ ಮಾಜಿ ಸಂಸದರು ಹಾಗೂ ತುಂಗಭದ್ರಾ ಸೌಹಾರ್ದ ಸಹಕಾರಿಯ ಮನ್ಯ ಅಧ್ಯಕ್ಷರಾದ ಶ್ರೀ ಕೆ ವಿರುಪಾಕ್ಷಪ್ಪ ನವರು ನೆರವೇರಿಸಿದರು. ಪ್ರದರ್ಶನ ಮಳಿಗೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಆರ್. ತಿಮ್ಮಯ್ಯಶೆಟ್ಟಿಯವರು ನೆರವೇರಿಸಿದರು. ವೇದಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ವೇದಿಕೆ ಮೇಲಿನ ಗಣ್ಯರು ಸ್ವಾಮಿ ವಿವೇಕಾನಂದರ ಹಾಗೂ ಸಹಕಾರಿ ಪಿತಾಮಹರಾದ ಶ್ರೀ ಸಿದ್ದನಗೌಡ ಪಾಟೀಲರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯ ಮತ್ತು ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಯನ್ನು ನೆರವೆರಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿಯವರು, ಮಸ್ಕಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲರವರು,

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ, ಶ್ರೀ ಹೆಚ್. ಜೆ. ಹನುಮಂತಯ್ಯಶೆಟ್ಟಿಯವರು, ಶ್ರೀಮತಿ ಶೈಲಜಾ ತಪಲಿಯವರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅದ್ಯಕ್ಷರಾದ ಶ್ರೀ ಎಂ ದೊಡ್ಡಬಸವರಾಜರವರು, ಒಕ್ಕೂಟದ ಉಪಾದ್ಯಕ್ಷರು, ನಿರ್ದೇಶಕರು, ಕೊಪ್ಪಳ ಜಿಲ್ಲಾ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರರವರು, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾ-ರಿಯಾದ ಶ್ರೀ ನಟರಾಜರವರು, ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗದವರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ಗಣ್ಯರಿಗೆ ಹಾಗೂ 4 ದಿನಗಳ ಕಾಲ ಕಾರ್ಯಕ್ರಮ ಯಶಸ್ವಿಯಾಗಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಸಹ ಸನ್ಮಾನಿಸಲಾಯಿತು. ನಂತರ 3 ದಿನಗಳ ಕಾಲ ನಡೆದ ಕ್ರೀಡಾಕೂಟದ ಹಾಗೂ ಕ್ರಿಕೇಟ್ ತಂಡದ ವಿಜೇತರಿಗೆ ಬಹುಮಾನ ಟ್ರೋಫಿಯನ್ನು ಹಾಗೂ ಪ್ರಶಸ್ತಿ ಪತ್ರವನ್ನು ಗಣ್ಯರಿಂದ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ 1100 ಪ್ರತಿನಿಧಿಗಳು ಭಾಗವಹಿಸಿದ್ದರು.



**ಉಡುಪಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಜಿಲ್ಲೆಯ ಇತರೆ ಸೌಹಾರ್ದ ಸಹಕಾರಿಗಳ ಸಂಯುಕ್ತ ಆಶ್ರಯದಲ್ಲಿ ಜನವರಿ 4 ರಂದು ಬ್ರಹ್ಮಾವರ ತಾಲ್ಲೂಕಿನ ಸಾಲಿಗ್ರಾಮದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಜರುಗಿತು. ಸೌಹಾರ್ದ ದಿನಾಚರಣೆ-2025 ಬೆಳ್ಳಿ ಹಬ್ಬದ ಕಾರ್ಯಕ್ರಮದ ಉದ್ಘಾಟನೆಯನ್ನು ಉಡುಪಿ ತಾಲ್ಲೂಕಿನ ಶಾಸಕರಾದ ಶ್ರೀ ಯಶ್ಪಾಲ್ ಎ. ಸುವರ್ಣ ರವರು ನೇರವೇರಿಸಿದರು. ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ. ವಹಿಸಿದ್ದರು. ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾ-ರಿಗಳಿಗೆ ಕುಂದಾಪುರ ತಾಲ್ಲೂಕಿನ ಮಾನ್ಯ ಶಾಸಕರಾದ ಶ್ರೀ ಕಿರಣ್ ಕುಮಾರ್ ಕೊಡ್ಗಿ ಇವರು ಸನ್ಮಾನ ಮಾಡಿದರು ಹಾಗೂ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸಂಯುಕ್ತ ಸಹಕಾರಿಯಿಂದ ಶ್ರೇಷ್ಠ ಸಹಕಾರಿ ಪ್ರಶಸ್ತಿ ಪಡೆದ ಸಹಕಾರಿಗಳ ಅಧ್ಯಕ್ಷರುಗಳಿಗೆ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಗುರುರಾಜ್ ಗಂಟಿಹೊಳೆ ಅಭಿನಂದಿಸಿದರು. ಸದರಿ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ, ಉಡುಪಿ ಜಿಲ್ಲೆಯ ಸಹಕಾರಿಗಳ ಉಪ-ನಿಬಂಧಕರು ಹಾಗೂ ಸಹಾಯಕ ನಿಭಂಧಕರು ಹಾಗೂ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು ಸದರಿ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳು ಅಂದು ಇಂದು ಮತ್ತು ಮುಂದು ಎಂಬ ವಿಷಯದ ಕುರಿತು ವಿಚಾರಗೋಷ್ಠಿಯನ್ನು ನಡೆಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಂದ 700 ಪ್ರತಿನಿಧಿಗಳು ಭಾಗವಹಿಸಿದ್ದರು.

## ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ



**ವಿಜಯಪುರ** : ದಿನಾಂಕ 03.01.2025 ರಂದು ಬೆಳಿಗ್ಗೆ 10.30 ಕ್ಕೆ ವಿಜಯಪುರ ಜಿಲ್ಲೆಯ ವಿಜಯಪುರ, ಸಿಂದಗಿ, ಆಲಮೇಲ ಹಾಗೂ ದೇವರಹಿಪ್ಪರಗಿ ತಾಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ಕೆ.ಸಿ. ನಗರ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಸಭೆಯ ಉದ್ಘಾಟನೆಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ವಿಜಯಪುರ ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಶ್ರೀಮಂತ ಇಂಡಿ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಚ್.ಕೆ. ವಡ್ಡರ, ಸಹಾಯಕ ನಿಬಂಧಕರು, ಸಹಕಾರಿ ಸಂಘಗಳ ನಿಬಂಧಕರ ಇಲಾಖೆ ಇಂಡಿ, ಯುವಸಿರಿ ಸೌಹಾರ್ದ ಸಹಕಾರಿ ನಿ., ಯರನಾಳ ಇದರ ಅಧ್ಯಕ್ಷರಾದ ಶ್ರೀ ಶಂಕರಗೌಡ ಪಾಟೀಲ, ಹಿರಿಯ ಸಹಕಾರಿಗಳಾದ ಶ್ರೀ

ಅಮರನಾಥ ಬಿರಾದಾರ ಇವರುಗಳು ಭಾಗವಹಿಸಿದ್ದರು. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಶ್ರೀಧರ ರತ್ನಾಕರ ಇವರು ಮಾಹಿತಿಯನ್ನು ನೀಡಿದರು. ಶಾಸನಾತ್ಮಕ ಮಾಹಿತಿಗಳನ್ನು ಸಲ್ಲಿಸುವ ಕುರಿತು ಹಾಗೂ ಲೆಕ್ಕಪರಿಶೋಧನೆ ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಬಗ್ಗೆ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಮಾಹಿತಿ ನೀಡಿದರು. ಸಹಕಾರಿಗಳಲ್ಲಿ ಸಿಬ್ಬಂದಿಗಳ ಹಾಗೂ ಗ್ರಾಹಕರ ನಡುವೆ ನಿರ್ವಹಿಸಬೇಕಾದ ಸಂಬಂಧಗಳ ಕುರಿತು ಶ್ರೀ ಶಂಕರಗೌಡ ಪಾಟೀಲ, ಅಧ್ಯಕ್ಷರು ಯುವಸಿರಿ ಸೌಹಾರ್ದ ಸಹಕಾರಿ ನಿ., ಯರನಾಳ ಇವರು ಉಪನ್ಯಾಸ ನೀಡಿದರು. ಸೈಬರ ಸೆಕ್ಯೂರಿಟಿ ವಿಷಯದ ಬಗ್ಗೆ ಶ್ರೀ ಆನಂದ ಮಾಳಿ, ಚಿಕ್ಕೋಡಿ ಇವರು ಉಪನ್ಯಾಸವನ್ನು ನೀಡಿದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ಇವರು ನಡೆಸಿಕೊಟ್ಟರು. ಸಭೆಯಲ್ಲಿ ಒಟ್ಟು 135 ಸೌಹಾರ್ದ ಸಹಕಾರಿಗಳಿಂದ 142 ಪ್ರತಿನಿಧಿಗಳು ಹಾಜರಿದ್ದರು



**ವಿಜಯಪುರ** : ದಿನಾಂಕ 04.01.2025 ರಂದು ಬೆಳಿಗ್ಗೆ 10.30ಕ್ಕೆ ವಿಜಯಪುರ ಜಿಲ್ಲೆಯ ಇಂಡಿ, ಚಡಚಣ, ಮುದ್ದೇಬಿಹಾಳ, ತಾಳಿಕೋಟೆ, ನಿಡಗುಂದಿ, ಕೋಲ್ಹಾರ, ಬಬಲೇಶ್ವರ, ಬಸವನ ಬಾಗೇವಾಡಿ ಹಾಗೂ ತಿಕೋಟಾ ತಾಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ಕೆ.ಸಿ.ನಗರ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಶ್ರೀ ಶಾಂತೇಶ್ವರ ಸೌಹಾರ್ದ ಸಹಕಾರಿ ನಿ., ಇಂಡಿ ಇದರ ವ್ಯವಸ್ಥಾಪಕರಾದ ಶ್ರೀ ಶಂಕರ ಗೌಡ ಪಾಟೀಲ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮಿತ ಮಾಳಿ ಹಾಗೂ ಶ್ರೀ ಅರುಣ ಹಾದಿಮನಿ ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಅರುಣ ಹಾದಿಮನಿ ಇವರು ಮಾಹಿತಿಯನ್ನು ನೀಡಿದರು. ಸೈಬರ್ ಸೆಕ್ಯೂರಿಟಿ ವಿಷಯದ ಬಗ್ಗೆ ಶ್ರೀ ಅಮಿತ ಮಾಳಿ, ಚಿಕ್ಕೋಡಿ ಇವರು ಉಪನ್ಯಾಸವನ್ನು ನೀಡಿದರು. ಶಾಸನಾತ್ಮಕ ಮಾಹಿತಿಗಳ ಸಲ್ಲಿಕೆ ಕುರಿತು, ಲೆಕ್ಕಪರಿಶೋಧನೆ ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಬಗ್ಗೆ ಹಾಗೂ ಆರ್ಥಿಕ ಸಬಲತೆಯ ಮಾನದಂಡಗಳ ಪಾಲನೆಯ ಕುರಿತು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಶ್ರೀ ಬಸವರಾಜ ಎಸ್. ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ಇವರು ನಡೆಸಿಕೊಟ್ಟರು. ಸದರಿ ಸಭೆಯಲ್ಲಿ ಒಟ್ಟು 126 ಸೌಹಾರ್ದ ಸಹಕಾರಿಗಳಿಂದ 148 ಪ್ರತಿನಿಧಿಗಳು ಹಾಜರಿದ್ದರು.



**ಶಿವಮೊಗ್ಗ** : ದಿನಾಂಕ 02.01.2025ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶಶಿಧರ್, ಮಾನ್ಯ ಉಪಾಧ್ಯಕ್ಷರು, ಕಾಯಕಜ್ಯೋತಿ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜುರವರು ನೆರವೇರಿಸಿದರು. 110 ಸೌಹಾರ್ದ ಸಹಕಾರಿಗಳಿಂದ 130 ಪ್ರತಿನಿಧಿಗಳು ಭಾಗವಹಿಸಿದ್ದರು.

# 2024-25ನೇ ಸಾಲಿನ ಡಿ.ಸಿ.ಬಿ.ಎಂ ಪ್ರವೇಶ ಅಧಿಸೂಚನೆ

Karnataka State Rural Development and Panchayat Raj University, Gadag
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವ ವಿದ್ಯಾಲಯ ಗದಗ
&
Karnataka State Souharda Federal Co-operative Ltd. Bengaluru
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು

**No. RDPRU 39 ACA 2024** **Date:** 15.01.2025

## 2024-25 ನೇ ಸಾಲಿಗೆ ಪ್ರವೇಶ ಅಧಿಸೂಚನೆ

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:** 15.01.2025

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಇವರುಗಳ ಸಹಯೋದಲ್ಲಿ 2024–25 ನೇ ಸಾಲಿಗೆ ಒಂದು ವರ್ಷದ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಹಾಗೂ ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಂದ ಸಮುಚಿತ ಮಾರ್ಗದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದೆ.

**ಡಿಪ್ಲೋಮಾ ಕಾರ್ಯಕ್ರಮದ ವಿವರ:**

| | |
|---|---|
| ಕಾರ್ಯಕ್ರಮದ ಶೀರ್ಷಿಕೆ | ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ |
| ಕಾರ್ಯಕ್ರಮದ ಅವಧಿ | ಒಂದು ವರ್ಷ (1) |
| ಸೆಮಿಸ್ಟರಗಳ ಸಂಖ್ಯೆ | ಎರಡು (2) |
| ಬೋಧನಾ ವಿಧಾನ | ವಾರಾಂತ್ಯದ ಆನ್‌ಲೈನ್ ತರಗತಿಗಳು ಹಾಗೂ ಸಂಪರ್ಕ ತರಗತಿಗಳು |
| **ಅರ್ಹತೆ** | |
| ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು | ಪಿ.ಯು.ಸಿ ಅಥವಾ ಎಸ್.ಎಸ್.ಎಲ್.ಸಿ ಉತ್ತೀರ್ಣತೆಯ ಜೊತೆಗೆ ಕನಿಷ್ಠ 3 (ಮೂರು) ವರ್ಷಗಳ ಸೇವಾನುಭವ ಹೊಂದಿರಬೇಕು |
| ಸಾಮಾನ್ಯ ಯುವಕರಿಗೆ | 12 ನೇ ತರಗತಿ / ಪಿ.ಯು.ಸಿ ಉತ್ತೀರ್ಣ / ಸಮಾನ ತತ್ಸಮಾನ |
| ಅರ್ಜಿ ಹಾಗೂ ಕಾರ್ಯಕ್ರಮದ ಶುಲ್ಕ | ರೂ. 9,500=00 |

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

- ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವೆಬ್‌ಸೈಟ್ www.ksrdpru.ac.in ಮತ್ತು www.souharda.coop ನಲ್ಲಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.
- ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಹಾಗೂ ಕಾರ್ಯಕ್ರಮದ ಶುಲ್ಕ ರೂ. 9,500/- (ಅರ್ಜಿ ಶುಲ್ಕ ರೂ.100/- ಹಾಗೂ ಕಾರ್ಯಕ್ರಮದ ಶುಲ್ಕ 9,400/-ಗಳನ್ನು **"ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ,"** ಇವರ ಹೆಸರಿಗೆ ಡಿ.ಡಿ. ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್-ಲೈನ್‌ಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ **SB Account Number: 110095611771, Canara Bank, IFSC Code: CNRB0000511 through NEFT / RTGS / UPI** ಮುಖಾಂತರ ಪಾವತಿಸಿ, Transaction ID Screenshot Print-Out ಪಡೆದು **"ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055."** ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯ ಮಾಡಿದ ಮೂಲ ಶುಲ್ಕದ ರಸೀದಿ / Transaction ID Screenshot Print-Outನ 2 ಪ್ರತಿಗಳನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ 28.02.2025ರ ಒಳಗಾಗಿ ಸಲ್ಲಿಸುವುದು.
- ನೋಂದಾಯಿತ ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು "ಸೇವಾ ಪ್ರಮಾಣ ಪತ್ರ" ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸೇವಾ ಪ್ರಮಾಣ ಪತ್ರಗಳನ್ನು ಕಾರ್ಯ ನಿರ್ವಹಿಸುವ ಸಹಕಾರಿಯ ಮುಖ್ಯಸ್ಥರಿಂದ ಪಡೆಯುವುದು.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1

ಮಹತ್ವದ ದಿನಗಳು:

| | | |
|---|---|---|
| 1) | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 28.02.2025 |

- **ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ:**

- **ಡಾ. ಅಭಯಕುಮಾರ್ ಗಸ್ತಿ**
  ಕಾರ್ಯಕ್ರಮ ಸಂಯೋಜಕರು, ಎಂ.ಕಾಂ. ಮತ್ತು ಡಿ.ಸಿ.ಬಿ.ಎಂ
  ಕ.ರಾ.ಗ್ರಾ. ಮತ್ತು ಪಂ.ರಾ ವಿಶ್ವವಿದ್ಯಾಲಯ, ಗದಗ,
  ಮೊಬೈಲ್ ಸಂಖ್ಯೆ: 9844456930

- **ಶ್ರೀ. ವಿ.ಜೆ. ಕಾರ್‌ಕೂನ್**
  ತರಬೇತಿ ಸಂಯೋಜಕರು,
  ಕ.ರಾ.ಸೌ.ಸಂ.ಸ.ಲಿ. ಬೆಂಗಳೂರು,
  ಮೊಬೈಲ್ ಸಂಖ್ಯೆ: 8884466710

- **ಶ್ರೀ. ಶಿವಕುಮಾರ ಬಿರಾದರ್**
  ಮುಖ್ಯ ತರಬೇತಿ ಅಧಿಕಾರಿಗಳು,
  ಕ.ರಾ.ಸೌ.ಸಂ.ಸ.ಲಿ. ಬೆಂಗಳೂರು,
  ಮೊಬೈಲ್ ಸಂಖ್ಯೆ: 9844454995

**ಪ್ರವೇಶಾತಿ ಮಾಹಿತಿ ಕೇಂದ್ರ –**

- ಶ್ರೀಮತಿ. ಕವಿತಾ – 9741699808
- ಶ್ರೀ. ಅಭಿಷೇಕ ವಿ. ಜಾನೋಪಂತರ – 9632062466

ಆದೇಶದ ಮೇರೆಗೆ

**ಕುಲಸಚಿವರು**
**ಪ್ರೊ. ಡಾ. ಸುರೇಶ್ ವಿ ನಾಡಗೌಡರ**

**ಪ್ರತಿಗಳು:** ಆಪ್ತ ಸಹಾಯಕರು ಕುಲಪತಿಗಳು / ಕುಲಸಚಿವರು / ವಿತ್ತಾಧಿಕಾರಿಗಳು / ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ಲಿ. / ಪರೀಕ್ಷಾ ವಿಭಾಗ / ಸೂಚನಾ ಫಲಕ / ಕಛೇರಿ ಕಡತ.

## ಕ್ಲಸ್ಟರ್ ಮಟ್ಟದ ತರಬೇತಿ

**ಶಿವಮೊಗ್ಗ :** ದಿನಾಂಕ 15.01.2025ರಂದು ಭದ್ರಾವತಿ ನಗರದ ಸೌಹಾರ್ದ ಸಹಕಾರಿ ಸಂಘಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಭದ್ರಾ ವೀರಶೈವ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ, ವರದಿ ಅವಲೋಕನೆಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳು, ಸಹಕಾರಿಗಳ ಚುನಾವಣೆ, ಯಶಸ್ವಿನಿ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. 7 ಸಹಕಾರಿಗಳಿಂದ 9 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.01.2025ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ರವರು ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಯಡೇಹಳ್ಳಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಬಾಗವಹಿಸಿ ಸಹಕಾರಿಯ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯ ಸಲಹೆಗಳನ್ನು ನೀಡಿದರು.

# ಡಿ.ಸಿ.ಬಿ.ಎಂ ಅರ್ಜಿ ನಮೂನೆ

Application No.: ____________

**Karnataka State Rural Development and Panchayat Raj University, Gadag**
**and**
**Karnataka State Souharda Federal Co-operative Ltd., Bengaluru**

## APPLICATION FORM - Diploma in Co-operation and Baking Management 2024-25

AFFIX RECENT PASSPOSTSIZE PHOTOGRAPH

**ಸೂಚನೆಗಳು:**

೧. ನಿಮ್ಮ ಎಲ್ಲಾ ಬೇಡಿಕೆಗಳಿಗೆ ಪ್ರಸಕ್ತ ಧೃಡೀಕೃತ ಪ್ರಮಾಣ ಪತ್ರಗಳ ನೆರಳಚ್ಚು ಪ್ರತಿಗಳನ್ನು ಲಗತ್ತಿಸುವುದು.

೨. ಎಲ್ಲಾ ಅಂಕಣಗಳನ್ನು ತುಂಬಬೇಕು. ಸಂಬಂಧಪಡದ ಅಂಕಣಗಳಿಗೆ NA (Not Applicable) ಎಂದು ಭರ್ತಿ ಮಾಡುವುದು, ಅಪೂರ್ಣವಾದ ಅರ್ಜಿಯನ್ನು ತಿರಸ್ಕರಿಸಲಾಗುವುದು.

೩. ಈ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ ಲಿಂಕ್ (www.ksrdpru.ac.in) ಹಾಗೂ (www.souharda.coop) ಮೂಲಕ ಡೌನ್‌ಲೋಡ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು **ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ, ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡರಸ್ತೆ ಮಧ್ಯೆ, ಮಾಗೊಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055**,ಇವರಿಗೆ ಶುಲ್ಕ ಪಾವತಿಸಿದ ರಸೀದಿ ಮತ್ತು ಅವಶ್ಯಕವಾದ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸುವುದು / (ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಪ್ರವೇಶಾತಿಅಧಿಸೂಚನೆ ನೋಡಬಹುದು).

**Instructions:**

1. PHOTO – COPIES of relevant certificates should be submitted for all your claims.
2. All fields should be filled. Fields not applicable should be written as NA. Incomplete Application is liable to be rejected.
3. This application form may be downloaded from the University and KSSFCL website (www.ksrdpru.ac.in) or (www.souharda.coop) and duly filled application form shall be sent to the **"Managing Director, Karnataka State Souharda Federal Co-operative Ltd., Sahakari Souda, No. 68, First Floor, between 17th & 18th, Margosa Road, Malleshwaram, Bengaluru-560055 Karnataka"** with necessary fees and enclosures (for more details see Admission Notification).

| | |
|---|---|
| **1.** ಅರ್ಜಿ ಹಾಗೂ ಪ್ರೋಗ್ರಾಮ್ ಶುಲ್ಕ ಪಾವತಿಸಿದ ವಿವರ/ Application and Admission Fees Paid Details: | |
| ಶುಲ್ಕ/ Fee (in Rupees): | ದಿನಾಂಕ/ Date: |
| ಬ್ಯಾಂಕ್ ಹೆಸರು ಮತ್ತು ಶಾಖೆ/ Name of the Bank & Branch: | |
| ಚಲನ್/ ಡಿ.ಡಿ. / ಆನಲೈನ್ ಪಾವತಿ ಸಂಖ್ಯೆ Challan/D.D./Online Payment Transaction ID No: | |
| **2.** ಅಭ್ಯರ್ಥಿಯ ಹೆಸರು (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ ದೊಡ್ಡ ಅಕ್ಷರಗಳಲ್ಲಿ) Candidate's Name (As per the SSLC Marks Card in Capital Letters): | |
| | |
| ತಂದೆಯ ಹೆಸರು / ಕೆಲಸ / Father's Name / Occupation | |
| ತಾಯಿಯ ಹೆಸರು / ಕೆಲಸ / Mother's Name / Occupation | |
| ಪೋಷಕರ ಹೆಸರು / ಕೆಲಸ / Guardian's Name / Occupation | |
| **3.** ಸಂಪರ್ಕಿಸುವ ವಿಳಾಸ / Address for Correspondence: | |
| ಪೂರ್ಣ ಹೆಸರು / Full Name: | |
| ಅಂಚೆ ವಿಳಾಸ / Postal Address: ಬೀದಿ / ಮೊಹಲ್ಲಾ Area / Street: | |

| | | |
|---|---|---|
| ಅಂಚೆ / Post: | ತಾಲೂಕ / Tq: | ಜಿಲ್ಲಾ / Dist: |
| ರಾಜ್ಯ / State: | ದೇಶ / Country: | ಪಿನ್‌ಕೋಡ್ / Pin Code: |
| E-mail ID: | WhtasApp Mobile No: | |
| **4.** ಜಾತಿ / Caste: | ವರ್ಗ / Category: ☐ | |
| **5.** ರಾಷ್ಟ್ರೀಯತೆ / Nationality | ಭಾರತೀಯ / Indian ☐ | ವಿದೇಶಿ / Foreigner ☐ |
| **6.** ಲಿಂಗ/Gender: ಪುರುಷ / Male ☐ | ಸ್ತ್ರೀ / Female ☐ | ಲಿಂಗತ್ವ / Transgender ☐ |
| **7.** ಹುಟ್ಟಿದ ದಿನಾಂಕ / Date of Birth | ☐☐☐☐☐☐☐☐ | |
| **8.** ಆಧಾರ್‌ಕಾರ್ಡ್ ಸಂಖ್ಯೆ / Aadhaar Card No. | | |

## EDUCATIONAL QUALIFICATION DETAILS

| | |
|---|---|
| **9.** ವ್ಯಾಸಂಗ ಮಾಡಿದ ಅರ್ಹತಾ ಪರೀಕ್ಷಾವಿವರಗಳು / Details of Qualifying Examination: | |
| ***a.*** ಶಿಕ್ಷಣದ ವಿವರ | S.S.L.C ☐ PUC ☐ |
| ***b.*** ಹೈಸ್ಕೂಲ್/ ಕಾಲೇಜು ಹೆಸರು Name of the High School / College | |
| ***c.*** ತೇರ್ಗಡೆಯಾದ ವರ್ಷ/ Year of passing | |
| ನೋಂದಣಿ ಸಂಖ್ಯೆ / Registration No. | |
| ***d.*** ಒಟ್ಟುಗರಿಷ್ಠ ಅಂಕಗಳು (ಭಾಷಾ ವಿಷಯಗಳ ಸಹಿತ) / Max. Marks (Including Languages) | |
| ***e.*** ಪಡೆದಿರುವ ಅಂಕಗಳು (ಭಾಷಾ ವಿಷಯಗಳ ಸಹಿತ) / Marks obtained (Including Languages) | |
| ***f.*** ಒಟ್ಟು ಶೇಕಡಾ / Total Percentage % | |
| **10.** ಅಭ್ಯರ್ಥಿಯಿಂದದೃಢೀಕರಿಸಲ್ಪಟ್ಟಒಟ್ಟು ಲಗತ್ತಿಸಲಾದ ಪ್ರತಿಗಳು / Total Number of enclosures attested by the Candidate: (SSLC / PUC / Experience Certificate / Caste / Income / Aadhaar Card / Any other Certificates) | ☐ |

## DETAILS OF IN-SERVICE CANDIDATES (ಸೇವಾನಿರತ ಅಭ್ಯರ್ಥಿಗಳ ಮಾಹಿತಿ)

| | |
|---|---|
| ಸಹಕಾರಿ ಸಂಸ್ಥೆಯ ಹೆಸರು<br>Name of the Co-operative Organization: | |
| ಪದನಾಮ Designation: | |
| ಕಾರ್ಯಾನುಭವದ ಅವಧಿ Years of Work Experience: | |
| ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಯ ವಿಳಾಸ<br>Correspondence Address of Working Co-operative Organization: | |

### *ಅಭ್ಯರ್ಥಿಯ ಘೋಷಣೆ/ Declaration by the Candidate*

*ನಾನು ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆಎಂದು ಘೋಷಿಸುತ್ತೇನೆ ಮತ್ತು ಯಾವುದೇ ಮಾಹಿತಿಯನ್ನು ಅಡಗಿಸಿರುವುದಿಲ್ಲ. ನಾನು ತಪ್ಪು ಮಾಹಿತಿ ನೀಡಿದ್ದಲ್ಲಿ, ಕ.ರಾ.ಗ್ರಾ.ಅ.ಪಂ.ರಾ. ವಿಶ್ವವಿದ್ಯಾಲಯ ಹಾಗೂ ಕ.ರಾ.ಸೌ.ಸಂ.ಸ.ಲಿ. ನನ್ನ ವಿರುದ್ಧ ಕ್ರಮ ಕೈಗೊಳ್ಳ ಬಹುದಾಗಿರುತ್ತದೆ ಹಾಗೂ ನನ್ನ ಪ್ರವೇಶವನ್ನು ಸಹ ರದ್ದು ಪಡಿಸಬಹುದಾಗಿದೆ. ಯುಜಿಸಿ ಪ್ರವೇಶ ನಿಯಮಗಳ ಪ್ರಕಾರ, ಪ್ರತಿ ವಿಷಯದ ಪರೀಕ್ಷೆಗೆ ಹಾಜರಾಗಲು ಕನಿಷ್ಠ 75% ಹಾಜರಾತಿಕಡ್ಡಾಯ ಮತ್ತು ಹಾಜರಾತಿಯ ಕೊರತೆಗೆ ರಿಯಾಯಿತಿ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲ ಎಂಬುವುದಕ್ಕೆ ನಾನು ಬದ್ಧನಿರುತ್ತೇನೆ/ಳೆ ಹಾಗೂ ನಾನು ವಿಶ್ವವಿದ್ಯಾಲಯದ ಹಾಗೂ ಕ.ರಾ.ಸೌ.ಸಂ.ಸ.ಲಿ.ನ ನಿಯಮಗಳಿಗೆ ಬದ್ಧನಾಗಿರುತ್ತೇನೆ/ಳೆ.*

ದಿನಾಂಕ / Date:                ಅಭ್ಯರ್ಥಿಯ ಸಹಿ / ***Signature of the Applicant***

ಸ್ಥಳ / Place:

Page **2** of 3

**ಪ್ರಮುಖ ಸೂಚನೆಗಳು:**

- ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಹಾಗೂ ಕಾರ್ಯಕ್ರಮದ ಶುಲ್ಕ **ರೂ. 9,500/-** (ಅರ್ಜಿ ಶುಲ್ಕ ರೂ.100/- ಹಾಗೂ ಕಾರ್ಯಕ್ರಮದ ಶುಲ್ಕ 9,400/-ಗಳನ್ನು) **"ಹಣಕಾಸು ಅಧಿಕಾರಿಗಳು, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ,"** ಇವರ ಹೆಸರಿಗೆ ಡಿ.ಡಿ. ಪಡೆದು, ಡಿ.ಡಿ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರು ಹಾಗೂ ಮೊಬೈಲ್ ನಂ. ನಮೂದಿಸಿ, ಭರ್ತಿ ಮಾಡಿ ಅಥವಾ ಅರ್ಜಿ ಶುಲ್ಕವನ್ನು ಆನ್–ಲೈನ್‌ನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ **SB Account Number: 110095611771, Canara Bank, IFSC Code: CNRB0000511 through NEFT / RTGS / UPI** ಮುಖಾಂತರ ಪಾವತಿಸಬೇಕು
- **"ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055."** ಇವರಿಗೆ ಸೂಕ್ತ ದಾಖಲೆಗಳು ಹಾಗೂ ಸಂದಾಯ ಮಾಡಿದ ಮೂಲ ಶುಲ್ಕದ ರಸೀದಿ / Transaction ID Screenshot Print-Outನ 2 ಪ್ರತಿಗಳನ್ನು ಲಗತ್ತಿಸಿ, ಖುದ್ದಾಗಿ / ತ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ 28.02.2025ರ ಒಳಗಾಗಿ ಸಲ್ಲಿಸುವುದು.
- ಅರ್ಜಿಯನ್ನು ಭರ್ತಿ ಮಾಡಿ, ಶುಲ್ಕವನ್ನು ಪಾವತಿಸಿದ ನಂತರ ಈ ಕೆಳಗೆ ನೀಡಿರುವ **QR Code**ನ್ನು ಸ್ಕ್ಯಾನ್ ಮಾಡಿ **WhatsApp Group Join** ಆಗಬೇಕು. **WhatsApp Group Join** ಆದ ನಂತರ 9632062466 ಅಥವಾ 9741699808 ಮೊಬೈಲ್ ನಂ. ಕರೆ ಮಾಡಿ ನಿಮ್ಮ ಹೆಸರು ಮತ್ತು ವಿವರಗಳನ್ನು ತಿಳಿಸಬೇಕು.
- ಈ **QR Code**ನ್ನು ಸ್ಕ್ಯಾನ್ ಮಾಡಿ

.............................................................................*CUT HERE*.........................................................

***CANDIDATE COPY***

**Karnataka State Rural Development and Panchayat Raj University, Gadag**
**and**
**Karnataka State Souharda Federal Co-operative Ltd., Bengaluru**

1. Candidate's Name ..........................................................................................................
2. Application No...........................................................................................................
3. Category ...................................... Date of Submission ..........................................................
4. Application Fee paid Challan / DD No. ......................................... Date. ................Rs.............
5. Bank Name...........................................................................................................

*Collecting Official's Signature & Name* ______________________________

Page **3** of 3

# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಸುತ್ತಿರುವ "2ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯ ವರದಿ :



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಸುತ್ತಿರುವ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ದಿನಾಂಕ: 25 ಹಾಗೂ 26ನೇ ಜನವರಿ 2025ರಂದು ಬೆಂಗಳೂರು, ಬಳ್ಳಾರಿ, ಚಿಕ್ಕೋಡಿ, ಹುಬ್ಬಳ್ಳಿಯಲ್ಲಿ ಹಾಗೂ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 25.01.2025ರಂದು ಬೆಳಿಗ್ಗೆ 10.30ರಿಂದ 12.30ರ ವರೆಗೆ ವಿಷಯ 2.1 : ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳು ಹಾಗೂ ಮಧ್ಯಾಹ್ನ 02.00 ರಿಂದ 04.00 ರವರೆಗೆ ವಿಷಯ 2.2 : ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಪರೀಕ್ಷೆಯನ್ನು ಆಯೋಜಿಸಲಾಗಿತ್ತು.

ದಿನಾಂಕ 26.01.2025ರಂದು ಬೆಳಿಗ್ಗೆ 10.30 ರಿಂದ 12.30 ರವರೆಗೆ ವಿಷಯ 2.3 : ಮಾಹಿತಿ ತಂತ್ರಜ್ಞಾನ ವಿಷಯದ ಕುರಿತು ಪರೀಕ್ಷೆಯನ್ನು ಆಯೋಜಿಸಲಾಗಿತ್ತು.

**ಕೇಂದ್ರವಾರು ಪರೀಕ್ಷೆಯ ವಿವರಗಳು :**

1. **ಬೆಂಗಳೂರು ಕೇಂದ್ರ :** ಡಿಸಿಬಿಎಂ ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು "ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 25.01.2025ರಂದು ಬೆಂಗಳೂರು ಕೇಂದ್ರದಲ್ಲಿ ಒಟ್ಟು 68 ಅಭ್ಯರ್ಥಿಗಳು ಹಾಗೂ ದಿನಾಂಕ 26.01.2025ರಂದು ಒಟ್ಟು 67 ಅಭ್ಯರ್ಥಿಗಳು ಹಾಜರಾಗಿದ್ದರು.
2. **ಬಳ್ಳಾರಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಅಲ್ಲಂ ಕರಿಬಸಪ್ಪ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಏರ್‌ಪೋರ್ಟ್ ರಸ್ತೆ, ಬಳ್ಳಾರಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 25.01.2025ರಂದು ಹಾಗೂ ದಿನಾಂಕ 26.01.2025ರಂದು ಬಳ್ಳಾರಿ ಕೇಂದ್ರದಲ್ಲಿ ಒಟ್ಟು 50 ಅಭ್ಯರ್ಥಿಗಳು ಹಾಜರಿದ್ದರು.
3. **ಚಿಕ್ಕೋಡಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಸಿಎಲ್‌ಇ ಸೊಸೈಟಿಯ ಶ್ರೀ ಬಿ.ಸಿ. ಗಂಗಲ್ ಕಾಲೇಜ್ ಆಫ್ ಎಜುಕೇಶನ್ ಬಸವ ಸರ್ಕಲ್, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 25.01.2025ರಂದು ಹಾಗೂ ದಿನಾಂಕ 26.01.2025ರಂದು ಚಿಕ್ಕೋಡಿ ಕೇಂದ್ರದಲ್ಲಿ ಒಟ್ಟು 26 ಅಭ್ಯರ್ಥಿಗಳು ಹಾಜರಿದ್ದರು.
4. **ಹುಬ್ಬಳ್ಳಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಕೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜ್, ದೇಸಾಯಿ ಕಾಂಪೌಂಡ್, ವಿದ್ಯಾನಗರ, ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 25.01.2025ರಂದು ಹಾಗೂ ದಿನಾಂಕ 26.01.2025ರಂದು ಹುಬ್ಬಳ್ಳಿ ಕೇಂದ್ರದಲ್ಲಿ ಒಟ್ಟು 55 ಅಭ್ಯರ್ಥಿಗಳು ಹಾಜರಿದ್ದರು.
5. **ವಿಜಯಪುರ ಕೇಂದ್ರ :** ಡಿಸಿಬಿಎಂ ಕೋರ್ಸಿನ 2ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಗೀತಾಂಜಲಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 25.01.2025ರಂದು 51 ಅಭ್ಯರ್ಥಿಗಳು ಹಾಗೂ ದಿನಾಂಕ 26.01.2025ರಂದು ವಿಜಯಪುರ ಕೇಂದ್ರದಲ್ಲಿ ಒಟ್ಟು 49 ಅಭ್ಯರ್ಥಿಗಳು ಹಾಜರಿದ್ದರು.

# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಸುತ್ತಿರುವ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 2ನೇ ಸೆಮಿಸ್ಟರ್‌ನ ಭೌತಿಕ ಸಂಪರ್ಕ ವರ್ಗದ ವರದಿ :

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಸುತ್ತಿರುವ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 2ನೇ ಸೆಮಿಸ್ಟರ್‌ನ ಭೌತಿಕ ಸಂಪರ್ಕ ವರ್ಗಗಳನ್ನು ದಿನಾಂಕ: 11 ಹಾಗೂ 12ನೇ ಜನವರಿ 2025ರಂದು ಬೆಂಗಳೂರು, ಬಳ್ಳಾರಿ, ಚಿಕ್ಕೋಡಿ, ಹುಬ್ಬಳ್ಳಿ ಹಾಗೂ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

## ಕೇಂದ್ರವಾರು ಸಂಪರ್ಕ ವರ್ಗಗಳ ವಿವರಗಳು :



**ಬೆಂಗಳೂರು ಕೇಂದ್ರ :** ದಿನಾಂಕ 11 ಹಾಗೂ 12ನೇ ಜನವರಿ 2025ರಂದು "ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು.

ಉಪನ್ಯಾಸದ ಅವಧಿ : ದಿನಾಂಕ 11.01.2025ರಂದು ಮೊದಲನೇ ಅವಧಿಯಲ್ಲಿ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಶ್ರೀ ಸ್ವಾನಂದ ಹೆಗಡೆ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು ಇವರು ಉಪನ್ಯಾಸ ನಿಡಿದರು. ಎರಡನೇ ಅವಧಿಯಲ್ಲಿ ಬ್ಯಾಂಕಿಂಗ್ ಕಾರ್ಯಚಟವಟಿಕೆಗಳ ಮೂಲಭೂತ ಅಂಶಗಳ ಕುರಿತು ಶ್ರೀ ಆರ್.ಎಸ್. ಪ್ರಕಾಶ್, ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು (ನಿ.), ಎಸ್.ಬಿ.ಐ. ಬೆಂಗಳೂರು ಇವರು ಉಪನ್ಯಾಸ ನೀಡಿದರು.

ದಿನಾಂಕ 12.01.2025ರಂದು ಮೊದಲನೇ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನ ವಿಷಯ ಕುರಿತು ಶ್ರೀ ಎಸ್.ಜಿ. ಕುಲಕರ್ಣಿ, ಮಾನ್ಯ ಬ್ಯಾಂಕಿಂ–ಗ್ ತಜ್ಞರು, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಕೇಸ್ ಸ್ಟಡೀಸ್ ಅನಾಲಿಸಿಸ್ ವಿಷಯದ ಕುರಿತು ಶ್ರೀ ಮಹಾಂತಪ್ಪ, ಮಾನ್ಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು.



**ವಿಜಯಪುರ ಕೇಂದ್ರ :** ದಿನಾಂಕ 11 ಹಾಗೂ 12ನೇ ಜನವರಿ 2025ರಂದು ಜೆ.ಎಸ್.ಎಸ್. ಆಸ್ಪತ್ರೆ, ಎನ್.ಹೆಚ್. 50, ಹೈಪರ್ ಮಾರ್ಟ್ ಹತ್ತಿರ, ವಿಜಯಪುರ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು.

ಉಪನ್ಯಾಸದ ಅವಧಿ : ದಿನಾಂಕ 11.01.2025ರಂದು ಮೊದಲನೇಯ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನ ವಿಷಯ ಹಾಗೂ ಕೇಸ್ ಸ್ಟಡೀಸ್ ಅನಾಲಿಸಿಸ್ ವಿಷಯದ ಕುರಿತು ಶ್ರೀಮತಿ ನೀಲಮ್ಮ ಕೊಲಗೇರಿ, ಮಾನ್ಯ ಸಂಯೋಜಕರು ಎಂ.ಬಿ.ಎ. ವಿಭಾಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವರು ಉಪನ್ಯಾಸ ನೀಡಿದರು.

ದಿನಾಂಕ 12.01.2025ರಂದು ಮೊದಲನೇಯ ಅವಧಿಯಲ್ಲಿ ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳು ವಿಷಯದ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸುಭಾಷ್ ಇಂಡಿ ಇವರು ಹಾಗೂ ಎರಡನೇ ಅವಧಿಯಲ್ಲಿ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಶ್ರೀ ಸ್ವಾನಂದ ಹೆಗಡೆ, ಮಾನ್ಯ ಸನ್ನದು ಲೆಕ್ಕಪರಿಶೋಧಕರು ಇವರು ಉಪನ್ಯಾಸ ನೀಡಿದರು.



**ಬಳ್ಳಾರಿ ಕೇಂದ್ರ :** ದಿನಾಂಕ 11 ಹಾಗೂ 12ನೇ ಜನವರಿ 2025ರಂದು "ಸಂಜಯಗಾಂಧಿ ಪಾಲಿಟೆಕ್ನಿಕ್ ಕಾಲೇಜು" ದೇವಿನಗರ, ಹೊಸಪೇಟೆ ರಸ್ತೆ, ಬಳ್ಳಾರಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು.

ಉಪನ್ಯಾಸದ ಅವಧಿ : ದಿನಾಂಕ 11.01.2025ರಂದು ಕೇಸ್ ಸ್ಟಡೀಸ್ ಅನಾಲಿಸಿಸ್ ವಿಷಯದ ಕುರಿತು ಡಾ. ಶಶಿಕಾಂತ ಡಿ.ಹೆಚ್. ಮಾನ್ಯ ಎಂ.ಕಾಂ. ಉಪನ್ಯಾಸಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್. ಇವರು ಉಪನ್ಯಾಸ ನೀಡಿದು.

ದಿನಾಂಕ 12.01.2025ರಂದು ಮಾಹಿತಿ ತಂತ್ರಜ್ಞಾನ ವಿಷಯದ ಕು–ರಿತು ಡಾ. ಸಾತ್ವಿಕ್ ಎಸ್. ಮಾನ್ಯ ಉಪನ್ಯಾಸಕರು, ಬಳ್ಳಾರಿ ಇವರು ಹಾಗೂ ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳ ಕುರಿತು ಡಾ. ಖಾಜಾ ಮೊಹರುದ್ದೀನ್, ಮಾನ್ಯ ಉಪನ್ಯಾಸಕರು, ಬಳ್ಳಾರಿ ಇವರು ಉಪನ್ಯಾಸ ನೀಡಿದರು.



**ಚಿಕ್ಕೋಡಿ ಕೇಂದ್ರ :** ದಿನಾಂಕ 11 ಹಾಗೂ 12ನೇ ಜನವರಿ 2025ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು.

ಉಪನ್ಯಾಸದ ಅವಧಿ : ದಿನಾಂಕ 11.01.2025ರಂದು ಮೊದಲನೇಯ ಅವಧಿಯಲ್ಲಿ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭ ಆರ್. ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಡಾ. ಅಭಯ ಕುಮಾರ ಗಸ್ತಿ, ಮಾನ್ಯ ಎಂ.ಕಾಂ. ಹಾಗೂ ಡಿಸಿಬಿಎಂ ಸಂಯೋಜಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರು ಉಪನ್ಯಾಸ ನೀಡಿದರು.

ದಿನಾಂಕ 12.01.2025ರಂದು ಮೊದಲನೇಯ ಅವಧಿಯಲ್ಲಿ ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳ ವಿಷಯದ ಕುರಿತು ಡಾ. ಈರಣ್ಣ ಭೂಸ್ತಲಿ, ಸಹ ಪ್ರಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ ಇವರು ಉಪನ್ಯಾಸ ನಿಡಿದರು. ಎರಡನೇ ಅವಧಿಯಲ್ಲಿ ಕೇಸ್ ಸ್ಟಡೀಸ್ ಅನಾಲೀಸಿಸ್ ವಿಷಯದ ಕುರಿತು ಡಾ. ಅಭಯ ಕುಮಾರ ಗಸ್ತಿ, ಮಾನ್ಯ ಎಂ.ಕಾಂ. ಹಾಗೂ ಡಿಸಿಬಿಎಂ ಸಂಂ–ಯೋಜಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರು ಉಪನ್ಯಾಸ ನೀಡಿದರು.



**ಹುಬ್ಬಳ್ಳಿ ಕೇಂದ್ರ :** ದಿನಾಂಕ 11 ಹಾಗೂ 12ನೇ ಜನವರಿ 2025 ರಂದು ಜೈಂಟ್ಸ್ ಇಂಗ್ಲಿಷ್ ಮಾಧ್ಯಮ ಶಾಲೆ, ಹೊಸ ಬಸ್ ನಿಲ್ದಾಣದ ಹತ್ತಿರ (ಅಕ್ಷಯ ಪಾರ್ಕ್ ಕಟ್ಟಡ) ಹುಬ್ಬಳ್ಳಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು.

ಉಪನ್ಯಾಸದ ಅವಧಿ : ದಿನಾಂಕ 11.01.2025ರಂದು ಮೊದಲನೇಯ ಅವಧಿಯಲ್ಲಿ ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳು ವಿಷಯದ ಕುರಿತು ಹಾಗೂ ಎರಡನೇ ಅವಧಿಯಲ್ಲಿ ಕೇಸ್ ಸ್ಟಡೀಸ್ ಅನಾಲಿಸಿಸ್ ವಿಷಯದ ಕುರಿತು ಡಾ. ಪ್ರಶಾಂತ ಹೆಚ್. ಮೇರವಾಡೆ, ಮಾನ್ಯ ಎಂ.ಕಾಂ. ಉಪನ್ಯಾಸಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರು ಉಪನ್ಯಾಸ ನೀಡಿದರು.

ದಿನಾಂಕ 12.01.2025ರಂದು ಮೊದಲನೇಯ ಅವಧಿಯಲ್ಲಿ ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭ ಆರ್. ಹಾಗೂ ಎರಡನೇ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನದ ಕುರಿತು ಶ್ರೀ ವಿಕ್ರಾಂತ ಪಾಟೀಲ, ಸಿವಿಲ್ ಇಂಜಿನಿಯರ್ ಇವರುಗಳು ಉಪನ್ಯಾಸ ನೀಡಿದರು.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದ ವಿಜೇತರು

| ಕ್ರ.ಸಂ | ಸಹಕಾರಿ ಹೆಸರು | ವಿಜೇತರು ಹೆಸರು | ಬಹುಮಾನ |
|---|---|---|---|
| 1 | ವಿಕಾಸ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ., ತಾ: ಹೊಸಪೇಟೆ, ಜಿ: ವಿಜಯನಗರ | ಮಹೇಶ್ ಕಿಳ್ಳಿಕ್ಯಾತರ | ಮೊದಲನೇ ಬಹುಮಾನ |
| 2 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. | ಶ್ರೀಮತಿ ರೇಣುಕಾ ಎಂ.ವಿ | ಎರಡನೇ ಬಹುಮಾನ |
| 3 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. | ಸಂತೋಷ ಹೆಚ್.ಜಿ. | ಮೂರನೇ ಬಹುಮಾನ |
| 4 | ಶ್ರೀ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಪಟ್ಟಣ ಪಂಚಾಯತ್ ಕಾಂಪ್ಲೆಕ್ಸ್ ಹತ್ತಿರ, ತಾ: ಹುಕ್ಕೇರಿ ಜಿ: ಬೆಳಗಾವಿ | ರೀತಾ ಎಸ್. ಪಾಟೀಲ್ | ಮೂರನೇ ಬಹುಮಾನ |
| 5 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಮೈಸೂರು. | ಶಿವಕುಮಾರ ಎ. | ಮೂರನೇ ಬಹುಮಾನ |
| 6 | ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ತಾ & ಜಿ: ಉಡುಪಿ | ಅಶ್ವಿನಿ | ಸಮಾಧಾನಕರ ಬಹುಮಾನ |
| 7 | ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಿಂಧನೂರು ರಸ್ತೆ, ತಾ: ಮಾನ್ವಿ, ಜಿ: ರಾಯಚೂರು | ಎಮ್. ನಾಗರಾಜ್ | ಸಮಾಧಾನಕರ ಬಹುಮಾನ |

## ಉದ್ಘಾಟನೆ



**ಮಾನವಿ :** ದಿನಾಂಕ 4-2-2025 ಮಂಗಳವಾರ. ನಾಗಾಲ್ಯಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿ ಸಂಸ್ಥೆ ಜನ ಸಾಮಾನ್ಯರನ್ನು ಗುರುತಿಸಿ ನನ್ನಿಂದ ಲಿಫ್ಟ್ ಉದ್ಘಾಟನೆ ಮಾಡಿಸಿದ್ದು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ ಎಂದು ಸಹಕಾರಿ ಸದಸ್ಯರಾದ ವಿಶೇಷ ಚೇತನ ಶ್ರೀ ನಾಗರಾಜ ಶೆಟ್ಟಿ ಆಲ್ದಾಳ ಸಂಸ್ಥೆಯ ಲಿಫ್ಟ್‌ನ್ನು ಉದ್ಘಾಟಿಸಿ ಹರ್ಷ ವ್ಯಕ್ತಪಡಿಸಿದರು. ಈ ಸಂಸ್ಥೆಯು ಒಳ್ಳೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯನ್ನು ಹೊಂದಿದೆ. ಗ್ರಾಹಕರಿಗೆ ಒಳ್ಳೆಯ ಸ್ಪಂದನೆ ಇದೆ. ಸಂಸ್ಥೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸೇವೆ ಸಲ್ಲಿಸುವಂತಾಗಲಿ ಎಂದರು.

ಅಧ್ಯಕ್ಷೆ ನಾಗರತ್ನಮ್ಮ ಬಿ ಪಾಟೀಲ ಮಾತನಾಡಿ ಹಿರಿಯ ನಾಗರಿಕರಿಗೆ ಮತ್ತು ವಿಶೇಷ ಚೇತನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಲಿಫ್ಟ್ ಅಳವಡಿಸಲಾಗಿದೆ.

ಮಹಿಳೆಯರಿಂದ ನಡೆಸುತ್ತಿರುವ ನಮ್ಮ ಸಂಸ್ಥೆ ವತ್ತಿ ಸಾಲ, ವಾಹನ ಸಾಲ, ಮನೆ, ಜಾಗ, ಬಂಗಾರದಮೇಲಿನ ಸಾಲ ರಿಯಾಯತಿ ಬಡ್ಡಿದರದಲ್ಲಿ ಸಾಲ ನೀಡುವುದರ ಜೊತೆಗೆ ಮಹಿಳೆಯರಿಗೆ ಮತ್ತು ಅನೇಕ ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಟ್ಟಿದೆ. ಗ್ರಾಹಕರು ಸರಿಯಾಗಿ ಮರು ಪಾವತಿಸಿ ವಿಶ್ವಾಸ ಗಳಿಸಿಕೊಂಡಲ್ಲಿ ಸಂಸ್ಥೆ ಅವರೊಂದಿಗೆ ಸದಾ ಇರುತ್ತದೆ. ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ಸಿಗದ ಸೌಲಭ್ಯಗಳನ್ನು ಸಹಕಾರಿ ಸಂಸ್ಥೆಗಳು ಅನುಕೂಲ ಮಾಡಿಕೊಡುತ್ತಿವೆ. ತಮಗೆ ಅವಶ್ಯಕತೆ ಇದ್ದಷ್ಟು ಮಾತ್ರ ಸಾಲ ತೆಗೆದುಕೊಂಡು, ಸರಿಯಾಗಿ ಮರು ಪಾವತಿ ಮಾಡುತ್ತ ವಿಶ್ವಾಸ ಉಳಿಸಿಕೊಳ್ಳುವುದು ಪ್ರತಿಯೊಬ್ಬ ಗ್ರಾಹಕರ ಜವಾಬ್ದಾರಿ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಶ್ರೀಮತಿ ಲಿಂಗಮ್ಮ ಕರ್ಕಿಹಳ್ಳಿ, ನಿರ್ದೇಶಕರಾದ ಶ್ರೀಮತಿ ಸರೋಜಾ ಗುಮ್ಮಾ, ಶ್ರೀಮತಿ ಶೈಲಜಾ ರೌಡೂರು, ಶ್ರೀಮತಿ ಮಂಜುಳಾ ಹೀರಾ, ಶ್ರೀಮತಿ ಪದ್ಮಾವತಿ ಬಿ ವಿ ರೆಡ್ಡಿ, ಶ್ರೀ ಮಹದೇವಪ್ಪ ಮಾಸ್ಟರ್, ಶ್ರೀಮತಿ ಜ್ಯೋತಿ ದುರ್ಗದ, ಡಾ. ಬಸವಪ್ರಭು ಪಾಟೀಲ, ಎಂ. ಮಲ್ಲಿಕಾರ್ಜುನಗೌಡ, ಕಾನೂನು ಸಲಹೆಗಾರರಾದ ಗುಮ್ಮಾ ಬಸವರಾಜ ವಕೀಲರು, ಎಂ. ವೀರನಗೌಡ ವಕೀಲರು, ಡಿ. ಜಿ ಕರ್ಕಿಹಳ್ಳಿ, ಮಹಾಂತೇಶ ರೌಡೂರು, ಶಂಭನಗೌಡ ಹರ್ವಿ, ದೇವೇಂದ್ರ ದುರ್ಗದ, ಸುಬ್ಬರಾವ್, ಆಂಜನೇಯ ಸ್ವಾಮಿ, ಮಂಜುನಾಥ ರೆಡ್ಡಿ, ಮುಜೀಬ್, ರಾಜು ಸದ್ಗುರು ಮೆಡಿಕಲ್ ಹಾಗೂ ಸಿಬ್ಬಂದಿ ಹಾಜರಿದ್ದರು.

## ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯ ಸಾಧನೆ ಶ್ಲಾಘನೀಯ : ಶ್ರೀ ಶರಣಗೌಡ ಜಿ. ಪಾಟೀಲ



**ಉಡುಪಿ :** ದೇಶದಲ್ಲಿ ಸಹಕಾರಿ ವ್ಯವಸ್ಥೆ ಕಾಯ್ದೆರೂಪಕ್ಕೆ ಬರುವ ಮೊದಲೇ ನಮ್ಮ ಜನರಜೀವನ ಪದ್ದತಿಯಾಗಿತ್ತು. ಸರಕಾರದ ಯಾವುದೇ ಹಸ್ತಕ್ಷೇಪ ಇರಬಾರದೆಂಬ ಉದ್ದೇಶದಿಂದ ಸೌಹಾರ್ದ ಸಹಕಾರ ಕಾಯ್ದೆ ಜಾರಿಗೆ ಬಂದಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ಹೇಳಿದರು.

ದಿನಾಂಕ 12–01–2025 ರಂದು ಗಂಗೊಳ್ಳಿ ಪೇಟೆ ಶ್ರೀ ವಿಠಲ ರಕುಮಾಯಿತಥಾ ಮುಖ್ಯಪ್ರಾಣ ದೇವಸ್ಥಾನದ ಶ್ರೀ ವೀರವಿಠಲ ಸಭಾಗೃಹದಲ್ಲಿ ನಡೆದ ಗಂಗೊಳ್ಳಿ ಟೌನ್ ಸೌಹಾರ್ದ ಕೊ–ಆಪರೇಟಿವ್ ಸೊಸೈಟಿ ಇದರ ಸಂಸ್ಥಾಪಕ ದಿನಾಚರಣೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ 25ನೇ ವರ್ಷದ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂತರಾಷ್ಟ್ರೀಯ ಮಟ್ಟದಲ್ಲಿ 129 ರಾಷ್ಟ್ರಗಳಲ್ಲಿ ಸಹಕಾರಿ ವ್ಯವಸ್ಥೆ ಜಾರಿಯಲ್ಲಿದೆ. ತೀರಾಗ್ರಾಮೀಣ ಪ್ರದೇಶದಲ್ಲಿರುವ ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ಸಂಸ್ಥೆಯ ಸಾಧನೆ ಶ್ಲಾಘನೀಯವಾಗಿದ್ದು ಸಹಕಾರಿ ವ್ಯವಸ್ಥೆಯು ಸರ್ಕಾರಿ ವ್ಯವಸ್ಥೆಯನ್ನು ಸುವ್ಯಸ್ಥೆಗೆ ಕೊಂಡೊಯ್ಯಲು ಸಾಧ್ಯ ಎಂದರು. ಸಂಘದ ಕಾರ್ಯಕ್ಷೇತ್ರದ ಶಿಕ್ಷಣ ಸಂಸ್ಥೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಒಟ್ಟು ರೂ. 2,01,000/–ಮೊತ್ತದ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು.

ಸಂಘದ ಹಿರಿಯ ನಿರ್ದೇಶಕ ಶ್ರೀ ಎಚ್ ಗಣೇಶ್ ಕಾಮತ್ ಕಾರ್ಯಕ್ರಮ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ಜಿ. ವೆಂಕಟೇಶ್ ಶೆಣೈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಂಘದ ವ್ಯವಹಾರಗಳಿಗೆ ವಾಟ್ಸ್‌ಪ್ ಸಂದೇಶ ವ್ಯವಸ್ಥೆಯನ್ನು ಉಪಾಧ್ಯಕ್ಷ ಶ್ರೀ ಜಿ. ವಿಶ್ವನಾಥ ಆಚಾರ್ಯ ಉದ್ಘಾಟಿಸಿದರು.

ನಿರ್ದೇಶಕರಾದ ಶ್ರೀ ಎನ್. ಮಾಧವಕಿಣಿ, ಶ್ರೀ ಎಸ್. ವೆಂಕಟರಮಣ–ಆಚಾರ್ಯ, ಶ್ರೀ ಬಿ, ರಾಘವೇಂದ್ರ ಪೈ, ಶ್ರೀ ಕೆ ಪರಮೇಶ್ವರ ನಾಯಕ್, ಶ್ರೀ ನಾಗಪ್ರಸಾದ್ ಪೈಎಮ್.ಜಿ., ಶ್ರೀ ಕೆ. ಗೋಪಾಲಕೃಷ್ಣ ನಾಯಕ್, ಶ್ರೀಮತಿ ಮಾಲಾ ಕೆ ನಾಯಕ್, ಶ್ರೀಕಿರಣ್ ಫಿಲಿಪ್ ಪಿಂಟೋ, ಶ್ರೀ ಮಹಾಬಲ ಪೂಜಾರಿ, ಶ್ರೀ ಜಿ. ವೆಂಕಟೇಶ್ ನಾಯಕ್ ಹಾಗೂ ಶ್ರೀ ವಿಷ್ಣು ಪಡಿಯಾರ್ ಸಭೆಯಲ್ಲಿ ಉಪಸ್ಥಿತರಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ



**ಮೈಸೂರು :** ಮೈಸೂರು ಜಿಲ್ಲೆಯಲ್ಲಿ 2023–24ನೇ ಸಾಲಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 30.01.2025ರ ಗುರುವಾರದಂದು ಬೆಳಿಗ್ಗೆ 10:00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಹಾಗೂ ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರ ಸಹಕಾರದೊಂದಿಗೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಇದರ ಪ್ರಾಂತೀಯ ಕಛೇರಿ, ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನ ಹತ್ತಿರ, ಮೈಸೂರು–570004. ಈ ಕಛೇರಿಯಲ್ಲಿ ಆಯೋಜಿಸಲಾಗಿತ್ತು.

ಸದರಿ ಸಭೆಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸಭೆಯ ಸ್ವಾಗತವನ್ನು ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ. ಭಗೀರಥ ನೆರವೇರಿಸಿದರು.

ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳು ಲಾಭಕ್ಕೆ ಬರಲು ಅನುಸ–ರಿಸಬೇಕಾದ ಕ್ರಮಗಳ ಬಗ್ಗೆ ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ರಮೇಶ್ ಕುಮಾರ್ ರವರು ಉಪನ್ಯಾಸವನ್ನು ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 21 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು.

## 25ನೇ ವರ್ಷದ ರಜತ ಮಹೋತ್ಸವ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆ

**ತುಮಕೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 25ನೇ ವರ್ಷದ ರಜತ ಮಹೋತ್ಸವ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ದ್ವಜಾರೋಹಣ ನೆರವೇರಿಸಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಶಿವಮೊಗ್ಗ



ಶ್ರೀ ಪ್ರಸನ್ನಕುಮಾರ್ ಎ ಆರ್
ಅಧ್ಯಕ್ಷರು



ಶ್ರೀ ಮಂಜುನಾಥ ಕೆ
ಉಪಾಧ್ಯಕ್ಷರು

ಸಹಕಾರಿಯ ನಿರ್ದೇಶಕರುಗಳಾಗಿ ಶ್ರೀ ನಾರಾಯಣಮೂರ್ತಿ ಎಸ್ ಎ, ಶ್ರೀ ಗೋಪಾಲ್ ಎಸ್ ಜಿ, ಶ್ರೀ ಹರಿಕೃಷ್ಣ ಯು, ಶ್ರೀ ಶ್ರೀನಿವಾಸಮೂರ್ತಿ ಎಂಜಿ, ಶ್ರೀ ಗುರುರಾಜ ಎ ಎಸ್, ಶ್ರೀ ಕುಲಕರ್ಣಿ ಸಿ ಎಂ, ಶ್ರೀಮತಿ ವಾರಿಜ ಜಗದೀಶ್, ಶ್ರೀಮತಿ ರತ್ನಾವತಿ ಕೆ ಎನ್, ಶ್ರೀ ಸುಬ್ರಮಣ್ಯ ಹೆಚ್ ಎಸ್, ಶ್ರೀ ಶ್ರೀನಿವಾಸಮೂರ್ತಿ ಎನ್ ವಿ, ಶ್ರೀ ತಿಮ್ಮಪ್ಪ ಕಾಕಲ್ ಇವರುಗಳು ಆಯ್ಕೆಯಾಗಿರುತ್ತಾರೆ.



**ಚಿತ್ರದುರ್ಗ** : ದಿನಾಂಕ 12.01.2025ರಂದು ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆಯನ್ನು ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಚಿತ್ರದುರ್ಗ ಇಲ್ಲಿ ಆಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಭಾಗವಹಿಸಿದ್ದರು. ಆರ್ಯವೈಶ್ಯ ಸಂಘದ ನಿರ್ದೇಶಕರಾದ ಶ್ರೀ ಕೆ.ಎಸ್. ಚಂದ್ರಮೋಹನ್, ವೀರಶೈವ ವಿಧ್ಯಾರ್ಥಿ ನಿಲಯದ ಅಧ್ಯಕ್ಷರಾದ ಶ್ರೀ ಪಿ.ಎನ್. ಮೋಹನ್ ಕುಮಾರ್, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್. ವೇದಮೂರ್ತಿ ಉಪಸ್ಥಿತರಿದ್ದರು.

## ಪ್ರಯಾಗರಾಜ್ ಮಹಾ ಕುಂಭಮೇಳಕ್ಕೆ ಪ್ರವಾಸಿ ಸೌಹಾರ್ದ ಸಹಕಾರಿಯಿಂದ ಮೊದಲನೇ ತಂಡದ ಪ್ರವಾಸ ಯಾತ್ರೆ.



**ಬೀದರ** : ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಬೀದರ ಜಿಲ್ಲೆಯ ಪ್ರವಾಸಿ ಸೌಹಾರ್ದ ಸಹಕಾರಿ ಬೀದರ ವತಿಯಿಂದ ಮೊದಲನೆ ತಂಡದ ಮೂರು ಬಸ್ಸುಗಳಲ್ಲಿ ಒಟ್ಟು 120 ಯಾತ್ರಿಕರು ಪ್ರಯಾಣ ಬೆಳೆಸಿದರು. ಯಾತ್ರಾ ಕಾರ್ಯಕ್ರಮದ ಸಾನಿಧ್ಯವನ್ನು ಷ.ಬ್ರ.ಗಂಗಾಧರ ಶಿವಾಚಾರ್ಯರು ಲಾಡಗೇರಿ ಹಿರೇಮಠ ಸಂಸ್ಥಾನ ಬೀದರ ಇವರು ವಹಿಸಿದರು, ಅಧ್ಯಕ್ಷತೆಯನ್ನು ಪ್ರವಾಸಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಗುರುನಾಥ ಜ್ಯಾಂತೀಕರ್ ವಹಿಸಿದರು, ಮುಖ್ಯ ಅತಿಥಿಗಳಾಗಿ ಪೂಜಾ ಬಸ್ ಮಾಲಿಕರಾದ ರಾಚಪ್ಪ ಪಾಟೀಲ್, ಒಕ್ಕೂಟ ನಿರ್ದೇಶಕರಾದ ಜಗನಾಥ ಕರಂಜೆ, ಶಿವಶರಣ ಸ್ವಾಮಿ, ರಾಜಶೇಖ ನಾಗಮೂರ್ತಿ, ಬಾಬುರಾವ ಕಾರಬಾರಿ, ಸಂಜೀವ ಪಾಟೀಲ್, ಶಿವಬಸಪ್ಪ ಚನ್ನಮಲ್ಲೆ, ಸಂಜಯ ಕ್ಯಾಸಾ, ಶ್ರೀಕಾಂತ ಸ್ವಾಮಿ ಸೋಲಪೂರ, ನಾಗಶೆಟ್ಟಿ ಪಾಟೀಲ್, ಸಂಜೀವಕುಮಾರ ಸಜ್ಜನ ಇತರರು ಉಪಸ್ಥಿತರಿದ್ದರು. ಸಹಕಾ–ರಿಯ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ್ ಮಾತನಾಡಿ ಬೀದರ ಜಿಲ್ಲೆಯಲ್ಲಿ ಪ್ರವಾಸಿ ಸೌಹಾರ್ದ ಸಹಕಾರ ಸಂಘವು ಪ್ರವಾದ ಚಟುವಟಿಕೆಗಾಗಿ ಮಾತ್ರ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆ ಪ್ರವಾಸೋದ್ಯೋಮಕ್ಕೆ ಒತ್ತು ನೀಡುವ ಜೊತೆಗೆ ಅತಿ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಪ್ರಾವಾಸಿ ಸೇವೆಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ಪ್ರಸ್ತುತ ಪ್ರವಾಸಿ ಸೌಹಾರ್ದ ಸಹಕಾರಿಯು ತನ್ನ ಸದಸ್ಯರುಗಳಿಗೆ ಕಡಿಮೆ ದರದಲ್ಲಿ ಉತ್ತರ ಭಾರತದ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಓಂಕಾರೇಶ್ವರ, ಉಜ್ಜನ ಮಹಾಕಾಳೇಶ್ವರ, ಕಾಶಿವಿಶ್ವನಾಥ, ಅಯೋಧ್ಯ ರಾಮ ಮಂದಿರ ಹಾಗೂ ಪ್ರಯಾಗ ರಾಜ ಸಂಗಮ ಸ್ನಾನಗಳನ್ನು ಯಾತ್ರೆಯಲ್ಲಿ ಹೊಂದಿದೆ.



**ದಾವಣಗೆರೆ** : ದಿನಾಂಕ 27.01.2025ರಂದು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ಇದರ ನೂತನ ಆಡಳಿತ ಮಂಡಳಿ ಸದಸ್ಯರ ಮೊದಲ ಸಭೆಯನ್ನು ಒಕ್ಕೂಟದ ಕಛೇರಿಯಲ್ಲಿ ಹಮ್ಮಿಕೊಳ್ಳಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ವಹಿಸಿದ್ದರು. ಸಭೆಯ ವಿಶೇಷ ಆಹ್ವಾನಿತರಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಭಾಗವಹಿಸಿ ಜಿಲ್ಲಾ ಒಕ್ಕೂಟದ ಬೆಳವಣಿಗೆಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜಿ.ಎಮ್. ರುದ್ರೇಗೌಡರವರು ಉಪಸ್ಥಿತರಿದ್ದರು.

# ಕ್ಯಾಲೆಂಡರ್ ಬಿಡುಗಡೆ



**ಮೈಸೂರು :** ಕನಕಗಿರಿ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ: 28.12.2024 ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಸಹಕಾರಿಯ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸಹಕಾರಿಯ ಕ್ಯಾಲೆಂಡರ್ ನ್ನು ಬಿಡುಗಡೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು.



**ಮೈಸೂರು :** ದಿನಾಂಕ 01.01.2025ರಂದು ವಿಶ್ವಮಾನವ ಸೌಹಾರ್ದ ಸಹಕಾರಿ ನಿಯಮಿತ ಪಿರಿಯಾಪಟ್ಟಣ, ಸಂಸ್ಥೆಯ ವತಿಯಿಂದ 2025ರ ಕ್ಯಾಲೆಂಡರ್ ಬಿಡುಗಡೆ ಜರುಗಿರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ : 03.01.2025ರಂದು ಆಶಾದೀಪಾ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹೆಚ್ ಡಿ ಕೋಟೆ, ನೂತನ ಸಹಕಾರಿಯ ಉದ್ಘಾಟನೆಯನ್ನು ಮಾನ್ಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರು ಭಾಗವಹಿಸಿದರು.



**ಮೈಸೂರು :** ದಿನಾಂಕ 26.12.2024ರಂದು ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಸಂಜೆ 6.00 ಗಂಟೆಗೆ ಸಹಕಾರಿಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರಿಯ ಕ್ಯಾಲೆಂಡರ್ ನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಕೆ ಆರ್ ಸತ್ಯನಾರಾಯಣರವರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಬಿಡುಗಡೆ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು.



**ಕೊಡಗು :** ದಿನಾಂಕ : 02.01.2025ರಂದು ಪಾವನಿ ಸೌಹಾರ್ದ ಸಹಕಾರಿ ಸಂಘ ನಿ., ಇದರ ಉದ್ಘಾಟನಾ ಕಾರ್ಯಕ್ರಮವು ಜರುಗಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗಿಯಾಗಿದ್ದರು.



**ದಕ್ಷಿಣ ಕನ್ನಡ :** ಸಮಷ್ಟಿ ಸೌಹಾರ್ದ ಸಹಕಾರಿ ಸಂಘದ ನೂತನ ಪ್ರಧಾನ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದ್ ಬಂಗೇರ ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿಲಾಯಿತು. ಈ ಸಂದರ್ಭದಲ್ಲಿ ಸಹಕಾರಿಗಳಿಗೆ ಸಂಸ್ಥೆಯ ಸುಸಜ್ಜಿತ ಕಛೇರಿ ಹೊಂದಿರುವುದಕ್ಕೆ ಮೆಚ್ಚುಗೆ/ಅಭಿನಂದನೆ ವ್ಯಕ್ತಪಡಿಸಿ ಸಹಕಾರಿಗಳಿಗೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಯಾದ ಶ್ರೀ ವಿಜಯ ಬಿ.ಎಸ್ ರವರು ಉಪಸ್ಥಿತರಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ



**ಮೂಡುಬಿದಿರೆ :** ಗ್ರಾಮ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘ ಕ–ರಿಂಜೆ ಆಶ್ರಯದಲ್ಲಿ ಗ್ರಾಮ ಪಂಚಾಯತ್ ಹೊಸಂಗಡಿ, ಶ್ರೀ ಜಗದ್ಗುರು ರಾಘವೇಂದ್ರ ಚಾರಿಟಬಲ್ ಟ್ರಸ್ಟ್ ಕರಿಂಜೆ, ರೋಟಿ ಕ್ಲಬ್ ಸಿದ್ದಕಟ್ಟೆ ಫಲ್ಗುಣಿ ಹಾಗೂ ಶ್ರೀ ಸತ್ಯಬಾಯಿ ಬಾಲವಿಕಾಸ ಕೇಂದ್ರ ಮಂಗಳಾದೇವಿ ಇವರುಗಳ ಸಹಯೋಗದೊಂದಿಗೆ ಗ್ರಾಮ ಪಂಚಾಯತ್ ಸಭಾಂಗಣ ಹೊಂಗಡಿ ಇಲ್ಲಿ ಉಚಿತ ಆರೋಗ್ಯ, ದಂತ ಕಣ್ಣಿನ ತಪಾಸಣಾ ಚಿಕಿತ್ಸಾ ಶಿಬಿರ ಆಯೋಜಿಸಲಾಗಿತ್ತು. ಮಂಗಳೂರಿನ ಅತ್ತಾವರ ಕೆ.ಎಂ.ಸಿ ಆಸ್ಪತ್ರೆ ಹಾಗೂ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮಂಗಳೂರು ಇಲ್ಲಿನ ನುರಿತ, ಅನುಭವಿ ವೈದ್ಯರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಒಟ್ಟು 200ಕ್ಕೂ ಹೆಚ್ಚಿನ ರೋಗಿಗಲು ಈ ಶಿಬಿರದ ಸದುಪಯೋಗ ಪಡೆದುಕೊಂಡರು. ಕಣ್ಣಿನ ಸಮಸ್ಯೆ ಇದ್ದ 45 ಜನವರಿಗೆ ಸ್ಥಳದ್ಲಲೇ ಉಚಿತವಾಗಿ ಕನ್ನಡಕಗಳನ್ನು ಹಾಗೂ ಎಲ್ಲಾ ಖಾಯಿಲೆಗಳಿಗೆ ಔಷಧಿಗಳನ್ನು ಉಚಿತವಾಗಿ ನೀಡಲಾಯಿತು. 50 ಜನರಿಗೆ ರಕ್ತ ತಪಾಸಣೆ ಮಾಡಲಾಗಿದ್ದು ಹೆಚ್ಚಿನ ಚಿಕಿತ್ಸೆ ಅವಶ್ಯಕತೆಯುಳ್ಳ 25 ಜನರನ್ನು ಬುಧವಾರ ಕೆ.ಎಮ್.ಸಿ ಅತ್ತಾವರ ಆಸ್ಪತ್ರೆಗೆ ಬರಲು ಸೂಚಿಸಲಾಗಿದೆ. ಅನೇಕರಿಗೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯ ಅವಶ್ಯಕತೆಯಿದ್ದು ಅವರಿಗೆ ಸಂಪೂರ್ಣ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಹೊಸಂಗಡಿ ಗ್ರಾಮ ಪಂಚಯತ್ ಜಗದೀಶ್ ಹೆಗ್ಡೆ ಶಿಬಿರ ಉದ್ಘಾಟಿಸಿದರು. ಪಿಟಿಒ ಗಣೇಶ ಶೆಟ್ಟಿ, ಗ್ರಾಮ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಸುಧಾಕರ ನೂಯಿ, ಕೆಎಂಸಿ ಆಸ್ಪತ್ರೆಯ ಪಿಆರ್‌ಒ ಹರ್ಬರ್ಟ್ ಮಂಗಳಾದೇವಿ ಇದರ ಸಂಚಾಲಕ ಸುರೇಶ್ ಬೈಂದೂರ್ ಶಿಬಿರದ ಬಗ್ಗೆ ಮಾಹಿತಿ ನೀಡಿ ಶಿಬಿರ ನಿರ್ವಹಿಸಿದರು.

## ಕ್ಯಾಲೆಂಡರ್ ಬಿಡುಗಡೆ



**ಪಾಂಡವಪುರ :** ದಿನಾಂಕ 27–12–2024 ರಂದು ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿಯ ವತಿಯಿಂದ 2025ನೆಯ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು.

ಕ್ಯಾಲೆಂಡರ್ ಬಿಡುಗಡೆ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಎಂ. ಹೇಮಂತ್ ಕುಮಾರ್ ಉಪಾಧ್ಯಕ್ಷರಾದ ಶ್ರಿ ಪ್ರದೀಪ.ಸಿ. ನಿರ್ದೇಶಕರುಗಳಾದ ಶ್ರೀ ಬಿ.ಟಿ. ನಾಗರಾಜು, ಶ್ರೀ. ಎಂ. ಕೃಷ್ಣ, ಶ್ರೀ ಲಕ್ಷ್ಮಣ, ಶ್ರೀ ನಂದೀಶ್ ಕುಮಾರ್, ಶ್ರೀ ಕುಮಾರ ಸ್ವಾಮಿ, ಶ್ರೀ ಕಿರಣ್ ಕುಮಾರ್ ಹಾಗೂ ಸಿ. ಈ. ಓ. ಕೋಮಲ್ ಕುಮಾರ್ ಅವರುಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಧ್ಯಕ್ಷರು ಮಾತನಾಡಿ 2025ನೆಯ ವರ್ಷದಲ್ಲಿ ಎಲ್ಲರಿಗೂ ಒಳ್ಳೆಯದಾಗಲಿ ಮತ್ತು ನಮ್ಮ ಸೌಹಾರ್ದದ ಏಳಿಗೆಗೆ ಹರಸಿ ಆಶೀರ್ವದಿಸಿ ಎಂದು ಷೇರುದಾರರು ಮತ್ತು ಗಾಣಿಗ ಸಮಾಜದ ಬಂಧುಗಳಲ್ಲಿ ವಿನಂತಿಸಿದರು. ಷೇರುದಾರರು ತಾವು ಪಡೆಯುವ ಸಾಲದ ಕಂತುಗಳನ್ನು ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಬೇಕೆಂದು ಮನವಿ ಮಾಡಿದರು.

ಸಾಂಕೇತಿಕವಾಗಿ ನಮ್ಮ ಶ್ರೀಯುತ ಷೇರುದಾರರುಗಳಾದ ಸೋಮಸುಂದರ್, ಪ್ರಕಾಶ್, ಗೋಪಾಲಯ್ಯ, ಪೃಥ್ವಿರಾಜ್, ಹರಿಪ್ರಸಾದ್, ಚಂದ್ರಶೇಖರ್, ಶ್ರೀಮತಿ ಸಂಧ್ಯಾ ಶಂಕರ್, ಶರತ್ ಕುಮಾರ್, ಗಣಪತಿ ದೇವಸ್ಥಾನದ ಅರ್ಚಕರಾದ ಶ್ರೀ. ನಾಗಣ್ಣ ಹಾಗೂ ಇತರ ಷೇರುದಾರರುಗಳಿಗೆ ಕ್ಯಾಲೆಂಡರ್ ವಿತರಣೆ ಮಾಡಲಾಯಿತು.



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ಯಲಹಂಕ ಉಪನಗರ, ಬೆಂಗಳೂರು 560064. ಇವರು ಶ್ರೀ ಶ್ರೀಶ್ರೀ ಮಹಾಯೋಗಿ ವೇಮನರ 613 ನೇ ಜಯಂತ್ಯೋತ್ಸವದ ಪ್ರಯುಕ್ತರೆಡ್ಡಿಜನ ಸಂಘ ಬೆಂಗಳೂರು ಉತ್ತರ ವಲಯ ಹಾಗೂ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 21.01.2025 ರಂದು ಸಹಕಾರಿಯಕೇಂದ್ರಕಛೇರಿಆವರಣಮತ್ತು ವರ್ತೂರು ಶಾಖೆಯಲ್ಲಿರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ ಈ ಮಹತ್ವದ ಶಿಬಿರಕ್ಕೆ ಒಟ್ಟು 286 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ ಈ ಮಹತ್ವದಕಾರ್ಯಕ್ರಮವು ಬಹಳ ಯಶಸ್ವಿಯಾಗಿ ಜರುಗಿತು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆಯ ಆಚರಣೆಯ ವರದಿಗಳು



**ಚಿಂಚನಿ :** ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಚಿಂಚನಿ ಸಹಕಾರಿಯಲ್ಲಿ 76ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಬೆಳಗಾವಿ :** ಸುಣಧೋಳಿ ಕಲ್ಪತರು ಸೌಹಾರ್ದ ಸಹಕಾರಿ ಸಂಘ ನಿ., ಸುಣಧೋಳಿ ಸಹಕಾರಿಯಲ್ಲಿ 76ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳ್ಳಟ್ಟಿ :** ದಿನಾಂಕ : 26/01/2025 ರಂದು 76ನೇ ಗಣರಾಜೋತ್ಸವ ದಿನಾಚರಣೆಯನ್ನು ಆದರ್ಶ ಸೌಹಾರ್ದ ಸಹಕಾರಿ ಸಂಘ ನಿ., ಬೆಳ್ಳಟ್ಟಿಯಲ್ಲಿ ಸಹಕಾರಿಯ ಧ್ವಜಾರೋಹನವನ್ನು ಸಹಕಾರಿಯ ಅದ್ಯಕ್ಷರಾದ ಶ್ರೀ ಶೇಖರಪ್ಪ ಬ. ಮಹಾಜನಶೆಟ್ಟರ ಇವರು ನೆರವೇರಿಸಿದರು. ಮತ್ತು ಸಹಕಾ–ರಿಯ ಉಪಾದ್ಯಕ್ಷರಾದ ಶ್ರೀ ಸಂತೋಷರಡ್ಡಿ ವೆ. ಮೇಕಳಿ ನಿರ್ದೇಶಕರಾದ ಶ್ರೀ ಚನ್ನಬಸಯ್ಯ ಜೋ. ಹೊಂಬಳಮಠ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ನಬೀಸಾಬ ಪೀ. ಪಿಂಜಾರ ಹಾಗೂ ಸಹಕಾರಿ ಸಂಘದ ಎಲ್ಲಾ ಸಿಬ್ಬಂದಿವರ್ಗದವರು ಮತ್ತು ಕೆ.ಸಿ.ಸಿ. ಬ್ಯಾಂಕ್ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಾಗವಾಡ :** ದಿನಾಂಕ 12.02.2025 ರಂದು ತಾಲೂಕಿನ ಶಿರಗುಪ್ಪಿಯ ಶ್ರೀ ಶಾಂತಿಸಾಗರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ಕಛೇರಿಯ ಆಡಳಿತ ಮಂಡಳಿಯ ಸದಸ್ಯರಿಗೆ, ಶಾಖೆಗಳ ಸಲಹಾ ಸಮಿತಿಯ ಸದಸ್ಯ–ರಿಗೆ ಮತ್ತು ಎಲ್ಲಾ ಶಾಖೆಗಳ ಸಿಬ್ಬಂದಿ ವರ್ಗದವರಿಗೆ ಪಟ್ಟಣದ ವಿದ್ಯಾಸಾಗರ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಒಂದು ದಿನದ ವಿಶೇಷ ತರಬೇತಿ ಶಿಬಿರವು ನಡೆಯಿತು.

ಪ್ರಧಾನ ಶಾಖೆಯ ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಕಾಗವಾಡ, ಕಬ್ಬೂರ, ಶೇಡಬಾಳ, ಸದಲಗಾ, ಇಂಗಳಿ, ಬನಜವಾಡ, ಮೊಳವಾಡ, ಚಿಂಚಲಿ ಶಾಖೆಗಳ ಸಲಹಾ ಸಮಿತಿಯ ಸದಸ್ಯರಿಗೆ, ಸಿಬ್ಬಂದಿ ವರ್ಗದವರಿಗೆ ಒಂದು ದಿನದ ವಿಶೇಷ ತರಬೇತಿ ಶಿಬಿರದಲ್ಲಿ ಉಪನ್ಯಾಸಕರಾಗಿ ಹರಿಹರದ ಕಿರ್ಲೋಸ್ಕರ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೋ. ಡಾ. ನಂದೀಶ ಹಿರೇಮಠ ಮಾರ್ಗದರ್ಶನ ಮಾಡಿದರು. ಶಿಬಿರಕ್ಕೆ ಚಾಲನೆ ನೀಡಲಾಯಿತು. ಡಾ. ನಂದೀಶ ಹಿರೇಮಠ, ಪ್ರಧಾನ ಶಾಖೆಯ ಅಧ್ಯಕ್ಷ ವಿದ್ಯಾಸಾಗರ ಮಾಣಗಾಂವೆ, ಉಪಾಧ್ಯಕ್ಷ ಪರಂದರ ಕನವಾಡೆ, ಡಾ. ಎಂ.ಎನ್. ಭೋಮಾಜ, ಸೇರಿದಂತೆ ಎಲ್ಲ ಶಾಖೆಯ ಸಲಹಾ ಸಮಿತಿಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಈ ವೇಳೆ ಪ್ರಧಾನ ಶಾಖೆಯ ಅಧ್ಯಕ್ಷ ವಿ.ಡಿ. ಮಾಣಗಾಂವೆ, ಉಪಾದ್ಯಕ್ಷ ಪುರಂದರ ಕನವಾಡೆ, ನಿರ್ದೇಶಕರಾದ ಡಾ. ಎಂ.ಎನ್ ಭೋಮಾಜ, ಸಾಗರ ದುಗ್ಗೆ, ಮಹಾವೀರ ಮಾದನ್ನವರ ಸೇ–ರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಹರಪನಹಳ್ಳಿ** : ಆದರ್ಶ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗೆ ನೂತನ ಅಧ್ಯಕ್ಷರಾಗಿ ಜಿ. ನಂಜನಗೌಡ ಸಿಎ ಹಾಗೂ ಉಪಾಧ್ಯಕ್ಷರಾಗಿ ಎಸ್.ಎ ವೇಣುಗೋಪಾಲ್ ಅವಿರೋಧವಾಗಿ ಆಯ್ದೆಯಾದರು. ನೂತನ ಅಧ್ಯಕ್ಷ ಜಿ. ನಂಜನಗೌಡ ಸಿಎ ಇವರು ಮಾತನಾಡಿ. ನನ್ನ ಮೇಲೆ ವಿಶ್ವಾಸವಿಟ್ಟು ಆದರ್ಶ ಪಟ್ಟಣ ಬ್ಯಾಂಕಿಗೆ ಮತ್ತೊಮ್ಮೆ ಅಧ್ಯಕ್ಷರಾಗಲು ಅವಕಾಶ ಮಾಡಿಕೊಟ್ಟಿದ್ದೀರಿ. 27 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ, ವಿಜಯನಗರ ಈ ಐದು ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ಶಾಖೆ ತೆರೆದು ಬ್ಯಾಂಕಿನ ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ನಿಮ್ಮೆಲ್ಲರ ಸಹಕಾರದೊಂದಿಗೆ ಶ್ರಮಿಸುದಾಗಿ ತಿಳಿಸಿದರು. ಈ ವೇಳೆ ನಿರ್ದೇಶಕರಾಗಿ ವೀರಭದ್ರಯ್ಯ ಎಸ್.ಎಂ, ಸುಧಾ ಜೆ.ಎಂ, ಮಂಜುನಾಥ ಕೆ.ಎಂ, ಪ್ರಕಾಶ್ ಬಿ.ಕೆ, ಭ್ರಮರಾಂಬ ಕೆ.ಸಿ, ಅಜ್ಜಣ್ಣ ಎಂ.ಬಿ, ರವಿಕುಮಾರ್, ಎಚ್. ದೇವರಾಜ್, ಮಂಜುಳಾ ಕೆ.ಎಸ್, ರೇಖಾ ಟಿ.ಎಚ್.ಎಂ. ಸಹನಾಗೊಂಗಡಿ ಐದು ವರ್ಷಗಳ ಅವಧಿಗೆ ಅವಿರೋಧ ಆಯ್ದೆಯಾದರು. ಈ ಸಂದರ್ಭದಲ್ಲಿ ಚುನಾವಣೆ ಅಧಿಕಾರಿಗಳಿಗೆ ಕಾರ್ಯನಿರ್ವಹಿಸಿದ ಷಣ್ಮುಖಪ್ಪ ಅವರು 2025 ರಿಂದ 2023 ರ ಐದು ವರ್ಷಗಳ ಅವಧಿಗೆ ಅಧ್ಯಕ್ಷರ, ಉಪಾಧ್ಯಕ್ಷರನ್ನು ಹಾಗೂ ನಿರ್ದೇಶಕರನ್ನು ಅವಿರೋಧವಾಗಿ ಘೋಷಣೆ ಮಾಡಿದರು.



**ಮಣಿಪಾಲ** : ಸಾರಸ್ವತ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಣಿಪಾಲ ಇದರ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ 02.02.2025ರಂದು ಜರುಗಿತು ಮತ್ತು ಪದಾಧಿಕಾರಿಗಳ ಚುನಾವಣೆಯು ದಿನಾಂಕ 06.02.2025ರಂದು ಜರುಗಿದ್ದು ನಮ್ಮ ಸಂಘದ ಅಧ್ಯಕ್ಷರಾಗಿ ಶ್ರೀ ವಾಸುದೇವ ಕೃಷ್ಣ ನಾಯಕ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಮನೋಹರ ಮರಾಠೆ ಇವರು ಆಯ್ಕೆಯಾದರು. ಆಡಳಿತ ಮಂಡಳಿಯ ನಿರ್ದೇಶಕರಾಗಿ ಶ್ರೀ ಗಣಪತಿ ನಾಯಕ್, ಶ್ರೀ ಪಾಂಡುರಂಗ ನಾಯಕ್, ಶ್ರೀ ದೇವೇಂದ್ರ ನಾಯಕ್, ಶ್ರೀ ರಾಮರಾಯ ಪಾಟ್ಕರ್, ಶ್ರೀ ದೇವೇಂದ್ರ ವಾಗ್ಳೆ, ಶ್ರೀ ರಾಮದಾಸ್ ಪ್ರಭು, ಶ್ರೀಮತಿ ಜ್ಯೋತಿ ಡಿ. ಕಾಮತ್, ಶ್ರೀಮತಿ ಗೀತಾಎಸ್. ಪ್ರಭು ಇವರುಗಳು ಅವಿರೋಧ ಆಯ್ಕೆಯಾಗಿದ್ದು ಚುನಾವಣಾ ಟರ್ನಿಂಗ್ ಆಫೀಸರ್ ಜಯರಾಮ್ ಕೆ. ಪ್ರ.ದ.ಸಹಾಯಕರು, ಸ.ಸಂ.ಲೆ.ಪ. ಸಹಾಯಕ ನಿರ್ದೇಶಕರಕಛೇರಿ, ಕಾರ್ಕಳಇವರುಚುನಾವಣಾ ಪ್ರಕ್ರಿಯೆಯನ್ನು ನಡೆಸಿ ಚುನಾವಣಾ ಫಲಿತಾಂಶವನ್ನು ಘೋಷಿಸಿದರು.

## ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ 10ನೇ ಶಾಖೆಯ ಉದ್ಘಾಟನೆ



**ಬೆಳಗಾವಿ** : ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ಸದಲಗಾ ಇದರ ನೂತನ ಶಾಖೆಯನ್ನು ದಿನಾಂಕ 03.02.2025 ರಂದು ಶಮನೇವಾಡಿ ಗ್ರಾಮದ ಶಾಂತಿನಗರದಲ್ಲಿ ಶ್ರೀ ರವೀಂದ್ರ ಪಾಟೀಲ ಮೆ॥ ಉಪ ನಿಬಂಧಕರು ಬೆಳಗಾವಿ ಪ್ರಾಂತ, ಬೆಳಗಾವಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು.

ಈ ಸಮಾರಂಭದಲ್ಲಿ ಶ್ರೀ ಇಂದ್ರಜೀತ್ ಪಾಟೀಲ ನಿರ್ದೇಶಕರು, ಲಠ್ಠೇ ಶಿಕ್ಷಣ ಸಂಸ್ಥೆ, ಸಾಂಗಳಿ ಪ್ರಮುಖರು ಉಪಸ್ಥಿತರಿದ್ದರು ಹಾಗೂ ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರಕಾಶ ಜಿನಗೌಡ ಪಾಟೀಲ ಇವರು ವಹಿಸಿದ್ದರು ಮತ್ತು ಬ್ಯಾಂಕಿನ ಎಲ್ಲಾ ನಿರ್ದೇಶಕರು, ಬ್ಯಾಂಕಿನ ವ್ಯವಸ್ಥಾಪನಾ ಸಮಿತಿ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಸಹಕಾರಿ ಸಂಸ್ಥೆಗಳು ಜನೌಷಧಿ ಕೇಂದ್ರಗಳನ್ನು ಪ್ರಾರಂಭಿಸಲು ಅವಕಾಶ

ಸಂಗ್ರಹ : ಶ್ರೀಮತಿ ಕವಿತ ಆರ್. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು
ಮೂಲ : ರಿಷಿ ರಾಜ್, ಉತ್ತರ ಪ್ರದೇಶದ ಫಿರೋಜಾಬಾದ್‌ನ ಮುನ್ಸಿಪಾಲ್ ಕಮಿಷನರ್.

ಸೌಹಾರ್ದ ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಸೇವೆ ಸಲ್ಲಿಸುವ ದೃಷ್ಟಿಯಿಂದ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿರುತ್ತದೆ. ಅದರಲ್ಲಿ ಕೇಂದ್ರದ ಜನೌಷಧಿ ವ್ಯವಹಾರವನ್ನು ಹಮ್ಮಿಕೊಳ್ಳುವುದು ಒಂದಾಗಿದೆ. ಕೇಂದ್ರ ಸಹಕಾರ ಸಚಿವಾಲಯ ಗ್ರಾಮೀಣ ಹಂತದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಈ ಜನೌಷಧಿ ವ್ಯವಹಾರವನ್ನು ಪ್ರಾರಂಭಿಸಲು ಒತ್ತುಕೊಟ್ಟು ಬೇರೆ ಯಾವುದೇ ತರಹದ ಸಹಕಾರ ಸಂಸ್ಥೆಗಳು ಕೂಡ ಈ ಜನೌಷಧಿ ವ್ಯವಹಾರವನ್ನು ಮಾಡಬಹುದಾಗಿದೆ. ಸೌಹಾರ್ದ ಸಹಕಾರಿಗಳು ಜನೌಷಧಿ ಕೇಂದ್ರವನ್ನು ಪ್ರಾರಂಭಿಸಲು ಅವಕಾಶಗಳಿದ್ದು, ಅದರ ವಿವರವನ್ನು ಈ ಲೇಖನದಲ್ಲಿ ಪ್ರಕಟಿಸಲಾಗಿದೆ.

ಜನೌಷಧಿ ಯೋಜನೆಯು ಮೀಸಲಾದ ಕೇಂದ್ರಗಳ ಮೂಲಕ ಎಲ್ಲರಿಗೂ ಉತ್ತಮ ಗುಣಮಟ್ಟದ ಕೈಗೆಟುಕುವ ಔಷಧಿಗಳ ಸುಲಭ ಲಭ್ಯತೆ ಖಚಿತಪಡಿಸಿಕೊಳ್ಳಲು ಉದ್ದೇಶಿಸಿದೆ. ಇದನ್ನು 2008ರಲ್ಲಿ ಪ್ರಾರಂಭಿಸಲಾಗಿದ್ದರೂ, ಈ ಯೋಜನೆಯನ್ನು 2014ರ ನಂತರ ಪ್ರಧಾನ ಮಂತ್ರಿ ಜನೌಷಧಿ ಯೋಜನೆ (ಪಿಎಂಜೆಎವೈ) ಪುನರುಜ್ಜೀವನಗೊಳಿಸಲಾಯಿತು ಮತ್ತು 2016ರಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ (ಪಿಎಂಬಿಜೆಪಿ) ಎಂದು ಮರುನಾಮಕರಣ ಮಾಡಲಾಯಿತು.

ಎನ್‌ಎಸ್‌ಎಸ್‌ಓನ 71ನೇ ಸುತ್ತಿನ ಪ್ರಕಾರ, ಔಷಧಿಗಳ ವೆಚ್ಚವು ಗ್ರಾಮೀಣ ಪ್ರದೇಶಗಳಲ್ಲಿ ಹೊರರೋಗಿ ವೆಚ್ಚದ ಶೇಕಡಾ 72 ಮತ್ತು ನಗರ ಪ್ರದೇಶಗಳಲ್ಲಿ ಶೇಕಡಾ 68ರಷ್ಟಿದೆ. ಒಂದು ನಿರ್ದಿಷ್ಟ ಔಷಧವನ್ನು ಅಭಿವೃದ್ಧಿಪಡಿಸುವ ಕಂಪನಿಯು ಪೇಟೆಂಟ್‌ಗೆ ಅರ್ಜಿ ಸಲ್ಲಿಸುತ್ತದೆ ಮತ್ತು ರಾಜಸ್ವಧನದ ಮೂಲಕ ಸಂಶೋಧನಾ ಹೂಡಿಕೆಯನ್ನು ಮರುಪಡೆಯುತ್ತದೆ. ಇದು ಬ್ರಾಂಡೆಡ್ ಔಷಧಿಗಳ ಹೆಚ್ಚಿನ ವೆಚ್ಚಕ್ಕೆ ಕಾರಣವಾಗಿದೆ. ಪೇಟೆಂಟ್ ಅವಧಿ ಮುಗಿದ ನಂತರ, ಔಷಧವನ್ನು ಯಾವುದೇ ತಯಾರಕರು ಕಡಿಮೆ ವೆಚ್ಚದಲ್ಲಿ ಅದೇ ಸಕ್ರಿಯ ಪದಾರ್ಥಗಳೊಂದಿಗೆ ಜೆನೆರಿಕ ಔಷಧಿಯಾಗಿ ತಯಾರಿಸಬಹುದು. ವಾರ್ತಾ ಶಾಖೆ ಮಾಹಿತಿ ಪ್ರಕಾರ, ಪಿಎಂಬಿಜೆಪಿ ಅಡಿಯಲ್ಲಿ ಔಷಧಿಗೆ ಅಗ್ರ ಮೂರು ಬ್ರಾಂಡೆಡ್ ಔಷಧಿಗಳ ಸರಾಸರಿ ಬೆಲೆಯ ಗರಿಷ್ಠ 50 ಪ್ರತಿಶತದಷ್ಟು ತತ್ವದ ಮೇಲೆ ಬೆಲೆ ನಿಗದಿಪಡಿಸಲಾಗುತ್ತದೆ. ಜನೌಷಧಿ ಕೇಂದ್ರವು ಬ್ರಾಂಡೆಡ್ ಔಷಧಿಗಳಿಗಿಂತ ಶೇಕಡಾ 50–90 ರಷ್ಟು ಅಗ್ಗದ ದರದಲ್ಲಿ ಔಷಧಿಗಳನ್ನು ನೀಡುತ್ತದೆ. ಯೋಜನೆಯಂತೆ ಪ್ರತಿ ಜಿಲ್ಲೆಯಲ್ಲಿ ಒಂದು ಜನೌಷಧಿ ಕೇಂದ್ರವನ್ನು ತೆರೆಯಬೇಕಾಗಿದ್ದು. 2014ರವರೆಗೆ ಸುಮಾರು 104 ಕೇಂದ್ರಗಳನ್ನು ತೆರೆಯಲಾಯಿತು ಮತ್ತು ಸಾಲ 2017ರ ವೇಳೆಗೆ 1253 ಕೇಂದ್ರಗಳನ್ನು ತೆರೆಯಲಾಯಿತು. 2024–25ರ ವೇಳೆಗೆ 10,500 ಜನೌಷಧಿ ಕೇಂದ್ರಗಳನ್ನು ತೆರೆಯುವ ಗುರಿಯನ್ನು ಪಿಎಂಬಿಜೆಪಿ ಹೊಂದಿದೆ.

ಫಾರ್ಮಾಸ್ಯುಟಿಕಲ್ಸ್ ಮತ್ತು ಮೆಡಿಕಲ್ ಡಿವೈಸಸ್ ಬ್ಯೂರೊ ಆಫ್ ಇಂಡಿಯಾ (ಪಿಎಂಬಿಐ) ಔಷಧೀಯ ಇಲಾಖೆಯ ಆಶ್ರಯದಲ್ಲಿ ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದೆ. ಪಿಎಂಬಿಜೆಪಿ ಬಹು ಮಾರಾಟಗಾರರು ಮತ್ತು ಪೂರೈಕೆದಾರರೊಂದಿಗೆ ಸಮಾನಾಂತರ ದರ ಒಪ್ಪಂದಗಳು, ಎಸ್‌ಎಪಿ ಆಧರಿತ ದಾಸ್ತಾನು ನಿರ್ವಹಣೆ ಮತ್ತು ಮುನ್ಸೂಚನೆ ವ್ಯವಸ್ಥೆ ಮತ್ತು ಭಾರತದಾದ್ಯಂತ ನಾಲ್ಕು ಗೋದಾಮು ಸೌಲಭ್ಯಗಳು, 16 ಎನ್‌ಎಬಿಎಲ್–ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಗುಣಮಟ್ಟ ಭರವಸೆ ವ್ಯವಸ್ಥೆ, 1800ಕ್ಕೂ ಹೆಚ್ಚು ಔಷಧಿಗಳು ಮತ್ತು 285 ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಒದಗಿಸುವ ಕಾರ್ಯನಿರ್ವಹಿಸುತ್ತದೆ.

2021ರಲ್ಲಿ ಸಹಕಾರ ಸಚಿವಾಲಯದ ರಚನೆಯ ನಂತರ, ಸಹಕಾರ್ ಸೆ ಸಮೃದ್ಧಿ ಮಾದರಿ ಅಡಿಯಲ್ಲಿ ಭಾರತದಲ್ಲಿ ಸಹಕಾರ ಚಳವಳಿಯನ್ನು ಬಲಪಡಿಸಲು ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್) ಮಾದರಿ ಬೈಲಾಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ, ಪಿಎಸಿಎಸ್‌ನ ಕಾರ್ಯಸಾಧ್ಯತೆಯನ್ನು ಸುಧಾರಿಸಲು ಮತ್ತು ಹೈನುಗಾರಿಕೆ, ಮೀನುಗಾರಿಕೆ, ಪುಷ್ಪ ಕೃಷಿ, ಗೋದಾಮುಗಳ ಸ್ಥಾಪನೆ, ಆಹಾರ ಧಾನ್ಯಗಳ ಸಂಗ್ರಹಣೆ, ರಸಗೊಬ್ಬರಗಳು, 2 ಬೀಜಗಳು, ಕಸ್ಟಮ್ ಬಾಡಿಗೆ ಕೇಂದ್ರಗಳು, ಎಲ್‌ಪಿಜಿ / ಸಿಎನ್‌ಜಿ / ಪೆಟ್ರೋಲ್ / ಡೀಸೆಲ್ ವಿತರಕರು, ಸಮುದಾಯ ನೀರಾವರಿ, ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲ, ನ್ಯಾಯಬೆಲೆ ಅಂಗಡಿಗಳು (ಎಫ್‌ಪಿಎಸ್) ಸೇರಿದಂತೆ 25 ವ್ಯವಹಾರ ಚಟುವಟಿಕೆಗಳಿಗೆ ವೈವಿಧ್ಯಗೊಳಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಬಿಸಿನೆಸ್ ಕರೆಸ್ಪಾಂಡೆಂಟ್ ಚಟುವಟಿಕೆಗಳು, ಸಾಮಾನ್ಯ ಸೇವಾ ಕೇಂದ್ರ, ಇತ್ಯಾದಿ. ಸಹಕಾರ್ ಸೆ ಸಮೃದ್ಧಿ ಮಾದರಿಯನ್ನು ಅಳವಡಿಸಿಕೊಳ್ಳುವಲ್ಲಿ ಉತ್ತರ ಪ್ರದೇಶ ರಾಜ್ಯವು ಮುಂಚೂಣಿಯಲ್ಲಿದೆ, 5200ಕ್ಕೂ ಹೆಚ್ಚು ಪಿಎಸಿಎಸ್ ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. 1400ಕ್ಕೂ ಹೆಚ್ಚು ಪಿಎಸಿಎಸ್‌ಗಳು ಎಫ್‌ಪಿಓಎಸ್ ಇತ್ಯಾದಿಗಳೊಂದಿಗೆ ತಿಳುವಳಿಕೆ ಒಪ್ಪಂದಗಳನ್ನು ಮಾಡಿಕೊಂಡಿವೆ. ಪಿಎಸಿಎಸ್ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳನ್ನು ಸ್ಥಾಪಿಸುತ್ತಿರುವುದು ಹೊಸ ಹೆಮ್ಮೆಯಾಗಿದೆ.

ಬಿ ಫಾರ್ಮಾ / ಡಿ ಫಾರ್ಮಾ ಅಥವಾ ಯಾವುದೇ ಸಂಸ್ಥೆ ಅಥವಾ ಎನ್‌ಜಿಓ /ಟ್ರಸ್ಟ್ / ಸಂಸ್ಥೆ / ಸಾರ್ವಜನಿಕ ಆರೋಗ್ಯ ಸೊಸೈಟಿ ಹೊಂದಿರುವ ವ್ಯಕ್ತಿಗಳು ಜನೌಷಧಿ ಕೇಂದ್ರಗಳನ್ನು ತೆರೆಯಲು ಅರ್ಹರಾಗಿರುತ್ತಾರೆ ಎಂದು ಪಿಎಂಬಿಜೆಪಿ ಸೂಚಿಸುತ್ತದೆ. 2023ರ

ಹಣಕಾಸು ವರ್ಷದಲ್ಲಿ ದೇಶಾದ್ಯಂತ ಜನೌಷಧಿ ಕೇಂದ್ರಗಳನ್ನು ತೆರೆಯಲು 2000 ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ (ಪಿಎಸಿಎಸ್) ಸರ್ಕಾರ ಅನುಮತಿ ನೀಡಿದೆ. ಪಿಎಸಿಎಸ್ ಅಂಗಡಿ ಸ್ಥಳ ಮತ್ತು ಔಷಧ ಪರವಾನಗಿ ಹೊಂದಿರುವ ಬಿ ಫಾರ್ಮಾ/ ಡಿ ಫಾರ್ಮಾ ಫಾರ್ಮಾಸಿಸ್ಟ್ ಅನ್ನು ಗುರುತಿಸಬೇಕಾಗಿದೆ. ಪಿಎಸಿಎಸ್ ತಮ್ಮ ಸ್ವಂತ ಜಾಗದಲ್ಲಿ ಅಂಗಡಿಯನ್ನು ಸ್ಥಾಪಿಸಲು ಅಥವಾ ಮಾಲೀಕರೊಂದಿಗೆ ಸರಿಯಾದ ಒಪ್ಪಂದದ ಬೆಂಬಲದೊಂದಿಗೆ ಆಕರ್ಷಕ ಅಂಗಡಿ ಸ್ಥಳವನ್ನು ಬಾಡಿಗೆಗೆ ತೆಗೆದುಕೊಳ್ಳಲು ಮುಕ್ತವಾಗಿದೆ. ಕನಿಷ್ಠ ಪ್ರದೇಶದ ಅವಶ್ಯಕತೆ 120 ಚದರ ಅಡಿ, ಪಿಎಸಿಎಸ್ ಅಗತ್ಯ ದಾಖಲೆಗಳಾದ ಪ್ಯಾನ್ ವಿವರಗಳು. ಆಧಾರ್, ಆರು ತಿಂಗಳ ಬ್ಯಾಂಕ್ ವಹಿವಾಟು ವಿವರಗಳು, ಎರಡು ವರ್ಷಗಳ ಐಟಿಆರ್ ವಿವರಗಳು ಇತ್ಯಾದಿಗಳೊಂದಿಗೆ ಮತ್ತು 5000 ರೂ.ಗಳ ಶುಲ್ಕದೊಂದಿಗೆ ಜನೌಷಧಿ ಕೇಂದ್ರ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಸೂಕ್ತ ಪರಿಶೀಲನೆಯ ನಂತರ, ಪಿಎಸಿಎಸ್‌ಗೆ ತಾತ್ವಿಕವಾಗಿ ಆರಂಭಿಕ ಅನುಮೋದನೆಯನ್ನು ನೀಡಲಾಗುತ್ತದೆ, ಇದು 45 ದಿನಗಳ ಅವಧಿಗೆ ಮಾನ್ಯವಾಗಿರುತ್ತದೆ.

ಆರಂಭಿಕ ಅನುಮೋದನೆ ಪಡೆದ ನಂತರ, ಪಿಎಸಿಎಸ್ ಔಷಧ ಪರವಾನಗಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಫಾರ್ಮಾಸಿಸ್ಟ್‌ನ ಔಷಧ ಪರವಾನಗಿ ಇತ್ಯಾದಿಗಳನ್ನು ಅಪ್‌ಲೋಡ್ ಮಾಡಿದ ನಂತರ, ಪಿಎಂಬಿಐ ಸ್ಟೋರ್ ಕೋಡ್ ಅನ್ನು ನಿಗದಿಪಡಿಸುತ್ತದೆ. ಸರಿಯಾದ ತರಬೇತಿಯ ನಂತರ ಪಿಓಎಸ್ ಸಾಫ್ಟ್‌ವೇರ್ ಅನ್ನು ಸಿಸ್ಟಮ್‌ನಲ್ಲಿ ಡೌನ್ಲೋಡ್ ಮಾಡಬೇಕು; ಪಿಓಎಸ್ ಸಾಫ್ಟ್‌ವೇರ್ ಬಳಸಿ ಔಷಧಿಗಳ ಪೂರೈಕೆಗಾಗಿ ಆರ್ಡರ್ ನೀಡಲಾಗುತ್ತದೆ ಮತ್ತು ಸ್ವೀಕರಿಸಲಾಗುತ್ತದೆ. ತಿಂಗಳಿಗೆ 15,000 ರೂ.ಗಳ ಮಿತಿಗೆ ಒಳಪಟ್ಟು ಕೇಂದ್ರವು ಮಾಸಿಕ ಖರೀದಿಯ ಶೇಕಡಾ 15ರ ದರದಲ್ಲಿ 5 ಲಕ್ಷ ರೂ.ಗಳವರೆಗೆ ಪ್ರೋತ್ಸಾಹಕ ಯೋಜನೆಯನ್ನು ಜಾರಿಗೆ ತಂದಿದೆ. ಅಲ್ಲದೆ, ಐಟಿ ಮತ್ತು ಮೂಲಸೌಕರ್ಯಕ್ಕಾಗಿ 2 ಲಕ್ಷ ರೂ.ಗಳ ಆರಂಭಿಕ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತದೆ. ಪಿಎಸಿಎಸ್ ಪ್ರತಿ ಔಷಧದ ಎಂಆರ್‌ಪಿಯಲ್ಲಿ ಶೇಕಡಾ 20 ರಷ್ಟು ಲಾಭವನ್ನು ಪಡೆಯುತ್ತದೆ.

ಜನೌಷಧಿ ಯೋಜನೆಯು 2008ರಲ್ಲಿ ಪ್ರಾರಂಭಿಸಲಾದ ಮಹತ್ವದ ಮಧ್ಯಸ್ಥಿಕೆಯಾಗಿದೆ. ಸಮುದಾಯ ಔಷಧಾಲಯಗಳಿಗೆ ಹೋಲಿಸಿದರೆ ಕಡಿಮೆ ಸಂಖ್ಯೆಯ ಜನೌಷಧಿ ಕೇಂದ್ರಗಳು, ಜಾಗೃತಿ ಕೊರತೆ, ಕಡಿಮೆ ರೋಗಿಗಳ ಹೊರೆ, ಔಷಧೀಯ ಆರೈಕೆಯನ್ನು ಒದಗಿಸದಿರುವುದು ಮತ್ತು ಔಷಧಿಗಳ ವಿಳಂಬ ಪೂರೈಕೆಯಂತಹ ಸಮಸ್ಯೆಗಳಿಂದಾಗಿ ಇದು ಹೆಚ್ಚಿನ ಉತ್ಸಾಹವನ್ನು ಕಳೆದುಕೊಂಡಿತು.

ಪಿಎಸಿಎಸ್ ಚಾಲಿತ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳು ರಾಜ್ಯದ ಉದ್ದಗಲಕ್ಕೂ ದೂರದ ಗ್ರಾಮೀಣ ಮಾರುಕಟ್ಟೆಗಳಲ್ಲಿ ಅಸ್ತಿತ್ವವನ್ನು ದಾಖಲಿಸುವ ವಿಶಿಷ್ಟ ಪ್ರಯೋಜನವನ್ನು ಒದಗಿಸುತ್ತವೆ. ಅವರು ಪಿಎಸಿಎಸ್‌ಗೆ ಆದಾಯದ ಮೂಲವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಬಡವರಿಗೆ ಅಗ್ಗದ ದರದಲ್ಲಿ ಉತ್ತಮ ಗುಣಮಟ್ಟದ ಜೆನೆರಿಕ್ ಔಷಧಿಗಳ ಲಭ್ಯತೆ ಮತ್ತು ಜಾಗೃತಿಯನ್ನು ಖಾತ್ರಿಪಡಿಸುತ್ತಿದ್ದಾರೆ. ಪಿಎಸಿಎಸ್ ಜನೌಷಧಿ ಕೇಂದ್ರಗಳು ಅದರ ಸದಸ್ಯರಲ್ಲಿ ಮೀಸಲಾದ ಗ್ರಾಹಕ/ ರೋಗಿಗಳ ನೆಲೆಯ ಅನುಕೂಲವನ್ನು ಹೊಂದಿವೆ. ಈ ಕೇಂದ್ರಗಳಲ್ಲಿ ಫಾರ್ಮಾಸಿಸ್ಟ್‌ಗಳ ಉಪಸ್ಥಿತಿಯು ರೋಗಿಗೆ ಔಷಧೀಯ ಆರೈಕೆಯನ್ನು ಒದಗಿಸಲು ಅನುವು ಮಾಡಿಕೊಡುತ್ತದೆ.

ಪಿಎಂಬಿಐ ಅಭಿವೃದ್ಧಿಪಡಿಸಿದ ಜನೌಷಧಿ ಸುಗಮ್ ಮೊಬೈಲ್ ಅಪ್ಲಿಕೇಶನ್ ನಾಗರಿಕ ಕೇಂದ್ರಿತ ಸ್ವಾಗತ ಉಪಕ್ರಮವಾಗಿದ್ದು, ಇದು ಬಳಕೆದಾರರಿಗೆ ಹತ್ತಿರದ ಜನೌಷಧಿ ಮಳಿಗೆಗಳನ್ನು (ಜಿಪಿಎಸ್ ಸ್ಥಳದ ಮೂಲಕ) ಹುಡುಕಲು ಮತ್ತು ಈ ಔಷಧಿಗಳ ಸಾಮಾನ್ಯ ಬ್ರಾಂಡ್ ಹೆಸರುಗಳನ್ನು ನಮೂದಿಸುವ ಮೂಲಕ ಜೆನೆರಿಕ್ ಔಷಧಿಗಳ ಲಭ್ಯತೆಯನ್ನು ಹುಡುಕಲು ಅನುವು ಮಾಡಿಕೊಡುತ್ತದೆ. ಗ್ರಾಮೀಣ ಒಳನಾಡಿನಲ್ಲಿ ಪಿಎಸಿಎಸ್ ಜನೌಷಧಿ ಕೇಂದ್ರಗಳ ಉಪಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಈ ಮೊಬೈಲ್ ಅಪ್ಲಿಕೇಶನ್ ಈ ಒಳನಾಡಿನಲ್ಲಿ ಮಾಹಿತಿಯ ಪ್ರಸಾರ ಮತ್ತು ಅಗ್ಗದ ಪ್ರವೇಶವನ್ನು ಅನುಮತಿಸಿದೆ. ಔಷಧಿಗಳ ಪಿಎಸಿಎಸ್‌ನ ಆರಂಭಿಕ ಉತ್ಸಾಹವು ಯೋಜನೆಯ ಸುಗಮ ಅನುಷ್ಠಾನದೊಂದಿಗೆ ಸೇರಿರಬೇಕು. ಯೋಜನೆಗೆ ಸಂಬಂಧಿಸಿದಂತೆ ಬೇಡಿಕೆ ಪೂರೈಕೆ ಅಂತರವು ಜ್ವಲಂತ ಸಮಸ್ಯೆಯಾಗಿದೆ. ಜನಪ್ರಿಯ ಔಷಧಿಗಳ ಸಂಗ್ರಹ ಶೀಘ್ರದಲ್ಲೇ ಸ್ಟಾಕ್ ಖಾಲಿಯಾಗುತ್ತವೆ. ಅಲ್ಲದೆ, ಪ್ರೋತ್ಸಾಹಕಗಳು ಮತ್ತು ಪಾವತಿಗಳ ಬಿಡುಗಡೆಯಲ್ಲಿನ ವಿಳಂಬವು ಮಧ್ಯಸ್ಥಗಾರರಿಗೆ ನಿರುತ್ಸಾಹವನ್ನುಂಟು ಮಾಡುತ್ತಿದೆ. ಪಿಎಂಬಿಜೆಪಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮಾರಾಟಗಾರರು 60 ಫಾರ್ಮಾ ದಿನಗಳ ಅವಧಿಯಲ್ಲಿ ಪಾವತಿಗಳನ್ನು ಸ್ವೀಕರಿಸಬೇಕು, ಪಾವತಿಯಲ್ಲಿನ ಲಾಭಾಂಶವನ್ನು ವಿಳಂಬವು ಅವರ ಕಡಿಮೆ ಮಾಡುತ್ತದೆ, ಇದು ಔಷಧಿಗಳ ಪೂರೈಕೆಯಲ್ಲಿ ಮತ್ತಷ್ಟು ವಿಳಂಬವನ್ನು ಹೆಚ್ಚಿಸುತ್ತದೆ.

ಸಹಕಾರಿ ಸೆ ಸಮೃದ್ಧಿ ಪ್ರಾಥಮಿಕ ಕೃಷಿ ಪತ್ತಿನ ಸಂಘಕ್ಕೆ ಹೆಚ್ಚು ಅಗತ್ಯವಾದ ಹುರುಪನ್ನು ಒದಗಿಸಿದೆ. ಪಿಎಸಿಎಸ್ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳು ಪಿಎಸಿಎಸ್ ಗೆಲುವು–ಗೆಲುವಿನ ಚೌಕಾಸಿಯನ್ನು ಪ್ರಸ್ತುತಪಡಿಸುತ್ತವೆ ಮತ್ತು ಪ್ರಧಾನ ಮಂತ್ರಿ ಜನೌಷಧಿ ಯೋಜನೆಯ ಉದ್ದೇಶವನ್ನು ಪೂರೈಸುತ್ತವೆ. ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಪೋಷಣೆಯು ಸಹಕಾರಿ ಇಲಾಖೆ ಮತ್ತು ಫಾರ್ಮಾಸ್ಯುಟಿಕಲ್ಸ್ ಅಂಡ್ ಮೆಡಿಕಲ್ ಡಿವೈಸಸ್ ಬ್ಯೂರೋ ಆಫ್ ಇಂಡಿಯಾ (ಪಿಎಂಬಿಐ) ನಡುವೆ ನಿರಂತರ ಸಮನ್ವಯವನ್ನು ಒಳಗೊಂಡಿರುತ್ತದೆ, ಸಮಯೋಚಿತ ಆದೇಶಗಳನ್ನು ನೀಡುವಲ್ಲಿ, ವಿಳಂಬವಿಲ್ಲದೆ ಔಷಧಿಗಳ ಪೂರೈಕೆ ಮತ್ತು ಪ್ರೋತ್ಸಾಹಕಗಳನ್ನು ವಿತರಿಸುವಲ್ಲಿ ಪಿಎಸಿಎಸ್‌ಗೆ ಹೆಚ್ಚು ಅಗತ್ಯವಾದ ಕೈಹಿಡಿಯುವಿಕೆಯನ್ನು ಒದಗಿಸುತ್ತದೆ ಎಂದು ಖಚಿತಪಡಿಸುತ್ತದೆ. ಆರಂಭಿಕ ಬಿಕ್ಕಟ್ಟನ್ನು ಪರಿಹರಿಸಿದರೆ, ಖಂಡಿತವಾಗಿಯೂ ಪಿಎಸಿಎಸ್ ಚಾಲಿತ ಜನೌಷಧಿ ಕೇಂದ್ರಗಳು ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳನ್ನು ಒದಗಿಸಲು ಅತ್ಯಂತ ಪರಿಣಾಮಕಾರಿ ಸುಸ್ಥಿರ ಮಾದರಿಯಾಗಿ ಕಾರ್ಯನಿರ್ವಹಿಸಬಹುದು.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಪ್ರಬಂಧ

# ಸಹಕಾರ ಸಂಸ್ಥೆಗಳ ನಡುವಿನ ಸಹಕಾರವನ್ನು ಬಲಪಡಿಸುವುದು

– ಶ್ರೀಮತಿ ರೇಣುಕಾ ಎಂ.ವಿ. ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಪೀಠಿಕೆ:**

ಸಹಕಾರ ಸಂಸ್ಥೆಗಳ ಆರ್ಥಿಕ ಅಭಿವೃದ್ಧಿಯ ಮೂಲ ಸ್ತಂಭವಾಗಿದೆ. ಸಹಕಾರಿಗಳು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ, ಮತ್ತು ಅಂತರ ರಾಷ್ಟ್ರೀಯ ಸಂರಚನೆಗಳ ಜೊತೆ ಸೇರಿ ಒಟ್ಟಾಗಿ ಕೆಲಸ ಮಾಡುವುದರ ಮೂಲಕ ತಮ್ಮ ಸದಸ್ಯರಿಗೆ ಅತ್ಯಂತ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಿ ಸಹಕಾರ ಚಳುವಳಿಯನ್ನು ಬಲಪಡಿಸುತ್ತದೆ. ಸಾಮೂಹಿಕ ಮಾಲೀಕತ್ವ ಹಂಚಿಕೊಳ್ಳುವ ಹೊಣೆಗಾರಿಕೆ ಮತ್ತು ಪರಸ್ಪರ ಲಾಭದ ತತ್ವದೊಂದಿಗೆ ಸಹಕಾರ ಸಂಸ್ಥೆಗಳು ಸಮುದಾಯಗಳನ್ನು ಸಬಲಗೊಳಿಸುವ ಸಾಮರ್ಥ್ಯ ಹೊಂದಿದೆ. ಸಹಕಾರ ಸಂಸ್ಥೆಗಳು ತಮ್ಮೆಲ್ಲ ಆಳವಾದ ಸಹಕಾರವನ್ನು ಬೆಳೆಸುವ ಅಗತ್ಯವಿದೆ. ಸಹಕಾರ ಸಂಸ್ಥೆಗಳ ನಡುವಿನ ಬಲಿಷ್ಠ ಸಹಕಾರವು ಸ್ಥಳೀಯ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಅವುಗಳ ಬೆಳವಣಿಗೆ,ತಾಳ್ಮೆ ಮತ್ತು ಪ್ರಭಾವವನ್ನು ಉತ್ತೇಜಿಸಬಲ್ಲದು.

**ಸಹಕಾರಿ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸಲು ಸಹಾಯಕ ಆಗಿರಬಹುದಾದ ಈ ಕೆಳಕಂಡ ಅಂಶಗಳು:**

1. ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಿ ಮತ್ತು ಅದನ್ನು ತಳಮಟ್ಟದ ಜನರಿಗೆ ತಲುಪಿಸುವುದು. ಇದು ಭಾರತದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಮಾರ್ಗಸೂಚಿಗಳನ್ನು ಒದಗಿಸುತ್ತದೆ.
2. ಎಲ್ಲಾ ಗ್ರಾಮಗಳು ಪ್ರಾಥಮಿಕ ಸಹಕಾರದಿಂದ ಆವರಿಸಲ್ಪಡುವಂತೆ ಖಚಿತಪಡಿಸುವುದು.
3. ಪ್ರಾಥಮಿಕ ಸಹಕಾರ ಸಂಘಗಳನ್ನು ಜಿಲ್ಲೆ ಅಥವಾ ಪ್ರಾಂತ ಅಥವಾ ರಾಜ್ಯಮಟ್ಟದ ಫೆಡರೇಶನ್‌ಗಳೊಂದಿಗೆ ಸಂಪರ್ಕಿಸುವುದು.
4. ಜಿಲ್ಲಾ ಮಟ್ಟದ ಫೆಡರೇಶನ್‌ಗಳು ಇನ್ನೂ ಸ್ಥಾಪಿಸಲಾಗಿದೆ ಇದ್ದರೆ ಅವುಗಳನ್ನು ಸ್ಥಾಪಿಸುವುದು.
5. ನೂತನ ಪ್ರಾಥಮಿಕ ಸಹಕಾರ ಸಂಘಗಳನ್ನು ನೋಂದಣಿ ಮಾಡುವುದು.
6. ಪ್ರಾಥಮಿಕ ಸಹಕಾರಿ ಸಂಸ್ಥೆಗಳಿಗೆ/ಸಮಾಜಗಳಿಗೆ ಮೂಲ ಸೌಕರ್ಯ ಹಾಗೂ ಮೂಲದಿಂದ ಬಳಕೆಯ ಹಂತಕ್ಕೆ ಸರಕುಗಳ ಸಮರ್ಥ ಸಾಗಾಣಿಕೆ ಮತ್ತು ಸಂಗ್ರಹಣೆ ಮಾಡಲು ಬೆಂಬಲವನ್ನು ಒದಗಿಸುವುದು.

**ಸಹಕಾರ ಸಂಸ್ಥೆಗಳ ನಡುವೆ ಸಹಕಾರದ ಮಹತ್ವ:**

ಸಹಕಾರ ಸಂಸ್ಥೆಗಳ ನಡುವೆ ಸಹಕಾರ ತತ್ವವು (ICA) ಅಂತರಾಷ್ಟ್ರೀಯ ಸಹಕಾರ ಸಂಸ್ಥೆಯು ನಿಗದಿಪಡಿಸಿರುವ ಏಳು ಮೂಲ ತತ್ವಗಳಲ್ಲಿ ಒಂದಾಗಿದೆ. ಇದು ಸಹಕಾರ ಚಲನೆಯನ್ನು ಬಲಪಡಿಸಲು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಪರಸ್ಪರ ಸಹಕರಿಸುವ ಅಗತ್ಯವಿದೆ. ಸಹಕಾರದ ಮೂಲಕ ಸಹಕಾರ ಸಂಸ್ಥೆಗಳು ಹಂಚಿಕೊಂಡ ಸಂಪನ್ಮೂಲಗಳು ಜ್ಞಾನ ಮತ್ತು ಜಾಲಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಮೂಹಿಕ ಯಶಸ್ವಿಗೆ ಶಕ್ತಿಯುತವಾದ ಆಧಾರವನ್ನು ನಿರ್ಮಿಸಬಹುದು.

- ಸಹಕಾರವು ಸಹಕಾರ ಸಂಸ್ಥೆಗಳಿಗೆ ದೊಡ್ಡ ಪ್ರಭಾವಿ ಸಂಪನ್ಮೂಲಗಳನ್ನು ಒಟ್ಟುಗೂಡಿಸಲು ಅವಕಾಶ ನೀಡುತ್ತದೆ.
- ಹಂಚಿಕೊಂಡ ನಾವಿನ್ಯತೆ, ಆರ್ಥಿಕತೆಯನ್ನು ವೃದ್ಧಿಸುತ್ತದೆ.
- ಸಹಕಾರವು ಒಗ್ಗಟ್ಟನ್ನು ಉತ್ತೇಜಿಸುತ್ತದೆ ಇದರಿಂದ ಸಹಕಾರ ಸಂಸ್ಥೆಗಳು ದಿನವೂ ಬದಲಾಗುತ್ತಿರುವ ಮಾರುಕಟ್ಟೆಯ ಆರ್ಥಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ.

**ಸಹಕಾರಿಗಳ ನಡುವೆ ಸಹಕಾರವನ್ನು ಬಲಪಡಿಸಲು ಕೆಲವು ಮಾರ್ಗಗಳು:**

1. **ಜಾಲಗಳನ್ನು ಸೃಷ್ಟಿಸುವುದು:** ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಸ್ಥಳೀಯ ಪ್ರಾದೇಶಿಕ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಮಟ್ಟಗಳಲ್ಲಿ ಸೇವೆಯನ್ನು ಸಲ್ಲಿಸಲು ಒಟ್ಟುಗೂಡಿಸಬಹುದು.
2. **ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದು:** ಸಹಕಾರಿ ಸಂಸ್ಥೆಗಳು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದರ ಮೂಲಕ ಹೊಸ ಹೊಸ ಉಪಾಯಗಳನ್ನು ಪರಿಚಯಿಸಬಹುದು.
3. **ಹೆಚ್ಚು ಸಂಪರ್ಕಗಳನ್ನು ಸ್ಥಾಪಿಸುವುದು:** ಸಹಕಾರಿ ಸಂಸ್ಥೆಗಳು ಇತರೆ ಸಹಕಾರಿ ಸಂಸ್ಥೆಗಳೊಂದಿಗೆ ಸಂಪರ್ಕಗಳನ್ನು ಸ್ಥಾಪಿಸಲು ಸಹಕಾರಿಯಾಗಿದೆ. ಉದಾ: ಪ್ರಾಥಮಿಕ ಸಹಕಾರಿ ಸಂಸ್ಥೆಗಳು ಜಿಲ್ಲಾ ಅಥವಾ ಪ್ರಾಂತ ಮಟ್ಟದ ಫೆಡರೇಷನ್‌ಗಳೊಂದಿಗೆ ಸಂಪರ್ಕಿಸಬಹುದು.
4. **ಕೇಂದ್ರಿತ ಸರ್ಕಾರ ಯೋಜನೆಗಳು:** ಸರ್ಕಾರಿ ಯೋಜನೆಗಳನ್ನು ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಮಟ್ಟದಲ್ಲಿ ಕೇಂದ್ರೀತಗೊಳಿಸಬಹುದು.
5. **ಕಾನೂನಿನಲ್ಲಿ ತಿದ್ದುಪಡಿ:** ಹೆಚ್ಚು ಸಾಕ್ಷರತಾ ಪ್ರಾಥಮಿಕ ಸಹಕಾರಿ ಸಂಸ್ಥೆಗಳು ಬಹುರಾಜ್ಯ ಸಹಕಾರಿ ಕಾಯ್ದೆ 2002ಅನ್ನು ತಿದ್ದುಪಡಿ ಮಾಡುವುದು.
6. **ಯೋಜನೆಗಳನ್ನು ಹೊಂದಾಣಿಕೆ ಮಾಡುವುದು:** ವಿಭಿನ್ನ ಸಚಿವಾಲಯದ ಸಚಿವಾಲಯಗಳು ಮತ್ತು ಸಹಕಾರಿ ಇಲಾಖೆಗಳ ಯೋಜನೆಗಳನ್ನು ಹೊಂದಾಣಿಕೆ ಮಾಡುವುದು ಹಾಗೂ ಸಂಯೋಜನೆ ಮಾಡಬಹುದು.
7. **ಡೇಟಾಬೇಸ್ ಸೃಷ್ಟಿಸುವುದು:** ಎಲ್ಲಾ ಸಹಕಾರ ಸಂಸ್ಥೆಗಳನ್ನು ಸಹಕಾರಿ ಸಂಸ್ಥೆಗಳನ್ನು ಸರಿಯಾದ ಸಮಯದಲ್ಲಿ ಟ್ರ್ಯಾಕ್ ಮಾಡುವ

ಮೂಲಕ ನ್ಯೂನ್ಯಾತ್ಮಕ ರಾಷ್ಟ್ರೀಯ ಸಹಕಾರಿ ಡೇಟಾಬೇಸ್‌ಗಳನ್ನು ಸೃಷ್ಟಿಸುವುದು.

8. **ಶಿಕ್ಷಣ ಮತ್ತು ತರಬೇತಿ:** ಸಹಕಾರಿ ಕ್ಷೇತ್ರದ ಕುರಿತಂತೆ ತರಬೇತಿ ಮತ್ತು ಶಿಕ್ಷಣದ ಅಗತ್ಯಗಳನ್ನು ಸರಳೀಕರಿಸಬಹುದು. ಸಹಕಾರ ಕ್ಷೇತ್ರದ ಬಗ್ಗೆ ಸಹಕಾರಿ ಸಂಸ್ಥೆಗಳಿಗೆ ತಿಳಿಸಬಹುದು.

**ಸಹಕಾರಿಗಳ ನಡುವೆ ಸಹಕಾರವನ್ನು ಬಲಪಡಿಸಲು ಇರುವ ಉದ್ದೇಶಗಳು:**

- ಸದಸ್ಯರಿಗೆ ಉತ್ತಮ ಸೇವೆ ನೀಡುವುದು.
- ಪರಸ್ಪರ ಲಾಭ.
- ಸಹಕಾರ ಚಳುವಳಿಯನ್ನು ಬಲಪಡಿಸುವುದು.
- ವಿಭಿನ್ನ ಕ್ಷೇತ್ರಗಳ ನಡುವಿನ ಸಹಕಾರ.
- ಆರ್ಥಿಕತೆಯ ಪ್ರಮಾಣ ಸದಸ್ಯರಲ್ಲಿ ಹೆಚ್ಚಿಸುವುದು.

**ಸಹಕಾರಿಗಳ ನಡುವೆ ಸಹಕಾರವನ್ನು ಬಲಪಡಿಸಲು "ಸಹಕಾರ ಸಚಿವಾಲಯದ ಪಾತ್ರ"**

ಜುಲೈ 2021 ರಲ್ಲಿ ಸಹಕಾರ ಸಚಿವಾಲಯವು ಸಹಕಾರ ಚಳುವಳಿಯನ್ನು ಬಲಗೊಳಿಸಲು ಸೂಕ್ತ ಆಡಳಿತಾತ್ಮಕ ಕಾನೂನು ಮತ್ತು ನೀತಿ ಚೌಕಟ್ಟನ್ನು ಒದಗಿಸಲು ಪ್ರಯತ್ನಿಸುತ್ತಿದೆ. ರಾಷ್ಟ್ರೀಯ ಸಹಕಾರ ಡೇಟಾಬೇಸ್ ಸಹಕಾರ ಸಚಿವಾಲಯ ಭಾರತದ ಎಲ್ಲಾ ಸಹಕಾರ ಸಂಸ್ಥೆಗಳ ಮಾಹಿತಿ ಡೇಟಾಬೇಸ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇದು ಸಹಕಾರಿ ಸಂಸ್ಥೆಗಳ ಪರಿಸರವನ್ನು ಬಲಗೊಳಿಸಲು ಪ್ರಮುಖ ಆಧಾರವಾಗಲಿದೆ.

**ಯಶಸ್ವಿ ಸಹಕಾರದ ಸಹಕಾರಿ ಸಂಸ್ಥೆಗಳ ಉದಾಹರಣೆ**

- **ಪೂರ್ವ ಆಫ್ರಿಕಾದ ಕೃಷಿ ಸಹಕಾರಿಗಳು:** ಪೂರ್ವ ಆಫ್ರಿಕಾದಲ್ಲಿ ಸಣ್ಣ ರೈತರನ್ನು ಸಹಾಯಿಸಲು ಕೃಷಿ ಸಹಕಾರಿಗಳು ಒಕ್ಕೂಟಗಳನ್ನು ರಚಿಸಿವೆ, ಇವು ಒಟ್ಟಾಗಿ ಉತ್ಪನ್ನ ಸಂಗ್ರಹಣೆ, ಉತ್ತಮ ಬೆಲೆ, ನಿರ್ಣಯ ಮತ್ತು ಜಾಗತಿಕ ಮಾರುಕಟ್ಟೆಗೆ ಪ್ರವೇಶವನ್ನು ಸಾಧಿಸಲು ಸಹಕರಿಸುತ್ತವೆ. ಇದರಿಂದ ಸದಸ್ಯರ ಆದಾಯ ಮತ್ತು ಜೀವನಮಟ್ಟವನ್ನು ಹೆಚ್ಚಿಸುತ್ತದೆ.
- **ಮೊಂಡ್ರಾಗಾನ್ ಕಾರ್ಪೋರೇಷನ್:** ಸ್ಪೇನ್‌ನ ಮೊಂಡ್ರಾಗಾನ್ ಕಾರ್ಪೋರೇಷನ್ ಕೆಲಸಗಾರರ ಸಹಕಾರಿಗಳ ಒಕ್ಕೂಟವಾಗಿದ್ದು, ತಯಾರಿಕೆ, ಹಣಕಾಸು, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಒಟ್ಟಾಗಿ ಕೆಲಸ ಮಾಡುವ ಮೂಲಕ ಮೊಂಡ್ರಾಗಾನ್ ಕಾರ್ಪೋರೇಷನ್ ಸಹಕಾರ ಸಂಸ್ಥೆಗಳು ಸಬಲ ಮತ್ತು ತಾಳ್ಮೆಯ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಿ ಸಾವಿರಾರು ಸದಸ್ಯರಿಗೆ ಉದ್ಯೋಗ ಸಾಮಾಜಿಕ ಸೇವೆ ಮತ್ತು ಶಿಕ್ಷಣವನ್ನು ಒದಗಿಸಿದೆ ಹಾಗೂ ಒದಗಿಸುತ್ತಿದೆ.

ಒಟ್ಟಾರೆ ಭಾರತದಲ್ಲಿ 19 ರಾಷ್ಟ್ರೀಯ ಒಕ್ಕೂಟಗಳು ಮತ್ತು 237 ರಾಜ್ಯಗಳು ಒಕ್ಕೂಟಗಳು ವಿವಿಧ ಕಾರ್ಯಂಗಗಳ ಮಟ್ಟದಲ್ಲಿ ಸಮನ್ವಿತ ಪ್ರಯತ್ನವನ್ನು ಒದಗಿಸುತ್ತವೆ. ಈ ಒಕ್ಕೂಟಗಳು ಸಣ್ಣ ಸಹಕಾರಿ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಹಂಚಿಕೊಳ್ಳಲು, ನೀತಿಗಳನ್ನು ಪ್ರಭಾವಿಸಲು, ಮಾರುಕಟ್ಟೆಗೆ ಪ್ರವೇಶಿಸಲು ಮತ್ತು ಸಾಮಾನ್ಯ ಸವಾಲುಗಳನ್ನು ಪರಿಹ–ರಿಸಲು ವೇದಿಕೆಯನ್ನು ಒದಗಿಸುತ್ತಿದೆ.

**ಸಹಕಾರಿ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಗೊಳಿಸಲು "ಫೆಡರೇಷನ್‌ಗಳ ಪಾತ್ರ".**

ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಸಹಕಾರಿ ಒಕ್ಕೂಟಗಳು ಸಹಕಾರಿ ಚಳುವಳಿಯನ್ನು ಬಲಗೊಳಿಸಲು ಮುಖ್ಯಪಾತ್ರ ವಹಿಸುತ್ತದೆ ಅವುಗಳೆಂದರೆ,

1. ನೀತಿಗಳ ಪರ ಪ್ರಚಾರ.
2. ಆರ್ಥಿಕತೆ ಪ್ರಮಾಣ ಹೆಚ್ಚಿಸುವುದು.
3. ತಾಂತ್ರಿಕತೆಯ ಸಹಾಯವನ್ನು ಒದಗಿಸುವುದು.
4. ತರಬೇತಿ ಮತ್ತು ಶಿಕ್ಷಣ.
5. ಮಾರುಕಟ್ಟೆಯ ಪ್ರವೇಶ.
6. ವಿಭಿನ್ನ ಕ್ಷೇತ್ರಗಳ ನಡುವಿನ ಸಹಕಾರ.

ಸಹಕಾರ ಸಪ್ತಾಹದ 2024ರಲ್ಲಿ ಸಹಕಾರಿ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಗೊಳಿಸುವಲ್ಲಿ ಈ ಕೆಳಕಂಡ ಕಾರ್ಯಾ ಚಟುವಟಿ–ಕೆಗಳನ್ನು ಕೈಗೊಳ್ಳಬಹುದು.

1. ನಿರ್ದಿಷ್ಟ ಗುಂಪುಗಳ ಚರ್ಚೆ
2. ಸಹಕಾರ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಕಾರ್ಯಗಾರಗಳು.
3. ಸಂವಾದಗಳು.

**ಉಪಸಂಹಾರ:**

ಸಹಕಾರ ಚಳುವಳಿಗೆ ಭಾರತದಲ್ಲಿ ಮಹತ್ವದ ಬೆಳವಣಿಗೆಯ ಸಾಧ್ಯತೆಯಿದೆ. ಸಹಕಾರಿ ಸಚಿವಾಲಯದ ಸಕ್ರೀಯ ಸಹಯೋಗವು ಸ್ಥಿರ ಮತ್ತು ಸಾಮಾಜಿಕ ಸಹಕಾರ ವ್ಯವಸ್ಥೆಯನ್ನು ನಿರ್ಮಿಸಲು ಅಗತ್ಯ. ಫೆಡರೇಷನ್ಸ್ ಮತ್ತು ರಾಷ್ಟ್ರೀಯ ಸಹಕಾರಿ ಸಂಸ್ಥೆಗಳ ಪಾತ್ರವು ಪ್ರಮುಖವಾಗಿದೆ. ಏಕೆಂದರೆ ಅವು ಸಣ್ಣ ಸಹಕಾರ ಸಂಸ್ಥೆಗಳಿಗೆ ಅಗತ್ಯವಾದ ಬೆಂಬಲ, ಸಂಪನ್ಮೂಲ ಮತ್ತು ಮಾರುಕಟ್ಟೆ ಪ್ರವೇಶವನ್ನು ಒದಗಿಸುತ್ತದೆ. ಸಹಕಾರಿಗಳ ಕುರಿತು ರಾಷ್ಟ್ರೀಯ ಡೇಟಾಬೇಸ್ ಸೃಷ್ಟಿಸಿರುವುದರಿಂದ ಸುತ್ತಮುತ್ತಲಿನ ಪಾರದರ್ಶಕತೆಯನ್ನು ಉತ್ತೇಜಿಸುತ್ತಾ ಸಹಕಾರಿ ಚಳುವಳಿಯನ್ನು ಮತ್ತಷ್ಟು ಬಲಗೊಳಿಸುತ್ತದೆ.

ಸಹಕಾರ ಸಂಸ್ಥೆಗಳ ನಡುವೆ ಸಹಕಾರವು ಕೆಲವು ಒಂದು ತತ್ವವಲ್ಲ. ಇದು ಸ್ಥಿರತೆ, ಬೆಳವಣಿಗೆ ಮತ್ತು ಹೆಚ್ಚಿನ ಪ್ರಾಮಾಣಿಕತೆಯಲ್ಲಿ ಆರ್ಥಿಕತೆಯನ್ನು ನಿರ್ಮಿಸಲು ಶಕ್ತಿಶಾಲಿ ತಂತ್ರವಾಗಿದೆ. ಸಹಕಾರದಿಂದ ಸಹಕಾರಿ ಸಂಸ್ಥೆಗಳು ತಮ್ಮ ಪ್ರಭಾವವನ್ನು ಹೆಚ್ಚಿಸಬಹುದು ನಾವೀನ್ಯತೆ ಚಲಾಯಿಸಬಹುದು ಮತ್ತು ಬಲಿಷ್ಠ ಹಾಗೂ ಸಹಕಾರ ಸಂಸ್ಥೆಗಳ ಆರ್ಥಿಕತೆಯನ್ನು ನಿರ್ಮಿಸಬಹುದು.

ಸಹಕಾರವನ್ನು ಬಲಪಡಿಸುವುದು, ಜಾಲಗಳನ್ನು ನಿರ್ಮಿಸಲು, ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಮತ್ತು ನೀತಿಗಳನ್ನು ಪ್ರಚಾರ ಮಾಡಲು ಉದ್ದೇಶಿತ ಪ್ರಯತ್ನಗಳನ್ನು ತರುವುದರಿಂದ ಮಾತ್ರ ಸಾಧ್ಯ.

# ನಮ್ಮ ಸಾಮರ್ಥ್ಯದ ಮೇಲೆಯೆ ನಮಗಿರುವ ಅನುಮಾನ (Imposter Syndrom)

ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು

ಕೆಲವು ವಿದ್ಯಾರ್ಥಿಗಳು ಅತ್ಯುತ್ತಮ ಎನ್ನುವಂತಹ ಪೂರ್ವ ಸಿದ್ಧತೆಯನ್ನು ಹೊಂದಿದ್ದರೂ ಸಹಾ ಕೆಲವೊಮ್ಮೆ ತಮ್ಮ ಪ್ರಯತ್ನ,ಶಕ್ತಿ ಹಾಗೂ ಸಾಮರ್ಥ್ಯದ ಮೇಲೆ ವಿಶ್ವಾಸವಿರದೆ ಒಳಗೊಳಗೆ ಅನುಮಾನದಿಂದ ನವೆಯುತ್ತಿರುತ್ತಾರೆ

1) ಮುಂದೆ ಬರಲಿರುವ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ತಿರುವು-ಮುರುವಾಗಿ ಕೇಳಿದರೆ ಹೇಗೆ?

2) ಇಂಗ್ಲೀಷ್ ವಿಷಯದಲ್ಲಿ ನಮ್ಮ ಪಠ್ಯದ ಭಾಗದಲ್ಲಿನ ವ್ಯಾಕರಣವನ್ನು ಹೊರತುಪಡಿಸಿ ಕೊಟ್ಟರೆ ಏನು ಮಾಡುವುದು?

3) ಗಣಿತ ವಿಷಯದ ಉತ್ತರಗಳಿಗೆ ಸರಿಯಾಗಿ ಅಂಕಗಳನ್ನು ಕೊಡದೆ ಹೋದರೆ ಏನು ಮಾಡುವುದು?

ಹೀಗೆ ಇನ್ನೂ ಮುಂದುವರೆದು ಮನೆ ಹಾಗೂ ಕಛೇರಿಯಲ್ಲಿನ ಕೆಲವು ಉದಾಹರಣೆಗಳನ್ನು ನೋಡುವುದಾದರೆ-

4) ಗೃಹಿಣಿ ತನ್ನ ಸಂಬಂಧಿಕರೆಲ್ಲರೂ ತನ್ನನ್ನು ಏನೆಂದು ಅಂದುಕೊಳ್ಳುತ್ತಾರೆ ಎನ್ನುವ ಅನಮಾನದಲ್ಲೆ ಸದಾ ಕಾಲ ಮುಳುಗಿರುವುದು.

5) ಸುಮಾರು ವರ್ಷಗಳಿಂದ ಒಂದು ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿ ಹೊಸದಾಗಿ ವರ್ಗವಾಗಿ ಬಂದಂತಹ ಅಧಿಕಾರಿಯು ತನ್ನಶಕ್ತಿ, ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯ ಬಗ್ಗೆ ಏನೆಂದುಕೊಳ್ಳುತ್ತಾರೆ ಎಂದು ಹಲುಬುವುದು (ವ್ಯಕ್ತಿಯಿಂದ ವ್ಯಕ್ತಿಗೆ ನಿರೀಕ್ಷೆಗಳು ಬದಲಾಗುತ್ತವೆ ಆದರೆ ನಮ್ಮ ಸಾಮರ್ಥ್ಯದಲ್ಲಿ ನಮಗೆ ನಂಬಿಕೆ ಇರಬೇಕು)

ಇವೆಲ್ಲವೂ ನಮ್ಮ ಸಾಮರ್ಥ್ಯದ ಮೇಲೆಯೆ ನಮಗಿರುವ ಅನುಮಾನಕ್ಕೆ ಉದಾಹರಣೆಗಳು.ಇದನ್ನೆ ಮನಃ ಶಾಸ್ತ್ರದಲ್ಲಿ 'Imposter Syndrom' ಎಂದು ಹೇಳುತ್ತಾರೆ.ಹಾಗಿದ್ದರೆ ಏನಿದು Imposter Syndrom'? "ಯಾವುದೇ ವ್ಯಕ್ತಿಯು ತಮ್ಮ ಶಕ್ತಿ-ಸಾಮರ್ಥ್ಯ, ಕೌಶಲ್ಯ ಮತ್ತು ಫ್ರತಿಭೆಯನ್ನು ಅನುಮಾನಿಸುತ್ತಲೆ ಕೆಲಸ ಸಾಧ್ಯತೆಯ ಬಗ್ಗೆ ಅನುಮಾನದಿಂದರುವುದನ್ನೆ' Imposter Syndrom' ಎನ್ನುತ್ತಾರೆ" .ಈ Imposter Syndrom' ಎನ್ನುವ ವಿಷಯವನ್ನು ಮೊಟ್ಟಮೊದಲ ಬಾರಿಗೆ ಅಂದರೆ 1978ರಲ್ಲಿ ಪೋಲೈನ್ ರೋಸ್ ಕ್ಲೈನ್ಸ್ ಮತ್ತು ಸುಝಾನ್ ಏಮ್ಸ್ ಎನ್ನುವ ಮನಃ ಶಾಸ್ತ್ರಜ್ಞರು ಚಲಾವಣೆಗೆ ತಂದರು.

### ' Imposter Syndrom'ಗೆ ಕಾರಣಗಳು:-

ಆತಂಕ, ಸೋಲಿನ ಭಯ, ಮಾನಸಿಕ ಖಿನ್ನತೆ ಇದೀಷ್ಟು ಅಲ್ಲದೆ ಕುಟುಂಬದಲ್ಲಿನ ವಾತವರಣ, ಸುತ್ತಲಿನ ಪರಿಸರಗಳು ಸಹಾ Imposter Syndrom' ಗೆ ಕಾರಣಗಳಾಗಿರಬಹುದು.ಇನ್ನೂ ಮುಂದುವರೆದು ಈ ಎಲ್ಲಾ ಕಾರಣಗಳನ್ನು 4P Perfectionism, Paralysis , Procrastination, People pleasing ಎಂದು ವಿಭಾಗಿಸಬಹುದು:

ಪರಿಪೂರ್ಣತೆ (Perfectionism):- ನಾವು ಪರಿಪೂರ್ಣತೆ ಅಥವಾ ಯಾವುದಾದರೂ ಒಂದು ವಿಷಯದಲ್ಲಿ ಹಿಡಿತವನ್ನು ಹೊಂದಲು ಹಾಕಿಕೊಂಡ ಸಮಯದ ಮಿತಿಯು ಅವೈಜ್ಞಾನಿಕವಾಗಿರುತ್ತದೆ.ಈ ತರಹದ ತೀರ ಬಿಗಿ ಎನ್ನುವಂತಹ ಕಟ್ಟಳೆಗಳೇ 'Imposter Syndrom' ಕಾರಣಗಳಾಗಬಹುದು

ನೋನ್ಯತೆ (Paralysis):- ನಾವು ಮಾಡಿ ಮುಗಿಸಬೇಕೆಂದಿರುವ ಕಾರ್ಯವು ಪದೇ ಪದೇ ಸೋಲುತಿದ್ದರೆ ಆಗ ಈ ತರಹದ ಭಾವನೆಗಳಿಗೆ ಒಳಗಾಗುವ ಸಾಧ್ಯತೆಗಳಿವೆ.

ವಿಳಂಬ ಪ್ರವೃತ್ತಿ (Procrastination):- ಅತಿ ಮುಖ್ಯ ವಿಷಯದ ಕಡೆ ಗಮನ ಕೊಡದೆ ಯಾವುದೇ ಪ್ರಾಮುಖ್ಯತೆ ಇಲ್ಲದಿರುವ ವಿಷಯಗಳ ಕಡೆ ಗಮನ ಕೊಡುವುದರಿಂದ ನಿರೀಕ್ಷಿತ ಫಲಿತಾಂಶವನ್ನು ಪಡೆಯದಿರಲಾಗುತ್ತದೆ.ಈ ತರಹದ ಸ್ವಭಾವಗಳೆ ಮುಂದೆ 'Imposter Syndrom'ಗೆ ಕಾರಣಗಳಾಗುತ್ತವೆ.

ಜನ ಮೆಚ್ಚಿಸುವ ಕೆಲಸ (People pleasing):-ಜನರನ್ನು ಮೆಚ್ಚಿಸುವುದಕ್ಕಾಗಿ ಸದಾ ಕಾಲ ಯಾವುದೇ ಕೆಲಸಕ್ಕೂ ಹೂಂ ಮಾಡುತ್ತೇನೆ" ಎಂದು ಹೇಳುತ್ತಿರುವುದು ನಂತರದ ದಿನಗಳಲ್ಲಿ ಯಾವು ಕೆಲಸ ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎನ್ನುವ ಗೊಂದಲದಲ್ಲಿ ಸಿಲುಕಿರುತ್ತೇವೆ. ಇದೇ ಮುಂದೆ 'Imposter Syndrom' ಗೆ ಕಾರಣವಾಗಬಹುದು

ಇನ್ನೂ ಹೇಗೆ ನಾವು 'Imposter Syndrom' ನಿಂದ ಹೊರಬರಬಹುದು?:-

ಅತಿ ಮುಖ್ಯವಾಗಿ 'Imposter Syndrom' ನಿಂದ ಹೊರಬರಲು ನಮ್ಮನ್ನು ನಾವು ಅರಿತುಕೊಳ್ಳಬೇಕು !!!

- ಕಾಲ-ಕಾಲಕ್ಕೆ ನಮಗೊದಗಿ ಬರುವ ಋಣಾತ್ಮಕ ಆಲೋಚನೆಗಳನ್ನು ಧನಾತ್ಮಕವಾಗಿ ಬದಲಾಯಿಸಕೊಳ್ಳುವ ಪ್ರಯತ್ನ ನಮ್ಮದಾಗಬೇಕು
- ನಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಉತ್ತಮ ಸ್ನೇಹಿತರನ್ನು ಹೊಂದುವುದು ಅನಿವಾರ್ಯ
- ಪ್ರತಿದಿನವು ಕಲಿಯತ್ತಾ ಇರುವುದು ಮತ್ತು ಕಲಿಕೆಗೆ ಸಮನಾದುದು ಯಾವುದು ಇಲ್ಲ ಎನ್ನುವ ಸರ್ವಕಾಲಿಕ ಸತ್ಯವನ್ನು ಪದೇ ಪದೇ

ಹೇಳಿಕೊಳ್ಳುವುದು

- ಸುಲಭವಾಗಿ ತಲುಪಬಹುದಾದಂತಹ ಗುರಿಗಳನ್ನು ಹಾಕಿಕೊಳ್ಳುವುದು. ಅಷ್ಟೇ ಅಲ್ಲದೆ ಸಣ್ಣ–ಪುಟ್ಟ ಗುರಿ ತಲುಪಿದಾಗಲೆಲ್ಲವೂ ಸಂಭ್ರಮಿಸುವುದು
- ಪರಿಪೂರ್ಣತೆ ಹೊಂದುವುದಕ್ಕೆ ಸದಾ ತುಡಿಯವುದು ಮತ್ತು ಆಸಕ್ತಿದಾಯಕ ವಿಷಯಗಳಲ್ಲಿ ಪರಿಪೂರ್ಣತೆ ಬಿಡದೇ ಇರುವುದು.

ಎಲ್ಲಕಿಂತಲೂ ಮಿಗಿಲಾಗಿ ಮನಃಶಾಸ್ತ್ರಜ್ಞರ ಸಲಹೆ ಪಡೆಯುವುದು.

## ನಾನು ಹೇಳಿದ್ದೆ ಸರಿ ಎನ್ನುವ ಮನಸ್ಥಿತಿ

ನಾವು ನಮ್ಮ ದಿನ ನಿತ್ಯದ ಜೀವನದಲ್ಲಿ "ನಾನು ಹೇಳಿದ್ದೆ ಸರಿ" ಎಂದು ವಿತಂಡ ಮಾಡುವ ಸಾಕಷ್ಟು ಜನರನ್ನು ನೋಡಿರತ್ತೇವೆ.ತಾವು ಹೇಳಿದ್ದೆ ಸರಿ ಎಂದು Conclude ಮಾಡುವವರ ನಿರ್ಧಾರವೆಲ್ಲವೂ 'ಪೂರ್ವ ನಿರ್ಧಾ–ರಿತ' ಮನಸ್ಸಿನಿಂದ ಪ್ರೇರಿತವಾಗಿರುತ್ತದೆ.ಕೇವಲ ಅದಷ್ಟೆ ಅಲ್ಲದೆ ಯಾವ ವಾದಕ್ಕೂ ಅವಕಾಶವಿಲ್ಲದಂತೆ ತಮ್ಮ ನಿರ್ಧಾರ/ಅಭಿಪ್ರಾಯವೆ ಸರಿ ಎನ್ನುವ ವಿತಂಡವಾದ ಮಾಡುತ್ತಿರುತ್ತಾರೆ. ಇದನ್ನೇ 'Confirmation Bias' ಎಂದು ಹೇಳುವುದು ಅಂದರೆ ಕನ್ನಡದಲ್ಲಿ 'ದೃಢೀಕರಣ ಪಕ್ಷಪಾತ' ಎನ್ನಬಹುದು."ಯಾವುದಾದರೂ ಮಾಹಿತಿ /ವಿಷಯವನ್ನು ಹುಡುಕುವಾಗ, ಅರ್ಥೈಸಿಕೊಳ್ಳುವಾಗ, ಪೂರ್ವ ನಿರ್ಧಾರಿತ ವಿಶ್ವಾಸದ ನೇರಕ್ಕೆ ಯೋಚಿಸುವ ಒಲವನ್ನೇ ನಾವು 'ದೃಢೀಕರಣ ಪಕ್ಷಪಾತ' ಎಂದು ಹೇಳಬಹುದು.ಈ 'ದೃಢಿಕರಣ ಪಕ್ಷಪಾತ' (Confirmation Bias) ಮೊಟ್ಟ ಮೊದಲ ಬಾರಿಗೆ ಚಾಲ್ತಿಗೆ ತಂದದ್ದು ಬ್ರಿಟಿಷ್ ಮನಃ ಶಾಸ್ತ್ರಜ್ಞ – ಪೀಟರ್ ವ್ಯಾಸನ್.

**ಸೂಕ್ಷ್ಮವಾಗಿ ನೋಡಿದಾಗ ನಮಗೆ ಎರಡು ಕಾರಣಗಳು ದೊರೆಯುತ್ತವೆ.**

(1) ಸವಾಲುಗಳನ್ನು ಸ್ವೀಕರಿಸುವ ಮನೋಧರ್ಮ ಇಲ್ಲದೆ ಇರುವುದು

(2) ತಮ್ಮ ಅಭಿಪ್ರಾಯವೇ 'ಸರಿ' ಎಂದು ತೋರಿಸುವುದು

(1) ಸವಾಲುಗಳನ್ನು ಸ್ವೀಕರಿಸುವ ಮನೋಧರ್ಮ ಇಲ್ಲದೆ ಇರುವುದು:– ಈ ವಿಷಯವನ್ನು ಸಣ್ಣದೊಂದು ಉದಾಹರಣೆಯಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಉದಾ:ಕಛೇರಿಯಲ್ಲಿ ಯಾವುದೊ ಒಬ್ಬ ವ್ಯಕ್ತಿಯ ಬಗ್ಗೆ ಉತ್ತಮ ಕೆಲಸಗಾರ ಎನ್ನುವ ಹೆಸರು ಇದ್ದಾಗ್ಯೂ ಸಣ್ಣ–ಪುಟ್ಟ ಕಾರಣವಲ್ಲದ ಕಾರಣ ಹುಡುಕಿ ತೇಜೋವಧೆಗೆ ನಿಂತಿರುತ್ತಾರೆ. ಈ ನಿದರ್ಶನದಲ್ಲಿ ತಮ್ಮ ಅಭಿಪ್ರಾಯವನ್ನು ಯಾರಾದರೂ Challenge ಮಾಡಿದರೆ ತಮ್ಮ ಬಳಿ ಅದಕ್ಕೆ ಉತ್ತರವಿಲ್ಲ.ಹಾಗಾಗಿ ಮುಂದೆ ಬರಬಹುದಾದ ಸವಾಲನ್ನು ಯಾವುದೆ ತಮ್ಮ ಮೂಗಿನ ನೇರಕ್ಕೆ ಅಭಿಪ್ರಾಯಗಳನ್ನು ಮಂಡಿಸಿ ತಾವೇ 'ಸರಿ' ಎಂದು ತೋರುತ್ತಿರುತ್ತಾರೆ.ಅಂದರೆ ತಮ್ಮ ಮೂಗಿನ ನೇರಕ್ಕೆ ಯೋಚಿಸವವರು ಅಥವಾ ತಮ್ಮ ಅಭಿಪ್ರಾಯವೆ ಸರಿಯಾಗಿದೆ ಎಂದು ವಿತಂಡವಾದ ಮಾಡುವವರು ಯಾರಾದರೂ ತಮ್ಮ ಅಭಿಪ್ರಾಯವನ್ನು Challenge ಮಾಡಿದರೆ ಅದಕ್ಕೆ ಅವರ ಬಳಿ ಸರಿಯಾದ ಉತ್ತರವಿರುವುದಿಲ್ಲ.

(2) ತಮ್ಮ ಅಭಿಪ್ರಾಯವೇ 'ಸರಿ' ಎಂದು ತೋರಿಸುವುದು:–ವಿಷಯಗಳ ಬಗ್ಗೆ ಆಳವಾದ ಅಧ್ಯಾಯವನ್ನು ಮಾಡಿ ಯಾವುದೇ ತರಹದ ಪ್ರಶ್ನೆಗಳನ್ನು ಸುಲಭವಾಗಿ ಉತ್ತರಿಸುವ ಶಕ್ತಿ ಇರುವವರ ಮುಂದೆ ತಮ್ಮ ಅಭಿಪ್ರಾಯವನು 'ಮಂಡಿಯೂರಿ ಕುಳಿತುಕೊಳ್ಳಬಾರದು' .ಅದಕ್ಕಾಗಿ ತಮ್ಮ ಅಭಿಪ್ರಾಯವನ್ನು 'ಸರಿ' ಎಂದು ತೋರಬೇಕು.ಹಾಗೆ ತಮ್ಮ ಅಭಿಪ್ರಾಯವು 'ಸರಿ' ಎಂದು ತೋರಬೇಕೆಂದರೆ ತಮ್ಮ ಅಭಿಪ್ರಾಯದ 'ಬಲವರ್ಧನೆ'ಯಾಗಬೇಕು. ಹಾಗಾಗಿ ತಮ್ಮ ಮೂಗಿನ ನೇರಕ್ಕೆ ಎಲ್ಲವನ್ನೂ ದೃಢಿಪಡಿಸಿಕೊಳ್ಳುತ್ತಿರುತ್ತಾರೆ.

ಈ ದೃಢೀಕರಣ ಪಕ್ಷಪಾತವು ನಮ್ಮ ನಿರ್ಧಾರ ಪ್ರಕ್ರಿಯೆಯ ಮೇಲೆ ಬಹುದೊಡ್ಡ ದುಷ್ಪರಿಣಾಮವನ್ನುಂಟು ಮಾಡುತ್ತದೆ.ಇದಕ್ಕೆ ಕಾರಣವು ತಂಬಾ ಸರಳ ನಾವು ನಮ್ಮ ಅಭಿಪ್ರಾಯವನ್ನೆ ನಂಬಿರುತ್ತೇವೆ ಮತ್ತು ಅದೇ 'ಸರಿ' ಎಂದು ಪದೇ–ಪದೇ ಅನ್ನುತ್ತಿರುತ್ತೇವೆ ಹೀಗಿರುವಾಗ ಅಲ್ಲಿ ನಾವು ಬೇರೆ ಅಭಿಪ್ರಾಯವನ್ನು ಒಪ್ಪಿಕೊಳ್ಳುವ 'ಮುಕ್ತ ಮನಸ್ಸು' ಇರುವುದಿಲ್ಲ. ಯಾವ ಕ್ಷಣದಲ್ಲಿ ನಾವು ಬೇರೆ ಅಭಿಪ್ರಾಯಕ್ಕೆ ನಮ್ಮನ್ನು ನಾವು ತೆರೆದುಕೊಳ್ಳುವುದಿಲ್ಲವೂ ಆ ಕ್ಷಣದಲ್ಲಿ

**ದೃಢೀಕರಣ ಪಕ್ಷಪಾತ (Confirmation Bias) ವನ್ನು ಹೇಗೆ ಗುರುತಿಸುವುದು:**

- ನಮ್ಮ ಮೂಗಿನೆ ನೇರಕ್ಕೆ ನಾವು ವಿಷಯಗಳನ್ನು ಹುಡುಕುತಿದ್ದರೆ ಅದು ದೃಢೀಕರಣ ಪಕ್ಷಪಾತದ ಸೋಚನೆ.
- ಕೇವಲ ತಮ್ಮ ಗ್ರಹಿಕೆಯಲ್ಲಿ 'ಸರಿ' ಎಂದು ಅನ್ನಿಸಿದ್ದನ್ನು ಮಾತ್ರವೇ 'ಸರಿ' ಎಂದು ಹೇಳುತಿದ್ದರೆ ಅದು ದೃಢೀಕರಣ ಪಕ್ಷಪಾತದ ಸೂಚನೆ.
- ಯಾವುದಾದರೂ ಒಂದ ವಿಷಯದ ಬಗ್ಗೆ ನಿರ್ಧಾರಕ್ಕೆ ಬರುವಾಗ ತಾವು ನಂಬಿರುವ ಪೂರ್ವ ನಿರ್ಧಾರಿತ ನಂಬಿಕೆಗಳನ್ನು ಮುಂದಿಟ್ಟುಕೊಂಡು ಅದರ ಮೇಲೆಯೇ ಅವಲಂಬಿತವಾಗುವುದು.
- ಜಾಣತನದಿಂದ ಕೇವಲ ಕೆಲವನ್ನು ಮಾತ್ರ ಆಯ್ದಿಟ್ಟುಕೊಂಡು ನೆನಪಿಟ್ಟುಕೊಳ್ಳುವುದು

**ಇನ್ನೂ ಹೇಗೆ ಈ ದೃಢೀಕರಣ ಪಕ್ಷಪಾತದಿಂದ ಹೊರಬರುವುದು.**

- ಮೇಲೆ ತಿಳಿಸಿದ ಕೆಲವೊಂದೊ ಸಜ್ಞೆಗಳು ದೃಢೀಕರಣ ಪಕ್ಷಪಾತದ ಸೋಚನೆಗಳು. ಒಮ್ಮೆ ಸಜ್ಞೆಗಳು ನಮ್ಮ ಗಮನಕ್ಕೆ ಬಂದಾಕ್ಷಣ ಕಾರ್ಯ ಪ್ರವೃತ್ತರಾಗುವುದು ಉತ್ತಮ.
- ನಮ್ಮ ಮಿತಿಯಲ್ಲಿರುವ ಎಲ್ಲಾ ವಿಷಯಗಳನ್ನು ಅರಿತುಕೊಂಡು ಪರಾಮರ್ಶಿಸಿದ ನಂತರವೇ ನಿರ್ಧಾರಕ್ಕೆ ಬರುವುದು
- ಬೇರೆ–ಬೇರೆ ಅಭಿಪ್ರಾಯಗಳನ್ನು ಕೇಳುವ ಮತ್ತು ಅದರ ಸಾಧಕ–ಬಾಧಕಗಳನ್ನು ಅರ್ಥಮಾಡಿಕೊಳ್ಳುವ ಪ್ರಾಂಜಲ ಮನಸ್ಸನ್ನು ಬೆಳೆಸಿಕೊಳ್ಳುವುದು

ನಿರ್ಧಾರಗಳು ಮಾಡುವಾಗ ಒಂದೇ ದಿಕ್ಕಿನಲ್ಲಿ ಆಲೋಚಿಸುತ್ತೇವೆ ಮತ್ತು ಅದು ನಮ್ಮ ನಿರ್ಧಾರ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ.

# ಭಜನೆ-ಕೀರ್ತನೆ-ಧ್ಯಾನ ಜಾಗರಣೆಗಳ ಶಿವರಾತ್ರಿ

– ಶ್ರೀ ಶಿವಕುಮಾರ ಬಿರಾದಾರ, ತರಬೇತಿ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು



ಮಹಾಶಿವರಾತ್ರಿ ಹಿಂದೂ ಧರ್ಮದ ಪ್ರಮುಖ ಆಚರಣೆಗಳಲ್ಲಿ ಒಂದಾಗಿದೆ. ಈ ದಿನವು ಪ್ರತಿ ವರ್ಷ ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿ ತಿಥಿಯಲ್ಲಿ (ಫೆಬ್ರವರಿ–ಮಾರ್ಚ್ ತಿಂಗಳಲ್ಲಿ) ಆಚರಿಸಲಾಗುತ್ತದೆ. "ಶಿವರಾತ್ರಿಯ" ಅರ್ಥ "ಶಿವನರಾತ್ರಿಯ"ಯಾಗಿದೆ. ಮಹಾಶಿವರಾತ್ರಿ ವಿಶೇಷವಾಗಿ ಭಗವಂತ ಶಿವನ ಆರಾಧನೆಗೆ ಸಮರ್ಪಿತ ದಿನವಾಗಿದೆ.

(ಶ್ರವಣ, ಕೀರ್ತನಾ, ಸ್ಮರಣ, ಪಾದಸೇವನ, ಅರ್ಚನಾ, ವಂದನಾ, ದಾಸ್ಯ, ಸಖ್ಯ ಹಾಗೂ ಆತ್ಮ ನಿವೇದನಗಳ ಮೂಲಕ ಭಗವಂತನನ್ನು ಸೇವಿಸುವ ದಿನ)

ಮಹತ್ವ ಮಹಾಶಿವರಾತ್ರಿಯು ಭಗವಂತ ಶಿವ ಮತ್ತು ಪಾರ್ವತಿಯ ವಿವಾಹ ದಿನವೆಂದು ಐತಿಹಾಸಿಕವಾಗಿ ಗುರುತಿಸಲಾಗಿದೆ. ಇದು ಜೀವನದ ನಕಾರಾತ್ಮಕ ಶಕ್ತಿಗಳನ್ನು ನಿರ್ನಾಮಗೊಳಿಸಿ, ಪವಿತ್ರತೆ ಮತ್ತು ಸಾತ್ವಿಕ ಶಕ್ತಿಯ ಸಾಧನೆಗಾಗಿ ಆಚರಿಸಲಾಗುತ್ತದೆ. ಈ ದಿನವನ್ನು ಧ್ಯಾನ, ಜಪ, ಉಪವಾಸ ಮತ್ತು ಶಿವಲಿಂಗದ ಪೂಜೆಯ ಮೂಲಕ ಭಕ್ತರು ಆಚರಿಸುತ್ತಾರೆ.

## ಆಚರಣೆಯ ವಿಶೇಷತೆ

**ಶಿವನ ಆರಾಧನೆ:** ಭಕ್ತರು ಈ ದಿನ ಪುಣ್ಯ ತೀರ್ಥಸ್ನಾನ ಮಾಡಿ, ಶಿವಲಿಂಗದ ಮೇಲೆ ಜಲ, ಹಾಲು, ಮೊಸರು, ತುಪ್ಪದ ಅಭಿಷೇಕ ಮತ್ತು ಪುಷ್ಪಗಳನ್ನು ಅರ್ಪಿಸುತ್ತಾರೆ.

**ಉಪವಾಸ:** ಮಹಾಶಿವರಾತ್ರಿಯಂದು ಉಪವಾಸವಿದ್ದು, ಇಡೀ ದಿನವನ್ನು ಪ್ರಾರ್ಥನೆ ಮತ್ತು ಧ್ಯಾನದಲ್ಲಿ ಕಳೆಯುತ್ತಾರೆ.

**ಜಾಗರಣೆ:** ರಾತ್ರಿಯಿಡೀ ಜಾಗರಣೆ ಮಾಡಿ ಶಿವನ ಭಜನೆ, ಕೀರ್ತನೆ ಮತ್ತು ಜಪದಲ್ಲಿ ಭಾಗವಹಿಸುತ್ತಾರೆ.

**ಕಥೆಗಳು ಮತ್ತು ಪಾಠಗಳು:** ಶಿವನ ಜೀವನದ ಬಗ್ಗೆ ಕಥೆಗಳು ಮತ್ತು ಪಾಠಗಳನ್ನು ಕೇಳುವುದು ಮತ್ತು ಕೇಳಿಸುವುದು ಆಚರಣೆಯ ಭಾಗವಾಗಿದೆ.

ಪೌರಾಣಿಕ ಹಿನ್ನೆಲೆ ಹಿಂದೂ ಪುರಾಣಗಳ ಪ್ರಕಾರ, ಮಹಾಶಿವರಾತ್ರಿಯಂದು ಶಿವನು ಕಾಲಕಾಲವೇ ನಾಶಮಾಡುವ ಹಾಲಾಹಲ ವಿಷವನ್ನು ಸೇವಿಸಿ ಲೋಕವನ್ನು ರಕ್ಷಿಸಿದನು. ಇದನ್ನು ವಿಶ್ವದ ಸಮತೋಲನವನ್ನು ಕಾಪಾಡಲು ದೇವತೆಗಳ ಮತ್ತು ದೈತ್ಯರ ಸಹಾಯದಿಂದ ಮಾಡಿದ ಮಹಾ ಸಮುದ್ರ ಮಂಥನದ ವೇಳೆ ಸಂಭವಿಸಿದ ಘಟನೆಯಾಗಿ ಗುರುತಿಸಲಾಗಿದೆ.

ಆಧ್ಯಾತ್ಮಿಕ ಪ್ರಾಮುಖ್ಯತೆ ಮಹಾಶಿವರಾತ್ರಿ ಆಧ್ಯಾತ್ಮಿಕತೆಯನ್ನು ಬಲಪಡಿಸಲು ಉತ್ತಮ ಅವಕಾಶವಾಗಿದೆ. ಈ ರಾತ್ರಿಯು ಜೀವಾತ್ಮ ಮತ್ತು ಪರಮಾತ್ಮನ ಐಕ್ಯತೆಯನ್ನು ತಿಳಿಯಲು ಪ್ರೇರಕವಾಗಿದ್ದು, ಪ್ರಾರ್ಥನೆ ಮತ್ತು ಧ್ಯಾನದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಸಾಧಿಸಲು ಸಹಕಾರಿಯಾಗಿದೆ.

ಮಹಾಶಿವರಾತ್ರಿಯ ಸಂದೇಶ ಮಹಾಶಿವರಾತ್ರಿಯು ಆಧ್ಯಾತ್ಮದ ಜೊತೆಗೆ ಶಾಂತಿ, ಏಕತೆ ಮತ್ತು ಪರೋಪಕಾರದ ಸಂದೇಶವನ್ನು ಹರಡುತ್ತದೆ. ಶಿವನ ಅನುಗ್ರಹದಿಂದ ಜೀವನದಲ್ಲಿ ಶ್ರೇಷ್ಠತೆ, ಸವಿಧಾನತೆ ಮತ್ತು ಸಾತ್ವಿಕತೆಯನ್ನು ಸಾಧಿಸಲು ಇದು ನಮಗೆ ಪ್ರೇರಣೆಯಾಗುತ್ತದೆ. ಮಹಾಶಿವರಾತ್ರಿಯ ಆಚರಣೆ ನಂಬಿಕೆ, ಭಕ್ತಿ ಮತ್ತು ಜೀವನದ ಉನ್ನತ ಗುರಿಯತ್ತ ನಮ್ಮನ್ನು ಪ್ರೇರೇಪಿಸುವ ಸಮುದಾಯದ ಹಬ್ಬವಾಗಿದೆ.

**ಓಂ ನಮಃ ಶಿವಾಯ !**

## ಪೂರ್ಣಕುಂಭಮೇಳ: ಭಾರತೀಯ ಸಂಸ್ಕೃತಿಯ ಮಹಾನ್ ಧಾರ್ಮಿಕ ಸಂಭ್ರಮ

ಪೂರ್ಣಕುಂಭಮೇಳವು ಹಿಂದೂ ಧರ್ಮದ ಅತ್ಯಂತ ಪವಿತ್ರ ಮತ್ತು ದೊಡ್ಡ ಧಾರ್ಮಿಕ ಉತ್ಸವಗಳಲ್ಲಿ ಒಂದಾಗಿದೆ. ಈ ಮೇಳವು 144 ವರ್ಷಕ್ಕೊಮ್ಮೆ ನಡೆಯುವ ಅಪರೂಪದ ಸಂಭ್ರಮವಾಗಿದೆ, ಇದು ಭಾರತೀಯ ಆಧ್ಯಾತ್ಮದ ಅತ್ಯಂತ ಶ್ರೇಷ್ಠ ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಪೂರ್ಣಕುಂಭಮೇಳವು ಅಪಾರ ಧಾರ್ಮಿಕ ತಾತ್ಪರ್ಯವನ್ನು ಹೊಂದಿದ್ದು, ಲಕ್ಷಾಂತರ ಭಕ್ತರು ಮತ್ತು ಯೋಗಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ.

### ಪೂರ್ಣಕುಂಭಮೇಳದ ಮಹತ್ವ

ಪೂರ್ಣಕುಂಭಮೇಳವು ಅನೇಕ ಪೌರಾಣಿಕ ಮತ್ತು ಆಧ್ಯಾತ್ಮಿಕ ಕತೆಗಳ ಆಧಾರದ ಮೇಲೆ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಮೇಳದಲ್ಲಿ ಭಾಗವಹಿಸುವುದರಿಂದ ಭಕ್ತರು ತಮ್ಮ ಪಾಪಗಳನ್ನು ತೊಳೆದು ಮೋಕ್ಷವನ್ನು ಪಡೆಯಬಹುದು ಎಂಬ ನಂಬಿಕೆ ಇದೆ. ಪೂರ್ಣಕುಂಭಮೇಳವು ಕೇವಲ ಧಾರ್ಮಿಕ ಉತ್ಸವವಲ್ಲ, ಅದು ಸಮಾಜದ ಎಲ್ಲ ವರ್ಗದ ಜನರನ್ನು ಒಂದೇ ವೇದಿಕೆಯಡಿಯಲ್ಲಿ ತರಲು ಸಹಕಾರಿ ಆಗಿದೆ.

### ಮೇಳದ ಪೌರಾಣಿಕ ಹಿನ್ನೆಲೆ

ಪೌರಾಣಿಕ ಕಥೆ ಪ್ರಕಾರ, ದೇವತೆಗಳು ಮತ್ತು ದೈತ್ಯರು ಅಮೃತವನ್ನು (ಅಜರಾಮರತ್ವದ ಮಂತ್ರದ್ರವ್ಯ) ಪಡೆಯಲು ಕ್ಷೀರಸಾಗರವನ್ನು ಮಂಥಿಸಿದ್ದರು. ಈ ಸಮಯದಲ್ಲಿ ಅಮೃತವು ಒಂದು ಕುಂಭದಲ್ಲಿ (ಬಿಂದಿಗೆಯಲ್ಲಿ) ಸಂಗ್ರಹಿಸಲ್ಪಟ್ಟಿತು. ವೃಷಭ (ಅಶ್ವ) ನ ಅಂತರಿಕ್ಷದಲ್ಲಿ ಅಮೃತವನ್ನು ರಕ್ಷಿಸಲು ದೇವತೆಗಳು ದೈತ್ಯರೊಡನೆ ಯುದ್ಧ ಮಾಡಿದಾಗ, ಅಮೃತದ ಹನಿಗಳು ನಾಲ್ಕು ಪವಿತ್ರ ಸ್ಥಳಗಳಲ್ಲಿ ಬಿದ್ದವು:

- ಪ್ರಯಾಗರಾಜ (ಅಲ್ಲಾಹಾಬಾದ್)

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2023-2025.




- ಹರಿದ್ವಾರ
- ನಾಸಿಕ್
- ಉಜ್ಜಯಿನಿ

ಈ ಸ್ಥಳಗಳು ಧಾರ್ಮಿಕ ತೀರ್ಥಕ್ಷೇತ್ರಗಳಾಗಿ ಪರಿವರ್ತಿತಗೊಂಡವು.

### ಗ್ರಹಗತಿಗಳ ಪ್ರಾಮುಖ್ಯತೆ

ಪೂರ್ಣಕುಂಭಮೇಳವನ್ನು ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ನಿರ್ಧರಿಸಲಾಗುತ್ತದೆ. ಗಂಗಾ, ಯಮುನಾ ಮತ್ತು ಪವಿತ್ರ ಸರಸ್ವತಿ ನದಿಗಳ ಸಂಗಮದಲ್ಲಿ, ಅಥವಾ ಇತರ ಪವಿತ್ರ ನದಿಗಳ ತೀರದಲ್ಲಿ ಗ್ರಹಗತಿಗಳ ವಿಶೇಷ ಅಸ್ತಿತ್ವದ ಸಮಯದಲ್ಲಿ ಈ ಮೇಳವನ್ನು ಆಯೋಜಿಸಲಾಗುತ್ತದೆ.

### ಪೂರ್ಣಕುಂಭಮೇಳದ ಆಚರಣೆಗಳ ವಿಶೇಷತೆ

#### ಸ್ನಾನ ಮೇಳ

- ಗಂಗಾ, ಯಮುನಾ ಅಥವಾ ಗೋದಾವರಿ ನದಿಯ ತೀರದಲ್ಲಿ ಪವಿತ್ರ ಸ್ನಾನ ಮಾಡುವುದು ಅತ್ಯಂತ ಮುಖ್ಯ.
- ಸ್ನಾನ ಮಾಡುವ ಮೂಲಕ ಭಕ್ತರು ತಮ್ಮ ಪಾಪಗಳನ್ನು ತೊಳೆದು ಆಧ್ಯಾತ್ಮಿಕ ಶುದ್ಧೀಕರಣವನ್ನು ಸಾಧಿಸುತ್ತಾರೆ.

#### ಸಂತ ಮತ್ತು ಮಹಾತ್ಮರ ಭೇಟಿಗಳು

- ದೇಶದ ವಿವಿಧ ಭಾಗಗಳಿಂದ ಆಗಮಿಸುವ ಯೋಗಿಗಳು, ಸಂತರು ಮತ್ತು ಸಾಧುಗಳು ತಮ್ಮ ಆಧ್ಯಾತ್ಮಿಕ ತತ್ವಗಳನ್ನು ಪಠಿಸುತ್ತಾರೆ.
- ಕೀರ್ತನೆಗಳು, ಪ್ರಾರ್ಥನೆಗಳು ಮತ್ತು ಧಾರ್ಮಿಕ ಚರ್ಚೆಗಳು ಪ್ರಮುಖ ಆಕರ್ಷಣೆಯಾಗಿ ಕಾಣಿಸುತ್ತವೆ.

#### ಅನ್ನಸಂತರ್ಪಣೆ ಮತ್ತು ಸೇವೆ

- ಲಕ್ಷಾಂತರ ಭಕ್ತರಿಗೆ ಉಚಿತವಾಗಿ ಆಹಾರ ವಿತರಣೆ ಮಾಡಲಾಗುತ್ತದೆ.
- ಬಡಜನರಿಗೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಸೇವೆಗಳನ್ನು ನೀಡಲಾಗುತ್ತದೆ.

#### ರಂಗಭೂಮಿ ಮತ್ತು ಸಂಸ್ಕೃತಿಯ ಉತ್ಸವ

- ಧಾರ್ಮಿಕ ನಾಟಕಗಳು, ಕಾವ್ಯಗಳು ಮತ್ತು ಗಾಯನ ಕಾರ್ಯಕ್ರಮಗಳು ಮೇಳದ ಸಾಂಸ್ಕೃತಿಕ ಭಾಗವಾಗಿವೆ.

### ಪ್ರಮುಖ ಸ್ಥಳಗಳು

**ಪ್ರಯಾಗರಾಜ:** ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮದಲ್ಲಿ, ಈ ಸ್ಥಳವು ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರವಾಗಿದೆ.

**ಹರಿದ್ವಾರ:** ಗಂಗಾ ನದಿ ಹಿಮಾಲಯದಿಂದ ಇಳಿಯುವ ಸ್ಥಳವಾಗಿ ಇದು ವಿಶಿಷ್ಟವಾಗಿದೆ.

**ಉಜ್ಜಯಿನಿ:** ಶಿವನ ಸಾನ್ನಿಧ್ಯದಲ್ಲಿ, ಮಹಾಕಾಳೇಶ್ವರದ ಪವಿತ್ರ ಕ್ಷೇತ್ರವಾಗಿದೆ.

**ನಾಸಿಕ್:** ಗೋದಾವರಿ ನದಿಯ ತೀರದಲ್ಲಿ ಪವಿತ್ರ ಸ್ಥಳವಾಗಿದೆ.

### ಪೂರ್ಣಕುಂಭಮೇಳದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಾಮುಖ್ಯತೆ

**ಸಾಮಾಜಿಕ ಏಕತೆ:** ಈ ಮೇಳವು ಸಮಾಜದ ಎಲ್ಲ ವರ್ಗದ ಜನರನ್ನು ಒಂದೇ ಸ್ಥಳದಲ್ಲಿ ತರಲು ಸಹಾಯ ಮಾಡುತ್ತದೆ.

**ಪರಿಸರ ಜಾಗೃತಿ:** ನದಿಗಳ ಶುದ್ಧತೆ ಮತ್ತು ಪರಿಸರ ಸಂರಕ್ಷಣೆಗಾಗಿ ಮಹತ್ವದ ಸಂದೇಶವನ್ನು ಹರಡುತ್ತದೆ.

**ಧಾರ್ಮಿಕ ಶಿಕ್ಷಣ:** ಭಕ್ತಿ, ತ್ಯಾಗ ಮತ್ತು ಶಾಂತಿಯ ತತ್ವಗಳನ್ನು ಪ್ರತಿಪಾದಿಸುತ್ತದೆ.

**ಆರ್ಥಿಕ ಪ್ರಭಾವ:** ಈ ಮೇಳವು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜನ ನೀಡುತ್ತದೆ.

### ಪೂರ್ಣಕುಂಭಮೇಳದ ಸಂದೇಶ

ಪೂರ್ಣಕುಂಭಮೇಳವು ಪವಿತ್ರತೆಯ ಪ್ರತೀಕವಾಗಿದ್ದು, ಇದು ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಮತ್ತು ಆಧ್ಯಾತ್ಮಿಕತೆ ಬೆಳೆಸುವ ಪ್ರಯತ್ನವಾಗಿದೆ. ಈ ಮೇಳವು ಶಾಂತಿ, ಏಕತೆ ಮತ್ತು ಪರೋಪಕಾರದ ಮಹತ್ವವನ್ನು ಭಕ್ತರಲ್ಲಿ ನೆಲೆಗಟ್ಟುತ್ತದೆ. ಪೂರ್ಣಕುಂಭಮೇಳವು ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಜಗತ್ತಿಗೆ ಪರಿಚಯಿಸುವ ಮಹತ್ವದ ತಾಣವಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003